TIGHT BINDING BOOK

# ಭೈರವಿ

ಶರಚ್ಚಂದ್ರರ ಸರಸ ಸುಂದರವಾದ

ಇನ್ನೊಂದು ಕಾದಂಬರಿ

ಸುಮಾರು ೨೫೦ ಪುಟಗಳು

ಅಚ್ಚಿನಲ್ಲಿದೆ

UNIVERSAL LIBRARY
OU_198139
UNIVERSAL LIBRARY

ಸರಸ್ವತಿ ಗ್ರಂಥಮಾಲೆಯ ಮೊದಲನೆ ಕುಸುಮ

# ಹಚ್ಚಾವುದು ?

(ಕಥಾಸಂಗ್ರಹ)

---

ಲೇಖಕರು :
ಶ್ರೀ "ರಘು"

---

ಪ್ರಕಾಶಕರು :
**ಸರಸ್ವತಿ ಪುಸ್ತಕ ಭಂಡಾರ**
ಮಂಡ್ಯ

ಮೊದಲನೆಯ ಮುದ್ರಣ

೧೯೩೯

**ಬೆಲೆ ಆರಾಣೆ**

ಮ. ಸು. ಶ್ರೀನಿವಾಸರಾಯ
ಸಂಚಾಲಕ ಮತ್ತು ಪ್ರಕಾಶಕ
ಸರಸ್ವತಿ ಪ್ರಕಟನಾಲಯ
ಮಂಡ್ಯ

ಸಲಹೆಗಾರರ ಮಂಡಳಿ :

ಶ್ರೀ ನಾ. ಕಸ್ತೂರಿ, ಎಂ.ಎ., ಬಿ.ಎಲ್.
,, ಎ. ಎನ್. ಮೂರ್ತಿರಾವ್, ಎಂ.ಎ.
,, ಬಿ. ಎನ್. ರಂಗಸ್ವಾಮಿ
,, ಜಿಡಿ ರಂಗರಾವ್, ಬಿ.ಎ., ಎಲ್.ಎ.ಜಿ.

★

ಎಲ್ಲಾ ಹಕ್ಕುಗಳೂ ಕಾದಿಡಲ್ಪಟ್ಟಿವೆ.

★

ಬೆಂಗಳೂರು ಸಿಟಿ ಚಿಕ್ಕಪೇಟೆ ಸೌರಾಷ್ಟ್ರ ಪ್ರೆಸ್
ಮಾಲೀಕರಾದ
ಎಸ್. ನರಸಿಂಹಯ್ಯನವರಿಂದ
ಮುದ್ರಿಸಲ್ಪಟ್ಟಿತು

# ಎರಡು ಮಾತು

ಈಗ ಕೆಲವು ವರ್ಷಗಳ ಕೆಳಗೆ ಬೆಂಗಳೂರಿನಲ್ಲಿ ನಡೆದ ಸಣ್ಣ ಕತೆಗಳ ಬರಹಗಾರರ ಸಮ್ಮೇಳನಕ್ಕೆ ನನಗೂ ಆಹ್ವಾನ ಬಂದಿದ್ದಿತು. ಆಗ ನಾನು ಓದಿದುದೇ "ಹೆಚ್ಚಾವುದು ?" ಅಂದಿನ ಅಧ್ಯಕ್ಷರು ಸಣ್ಣ ಕತೆಗಳ 'ಶ್ರೀನಿವಾಸ'ರೇ ! "ಹೆಚ್ಚಾವುದು ?" ಅಧ್ಯಕ್ಷರ ಪ್ರಶಂಶೆಗೆ ಪಾತ್ರವಾದುದು ನನಗೆ ಹೆಮ್ಮೆಯ ವಿಷಯ.

ಇದಾದ ಕೆಲವು ತಿಂಗಳ ನಂತರ 'ಶ್ರೀನಿವಾಸ' ರಿಂದ ಆಗತಾನೇ ಪ್ರಕಟಿತವಾದ ಅವರ 'ಸಣ್ಣಕತೆ' ಗಳ ಪುಸ್ತಕವೂ, ಜೊತೆಯೇ ಕಾಗದವೊಂದೂ ನನಗೆ ಬಂದಿತು.

'ನೀವು ಆಗಸ್ಟ್ ತಿಂಗಳಲ್ಲಿ ಕಳುಹಿಸಿಕೊಟ್ಟ ಕತೆಯೂ ಪುಸ್ತಕವೂ ('ಹೆಚ್ಚಾವುದು ?') ಜೊತೆಗೆ ಬರೆದ ಕಾಗದವೂ ಬಂದವು. ನಿಮ್ಮ ವಿಶ್ವಾಸದ ಮಾತಿನಿಂದ ನನಗೆ ಬಹಳ ಸಂತೋಷವಾಗಿದೆ.

ನೀವು ಇದೇ ರೀತಿ ಮುಂದೂ ಕೆಲಸ ಮಾಡಿ ೧೦-೧೨ ಕತೆಗಳನ್ನಾದರೂ ಸೇರಿಸಿ ಒಂದು ಪುಸ್ತಕವನ್ನು ಪ್ರಕಟಿಸಬೇಕು. ಅದನ್ನು ಎಂದು ಮಾಡುವಿರೊ ಎಂದು ನಾನು ನಿರೀಕ್ಷಿಸುತ್ತಿರುತ್ತೇನೆ.

ಅವರ ಅಂದಿನ ಪ್ರೋತ್ಸಾಹವೂ, ಮಿತ್ರರ ಆಗ್ರಹವೂ, ಇದೀಗ ಪ್ರಕಟವಾಗಲು ಕಾರಣವಾಗಿದೆ.

ಇದರಲ್ಲಿನ ಕತೆಗಳು, 'ಪ್ರಬುದ್ಧ ಕರ್ಣಾಟಕ', 'ಕಥಾಂಜಲಿ', 'ಕತೆಗಾರ', 'ಭಾರತಿ', 'ಅರುಣೋದಯ', 'ಪ್ರಜಾಮತ', ವಿಶೇಷ ಸಂಚಿಕೆಯಲ್ಲಿಯೂ, 'ಹೆಚ್ಚಾವುದು?' ತೆಲುಗಿಗೆ ಪರಿವರ್ತಿತವಾಗಿ 'ಚಿತ್ರಗುಪ್ತ'ದಲ್ಲಿಯೂ ಬಂದಿವೆ. ಅವುಗಳನ್ನು ಪ್ರಕಟಿಸಿದ ಸಂಪಾದಕರಿಗೆ ನಾನು ಕೃತಜ್ಞನಾಗಿದ್ದೇನೆ.

ಎಲ್ಲಾ ಕತೆಗಳಲ್ಲಿಯೂ 'ದೈವಲೀಲೆಗಿಂತ ಹೆಚ್ಚಾವುದು?' ಎಂದೇ ತಿಳಿದು ಬರುವುದರಿಂದ ಈ ಸಂಗ್ರಹಕ್ಕೂ 'ಹೆಚ್ಚಾವುದು?' ಎಂದೇ ಹೆಸರಿಡಲಾಗಿದೆ.

ಇದನ್ನು ತಮ್ಮ ಗ್ರಂಥಮಾಲೆಯ ಮೊದಲ ಪುಸ್ತಕವನ್ನಾಗಿ ಹೊರಡಿಸಿರುವ ಶ್ರೀಮಾನ್ ಮ. ಸು. ಶ್ರೀನಿವಾಸರಾಯರಿಗೂ ನನ್ನ ಕೃತಜ್ಞತೆಯನ್ನು ಸೂಚಿಸಬಯಸುತ್ತೇನೆ.

ಸಕ್ಕರೆ ಕಾರ್ಖಾನೆ, ಮಂಡ್ಯ.<br>
ಪ್ರಮಾಥಿ ಸಂ॥ ಚೈತ್ರ ಶು॥ ಪ್ರತಿಪದಾ.

"ರಘು."

# ಪ್ರಕಾಶಕರ ನುಡಿ

ಕರ್ನಾಟಕದ ಇತರ ಭಾಗಗಳಲ್ಲಿ ಅನೇಕ ಗ್ರಂಥಮಾಲೆಗಳಿವೆ. ಮೈಸೂರು ಸಂಸ್ಥಾನದಲ್ಲಿ ಗ್ರಂಥಮಾಲೆಗಳು ಕಡಿಮೆ. ಆದುದರಿಂದ ಈ ಹೊಸ ಉದ್ಯಮವನ್ನು ಕೈಗೊಂಡು "ಸರಸ್ವತಿ ಗ್ರಂಥಮಾಲಾ" ಎಂಬ ಹೆಸರಿನಿಂದ ಸುಲಭ ಗ್ರಂಥಮಾಲೆಯನ್ನು ಹೊರಡಿಸುವ ಸಾಹಸವನ್ನು ಮಾಡಿದ್ದೇವೆ. ಪ್ರತಿ ವರ್ಷದಲ್ಲಿ "ಲಲಿತ ವಾಙ್ಮಯ"ದ ನಾಲ್ಕು ಗ್ರಂಥಗಳನ್ನು ಕೊಡಬೇಕೆಂದು ನಿರ್ಧರಿಸಿದ್ದೇವೆ. ಕನ್ನಡ ಪ್ರೇಮಿಗಳೆಲ್ಲರ ಕೈಸೇರಲೋಸುಗ ಸುಲಭ ಚಂದಾ ಇಟ್ಟಿದ್ದೇವೆ. ಈ ಗ್ರಂಥಮಾಲೆಯ ಮೊದಲನೆಯ ಕುಸುಮವಾದ ಶ್ರೀ "ರಘು"ರವರ ಕಥಾಸಂಗ್ರಹವನ್ನು ತಮ್ಮ ಮುಂದಿಟ್ಟಿದ್ದೇವೆ. ಉದಾರಹೃದಯರಾದ ಕನ್ನಡ ಪ್ರೇಮಿಗಳೆಲ್ಲರೂ ಇವಕ್ಕೆ ಸುಸ್ವಾಗತವನ್ನು ಬಯಸಿ, ಗ್ರಂಥಮಾಲೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಈ ಗ್ರಂಥಮಾಲೆಯ ಸಲಹೆಗಾರರ ಮಂಡಲದ ಸದಸ್ಯರಾಗಿ ನನಗೆ ಬೆಂಬಲವಿತ್ತ ಶ್ರೀ ನಾ. ಕಸ್ತೂರಿ, ಎಂ.ಎ., ಬಿ.ಎಲ್., ಎ. ಎನ್. ಮೂರ್ತಿರಾವ್, ಎಂ.ಎ., ಬಿ. ಎನ್. ರಂಗಸ್ವಾಮಿ, ಜೆಡೆ ರಂಗರಾವ್, ಬಿ.ಎ., ಎಲ್.ಎ.ಜಿ. ಇವರುಗಳಿಗೆ ನಾನು ಚಿರಋಣಿಯಾಗಿದ್ದೇನೆ.

ಗ್ರಂಥಮಾಲೆಯಲ್ಲಿ ಜೋಡಿಸಲು ಗ್ರಂಥವನ್ನು ಕೊಟ್ಟು ಪ್ರೋತ್ಸಾಹಿಸಿದುದಕ್ಕಾಗಿ ಶ್ರೀಮಾನ್ "ರಘು"ರವರಿಗೆ ತುಂಬಾ ಕೃತಜ್ಞನಾಗಿದ್ದೇನೆ.

ಈ ಪುಸ್ತಕವನ್ನು ಅಚ್ಚು ಹಾಕುವುದರಲ್ಲಿ ನೆರವಾದ ಶ್ರೀ ಗುರುನಾಥ ಜೋಶಿಯವರಿಗೂ, ಅತ್ಯಲ್ಪಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಸೌರಾಷ್ಟ್ರ ಪ್ರೆಸ್ ಮಾಲೀಕರಾದ ಎಸ್. ನರಸಿಂಹಯ್ಯನವರಿಗೂ ಈ ಉದ್ಯಮದಲ್ಲಿ ನನಗೆ ನೆರವಾದ ನನ್ನ ಎಲ್ಲಾ ಮಿತ್ರರಿಗೂ ಕೃತಜ್ಞನಾಗಿದ್ದೇನೆ.

—ಮ. ಸು. ಶ್ರೀ.

# ತಾಯುನೆಸಪಿಗಾಗಿ

—"ರಘು"

# ಸರಸ್ವತಿ ಗ್ರಂಥಮಾಲಾ

**ಮಂಡ್ಯ, (ಮೈಸೂರು ಸಂಸ್ಥಾನ)**

---

ವರ್ಷದಲ್ಲಿ ಸುಮಾರು ೮೦ ಪುಟಗಳ ಲಲಿತ ವಾಙ್ಮಯದ

**ನಾಲ್ಕು ಗ್ರಂಥಗಳು**

**ಪೋಷಕರು** ೫—೦—೦ **ಚಂದಾ** ೧—೮—೦

---

ಅರಳಿದ ಕುಸುಮ—

ಶ್ರೀ "ರಘು" ರವರ

**ಹೆಚ್ಚಾವುದು ?**

ಅರಳಲಿರುವ ಕುಸುಮಗಳು—

ಮೈಸೂರು ವಿಶ್ವವಿದ್ಯಾಲಯದ ಚರಿತ್ರೆಯ ಉಪನ್ಯಾಸಕರಾದ

ಶ್ರೀ ನಾ. ಕಸ್ತೂರಿ, ಎಂ.ಎ., ಬಿ.ಎಲ್., ರವರ

**ಯದ್ವಾ - ತದ್ವಾ**

ಸುಪ್ರಸಿದ್ಧ ಹಳ್ಳಿಯ ಪದಗಳ ಸಂಗ್ರಾಹಕರಾದ

ಶ್ರೀ ಬಿ. ಎಸ್. ರಂಗಸ್ವಾಮಿರವರ

**ಹಳ್ಳಿಯ ಪದಗಳು**

# ಹೆಚ್ಚಾವುದು ?

" More things are wrought by Prayer than this World dreams of "

—*Tennyson*

---

" ಸ್ವಾಮೀ............ಸ್ವಾಮೀ "

" ಯಾರದು ? "

" ರಾಯರಿದ್ದಾರೇನಮ್ಮಾ ? "

ಶಾರದ ಬಾಗಿಲು ತೆಗೆದು ನೋಡಿದಳು. ಹಳ್ಳಿಯ ಹೆಂಗುಸೊಬ್ಬಳು ನಿಂತಿದ್ದಾಳೆ. ಅವಳ ಮುಖ ನೋಡಿದರೆ ಏನೋ ದುಃಖದಿಂದ ಕಣ್ಣೀರು ತುಂಬಿದೆ. ಶಾರದಾಳ ಮನಸ್ಸು ಕರಗಿ,

" ಬಾಮ್ಮ, ಕುಳಿತುಕೋ : ಬರ್ತಾರೆ " ಎಂದು ಒಳಗೆ ಹೋದಳು.

" ಸಂಜೆ ಆರು ಘಂಟೆಯಾದರೂ ಪುರುಸತ್ತು ಬೇಡವೇ ? ಈ ದರಿದ್ರ ಹಳ್ಳಿಯವರಿಗೆ ಏನೂ ತಿಳಿಯುವುದಿಲ್ಲ " ಎಂದು ಗೊಣಗುಟ್ಟುತ್ತಾ ರಂಗ ರಾಯರು ಹೊರಗೆ ಬಂದರು. ಮುಖದಲ್ಲಿ ಜಿಗುಪ್ಸೆ. ಅವಳೊಂದಿಗೆ 'ವಾಕಿಂಗ್' ಹೊರಡಬೇಕೆಂದಿದ್ದವರಿಗೆ ಈತರಹೆಯ ಅಡ್ಡಿ ಬಂದಿತಲ್ಲಾ ಎಂದು.

" ಸ್ವಾಮಿ, ನನ್ನ ಹಸ..........."

" ಏನು! ನಿನ್ನ ಹಸ. ಈಗೇನು ಮಾಡಲಿಕ್ಕಾಗುತ್ತೆ. ಈಗ ಆಸ್ಪತ್ರೆ ಬಾಗಿಲು ಹಾಕಿದೆ. ನಾಳೆ ಬೆಳಿಗ್ಗೆ ಬಾ ನೋಡೋಣ " ಎಂದರು ರಾಯರು.

" ಏನೋ ಬಲು ಒದ್ದಾಡ್ತೈತ್ರಿ. ಅದು ಗಬ್ಬ ಆಗಿ ೮–೯ ತಿಂಗಳಾಗಿರ ಬಹುದ್ರಿ. ಯಾವಾಗ್ಲೂ ಇಂಗೇನೇ " ಎಂದಳು.

“ಸರಿ, ಗೊತ್ತಾಯಿತು. ಪರವಾಯಿಲ್ಲ. ನಾಳೆ ಬಾ” ಎಂದು ರಾಯರು ಒಳಗೆ ಹೊರಟರು.

“ಬಲು ಒದ್ದಾಡ್ತವೆ. ಸ್ವಲ್ಪ ನೋಡಿ ಹೋಗು ನನ್ನೊಡೆಯಾ. ಏನೋ ನಂಗೆ ದಿಗಿಲಾಗ್ತದೆ” ಎಂದು ಅಳತೊಡಗಿದಳು. ಅವಳು ತಡೆದ ದುಃಖವೆಲ್ಲಾ ಹರಿಯಿತು. ಹತ್ತಿರಲೇ ನಿಂತು ಕೇಳುತ್ತಿದ್ದ ಶಾರದೆಗೂ ತಡೆಯಲಾಗದೆ ಕಣ್ಣಲ್ಲಿ ನೀರು ಬಂತು. ಎಷ್ಟಿದ್ದರೂ ಹೆಣ್ಣು ಜನ್ಮ. ಹೆಂಗಸಿನ ಕಷ್ಟ, ಸುಖದುಃಖಗಳು ಹೆಂಗಸಿಗೆ ತಿಳಿಯಲಾರದೇ ಹೋಗುತ್ತವೆಯೇ?

“ಸ್ವಲ್ಪ ಹೋಗಿ ನೋಡಿ ಬರಬಾರದೇ? ಎಂದಳು ಶಾರದ.

“ಈಗೇನು ಮಾಡಲಿಕ್ಕಾಗುತ್ತೆ ಶಾರದ” ಎಂದು ರಾಯರಂದರು.

“ಹೆಂಗಸಿನ ಕಷ್ಟ ನಿಮಗೆ ತಿಳಿಯೊಲ್ಲ. ಸೊಲ್ಪ ನೋಡಿಕೊಂಡು ಬನ್ನಿ.”

“ಡಾಕ್ಟರಿಗೂ ತಿಳಿಯದ ವಿಷಯ ಯಾವುದು?” ಎಂದರು ರಾಯರು ಸ್ವಲ್ಪ ‘ಅಹಂ’ ನಿಂದಲೇ.

ಅಂತಹವೂ ಇವೆ.

‡ ‡ ‡

ಕೊನೆಗೆ ರಾಯರು ಹೊರಟರು. ಎಷ್ಟು ಬೇಡವೆಂದರೂ ಕೇಳದೆ ಶಾರದಾನೂ ಹೊರಟಳು. ಹತ್ತಿರಲೇ ಆಸ್ಪತ್ರೆ. ಚಿಕ್ಕ ಹುಡುಗಿಯೊಬ್ಬಳು ಹಸು ಒಂದನ್ನು ಹಿಡಿದು ನಿಂತಿದ್ದಾಳೆ. ಚಿಕ್ಕ ಹುಡುಗಿಗೂ ಅಳು. ಆ ಹಸುವಿನ ಯಾತನೆಯನ್ನು ನೋಡಲಾರದೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಾಳೆ. ಹಸುವಿನ ಯಾತನೆಯೋ ಸಹಿಸಲಸಾಧ್ಯ. ಗರ್ಭಕೋಶವು ಹೊರಗೆ ಬಂದಿದೆ. ಯಾವ ನಿಮಿಷದಲ್ಲಾದರೂ ಗರ್ಭಸ್ರಾವವಾಗಬಹುದು. ಇದನ್ನು ನೋಡಲಾರದೆ ಶಾರದೆ ಕಣ್ಮುಚ್ಚಿ ಕುಳಿತಳು.

ರಾಯರು ನೋಡಿ ಹಸುವಿನ ಆಸೆಯು ತೀರಿತೆಂದೇ ತಲೆ ಅಲ್ಲಾಡಿಸಿ ಬಿಟ್ಟರು.

" ಸ್ವಾಮಿ, ಇದೊಂದು ನನ್ನ ಜೀವ. ಇದರಿಂದಾನೇ ಜೀವನ. ಏನಾದರೂ ಮಾಡಿ ನನ್ನ ಮಗಳ್ನ ಉಳಿಸು ನನ್ನೊಡೆಯಾ " ಎಂದು ಗೋಳಿಟ್ಟಳು.

" ಈಗ ಏನು ಮಾಡೋಕೂ ಆಗೋ ಕಿಲ್ಲ; ಇದು ಉಳಿಯೋದು ಬಿಡೋದು ನಿನ್ನ ಪುಣ್ಯ " ಎಂದರು.

" ಏನಾರಾ ಮಾಡಪ್ಪ. ದೇವರು ಒಳ್ಳೇದು ಮಾಡ್ತಾನೆ, ನನ್ನಪ್ಪ " ಎಂದಳು. ಅವಳ ದುಃಖ ಯಾರಿಗೂ ನೋಡಲಾಗಲಿಲ್ಲ. ಪಕ್ಕದಲ್ಲಿದ್ದ ಆಸ್ಪತ್ರೆ ಜವಾನನ ಕಣ್ಣಲ್ಲೂ ನೀರು.

" ಏನು? " ಎಂದಳು ಶಾರದ.

" ಅದು ಬದುಕೋದಿಲ್ಲ ಶಾರದ. "

" ಅಯ್ಯೊ, ಹಾಗಂದ್ರೆ! "

" ಹಾಗಂದ್ರೆ ನಾನೇನು ಮಾಡಲಿಕ್ಕಾಗುತ್ತೆ. ಇಂಥಾದ್ದೆಲ್ಲಾ ಬದುಕೋ ದಲ್ಲ. "

‡ ‡ ‡

ತಟ್ಟನೆ ಹಸು ಮಲಗಿ ' ಅಂಬೇ ' ಎಂದರಚಿ ದೈನ್ಯದಿಂದ ನೋಡಿತು ' ಶಿವ ಶಿವಾ ' ಎಂದಳುತ್ತಾ ಹಳ್ಳಿಯುವಳು ಕಣ್ಣು ಮುಚ್ಚಿದಳು. ಪಕ್ಕದಲ್ಲಿದ್ದ ಚಿಕ್ಕ ಹುಡುಗಿಯ ಅಳು ಜೋರಾಯಿತು. ಶಾರದ ' ಅಯ್ಯೋ! ' ಎಂದು ನಡುಗಿದಳು. ರಾಯರಿಗೂ ಹೆದರಿಕೆಯಾಗಿ ತಟ್ಟನೆ ಹಸುವಿನ ಬಳಿ ಓಡಿದರು. ಏನು ಮಾಡಲಾದೀತು! ಹಸುವಿಗೆ ವೇದನೆಯ ದುಃಖ ವಿಪರೀತ. ಕಾಲು ಹೊಡೆಯುತ್ತಿದೆ. ' ಅಂಬೇ ' ಎಂದು ದುಃಖದಿಂದ ಅರಚುತ್ತಿದೆ.

" ದೇವರೇ, ಶಿವನೇ ನೀನೇ ಗತಿಯಪ್ಪ " ಎಂದು ಹಳ್ಳಿಯುವಳು ಮೊರೆಯಿಟ್ಟಳು. ಈ ಮೊರೆಯು ದೇವರಿಗೆ ಕೇಳಿಸಿರಬಹುದೆ? ಕರು ಹೊರಗೆ ಬರಲಾರದೆ ತಾಯಿಗೆ ತೊಂದರೆಯಾಗಲಾರಂಭಿಸಿತು.

" ಹಸು ಉಳಿಯಲ್ಲ. ಕರು ಉಳಿದರೂ ಉಳೀಬಹುದು. ನನ್ನ ಕೈಲಾದ್ದು ಮಾಡ್ತೇನೆ " ಎಂದು ಹೇಳಿದರು.

" ಅಯ್ಯೋ ಶಿವನೇ ! ನನ್ನ ಮಗಳನ್ನ ಎಂಗಾರ ಉಳಿಸಪ್ಪ " ಎಂದಳು.

ರಾಯರೂ ಯತ್ನಿಸಿದರು. ಹಸುವಿನ ಮೇಲಣ ಆಶೆಯನ್ನು ಬಿಟ್ಟು ಶಸ್ತ್ರ ಚಿಕಿತ್ಸೆ (operation) ಮಾಡಿ ಹೊರಗೆ ಕರು ತೆಗೆದರು. ದೈವ ಮಾಯೆ. ಕರುವೂ, ಹಸುವೂ ಎರಡೂ ಬದುಕಿದವು.

" ದೇವರು ದೊಡ್ಡವನಪ್ಪ. ನಿನ್ನ ವಂಶ ತಣ್ಣಗಿರಲಿ ನನ್ನಪ್ಪಾ " ಎಂದು ಹೇಳಿ ಪುನಃ ಸಂತೋಷದ ಅಳು ಅತ್ತಳು. ಈ ಸಮಾಚಾರ ಕೇಳಿ ಶಾರದೆಗೂ ಹಿಡಿಸಲಾರದಷ್ಟು ಸಂತೋಷವಾಯಿತು.

‡ ‡ ‡

ಹೆರಿಗೆಯ ಆಸ್ಪತ್ರೆಯ ಬಾಗಿಲಬಳಿ ರಾಯರು ಕಾತರರಾಗಿ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದಾರೆ. ಏನೋ ಯೋಚನೆ. ಎಲ್ಲೋ ಧ್ಯಾನ. ಸ್ವಲ್ಪ ಶಬ್ದವಾದರೆ ಬಾಗಿಲ ಕಡೆ ನೋಡುವರು. ಕೊನೆಗೆ ಬಾಗಿಲು ತೆರೆದು 'ನರ್ಸ್' ಹೊರಗೆ ಬಂದಳು.

" ಏನು? " ಎಂದರು ರಾಯರು.

" ಏನೂ ಹೇಳಲಾಗುವುದಿಲ್ಲ. ಬಹಳ ಕಷ್ಟ. ತಾಯಿಗೋ, ಮಗುವಿಗೋ ಪ್ರಾಣಾಪಾಯ. "

ರಾಯರು ಅಲ್ಲಿಯೇ ತಲೇಮೇಲೆ ಕೈಯಿಟ್ಟು ಕುಳಿತುಬಿಟ್ಟರು. ಅವರಿಗೆ ಏನುಮಾಡಲೂ ತೋಚದು. ಎದೆಯ 'ಡಬ ಡಬ' ಶಬ್ದ ಹೆಚ್ಚಾಗಿದೆ. ಬಾಗಿಲ ಕಡೆಯೇ ನೋಡುತ್ತಿದ್ದಾರೆ. ಕಾಲು ಗಂಟೆಯಾಯಿತು. ಅರ್ಧ ಗಂಟೆಯಾಯಿತು. ಪ್ರತಿಯೊಂದು ನಿಮಿಷವೂ ರಾಯರಿಗೆ ಯುಗವಾಗಿ ತೋರಿತು. ತಟ್ಟನೆ ಒಳಗೆ ಅಳುವಿನ ಶಬ್ದ............ಚೀತ್ಕಾರ.... ....... ಪುನಃ ಅಳು...........ನಿಶ್ಶಬ್ದ: ಅಳುವಿನ ಶಬ್ದ ಹೆಚ್ಚಾದಾಗ ಉದ್ವೇಗದಿಂದ ಆ ಕಡೆಯೇ ಓಡಿದ ರಾಯರು ನಿಶ್ಶಬ್ದವಾದೊಡನೆಯೇ ಅವರ ಮುಖ ಬಿಳುಪೇರಿ ಹಾಗೆಯೇ ಗೋಡೆಗೊರಗಿದರು. ಸ್ವಲ್ಪ ಹೊತ್ತಿನಮೇಲೆ ಬಾಗಿಲು ತೆರೆಯಿತು.

" ತಾಯಿ ಬದುಕಿದರು ಸಾರ್. "

" ಮಗೂ! "

" ಸಾರಿ (sorry) ಸಾರ್. "

ಶಾರದ, ಆಸ್ಪತ್ರೆಯಿಂದ ಮನೆಗೆ ಬಂದ ದಿವಸವೇ ಆ ಹಳ್ಳಿಯ ಹೆಂಗಸಿಗೆ ಹೇಳಿ ಕಳುಹಿಸಿ ಸೀರೆ ಕುಪ್ಪಸಗಳನ್ನು ಕೊಟ್ಟು ಆದರಿಸಿದಳು ಆಸ್ಪತ್ರೆಗೆ ಹೋಗಿದ್ದ ರಾಯರು ಬಂದಮೇಲೆ.

" ನೋಡಿದಿರಾ ! ಅವಳ ಭಕ್ತಿಯನ್ನ. ಅವಳ ಮೊರೆ ಕೇಳಿಸಿ ದೇವರು ಹಸು, ಕರು ಎರಡನ್ನೂ ಉಳಿಸಿದ. ನಮಗೆ ಆ ಭಕ್ತಿ ಇಲ್ಲದೇ ಹೋಯಿತಲ್ಲ " ಎಂದಳು.

" ಹೋಗಲಿ ಬಿಡು, ಶಾರದ. ಇನ್ನು ಏನು ಯೋಚನೆ " ಎಂದರು ರಾಯರು.

" ದೇವರನ್ನು ಒಲಿಸಿಕೊಂಡ ಅವಳೇ ಪುಣ್ಯವಂತೆ. ಅದಕ್ಕೂ ಹೆಚ್ಚಿನ ವರವು ? ಅದಕ್ಕೂ ಹೆಚ್ಚಿನವುದು ? " ಎಂದಳು.

ರಾಯರು ಏಕೋ ತಲೆ ತಗ್ಗಿಸಿಬಿಟ್ಟರು.

---

# ಸ ರ ಸಾ ಕ ಕ್ಕಿ

ಹಾಸ್ಟಲಿನ ಮಾಮೂಲಿಗಿಂತ ಬಲು ಜಾಗ್ರತೆಯಾಗಿಯೇ ಎದ್ದಿದ್ದೆ. ಎದ್ದು ಸ್ನಾನಮಾಡಿ ಸ್ವಲ್ಪಹೊತ್ತು ಓದಿದೆ. ಆ ದಿವಸ ಮನಸ್ಸಿಗೆ ಏನೋ ಒಂದು ತರಹ ಸಂತೋಷ. ಸೂರ್ಯೋದಯದಲ್ಲೂ ಏನೊಂದೋ ತರದ ಉಲ್ಲಾಸ. ಸುತ್ತುಮುತ್ತಲೂ ಎಲ್ಲೆಲ್ಲೂ ಒಂದು ಆನಂದದ ಚಿಹ್ನೆ. ನಾವು ಸಂತೋಷದಲ್ಲಿದ್ದರೆ ಮಿಕ್ಕೆಲ್ಲವೂ ನಮ್ಮ ಹಾಗೆಯೇ ಸಂತೋಷದಲ್ಲಿರುವ ಹಾಗೆ ತೋರುವವೆಂದು ಕಾಣುತ್ತದೆ.

ಎಂಟು, ಎಂಟೂವರೆ ಗಂಟೆ ಆಗಿರಬೇಕು. ಕಾಫೀ ಗೀಫೀ ಎಲ್ಲಾ ಮುಗಿಸಿಕೊಂಡು ಬಂದು ಓದುತ್ತಾ ಕುಳಿತುಕೊಂಡೆ. ಎಂದೂ ಇಲ್ಲದ ಆಸಕ್ತಿ ಇವತ್ತು ಅದರಲ್ಲಿ. ಓದುವುದಕ್ಕೆ ಪ್ರಾರಂಭಿಸಿ ಇನ್ನೂ ಹತ್ತು ನಿಮಿಷ ಆಗಿರಲಿಲ್ಲ. ಅಷ್ಟು ಹೊತ್ತಿಗೆ ಸಾಮಿ ಬಂದ. ಸಾಮಿ ನಮ್ಮ ಸೋದರತ್ತೆಯ ಮಗ. ಇನ್ನೂ ಹತ್ತು ವರ್ಷ ಅಷ್ಟೆ. ಇರುವುದು ಮಲ್ಲೇಶ್ವರದಲ್ಲಿ.

"ಬಾ ಸಾಮಿ, ಕುಳಿತುಕೋ. ಏನು ಬೆಳಗಾಗೋತಲೂ ಬಂದೆ?" ಎಂದೆ.

"ಅಜ್ಜಿ, ಸರಸತ್ತೆ ಇಬ್ಬರೂ ಈಗತಾನೇ ಬಂದರು. ನಿನಗೆ ಪುರುಸೊತ್ತಾದರೆ ಸಾಯಂಕಾಲ ಬಂದು ಹೋಗಬೇಕಂತೆ."

"ಯಾರು ಸರಸಾಕಕ್ಕೀನೇ? ಬೊಂಬಾಯಿಂದ ಬಂದಳೇ?"

"ಹುಂ"

"ಇನ್ನೇನು ಸಮಾಚಾರ? ಬಾ ಸ್ವಲ್ಪ ಕಾಫಿ ಕುಡುಕೊಂಡು ಹೋಗು. ನಿಮ್ಮತ್ತೆ."

⁂

ಸರಸಾ ಕಕ್ಕೀನ ನೋಡಿ ಬಹಳ ವರ್ಷ ಆಗಿತ್ತು. ಆದ್ದರಿಂದಲೇ
ಅವಳು ಬಂದದ್ದು ಕೇಳಿ ನನಗೆ ಬಹಳ ಸಂತೋಷ. " ಇದಕ್ಕಾಗಿಯೇ ಬೆಳಗಿ
ನಿಂದಲೂ ಸಂತೋಷದಲ್ಲಿದ್ದುದು ! " ಎಂದುಕೊಂಡೆ.

ಅವರನ್ನು ನೋಡಬೇಕೆಂಬ ಕುತೂಹಲ. ರಾತ್ರಿಯೆಲ್ಲಾ ನಿದ್ದೆಗೆಟ್ಟು
ಬಂದಿದ್ದಾರೆ: ಕಡೆಯಪಕ್ಷ ಮೂರು ಗಂಟೆಗಿಂತ ಮುಂಚೆ ಹೋಗುವುದಾದರೂ
ಹೇಗೆಂದು ಬಲು ಬಿಗಿ ಹಿಡಿದು ಕುಳಿತೆ. ಓದಲು ಪ್ರಾರಂಭಿಸಿದೆ. ಆದ
ಅದರಲ್ಲಿ ಕಕ್ಕಿ. ಅವಳ ಸೌಮ್ಯ ರೂಪ, ಮುಗುಳು ನಗೆ, ಉಲ್ಲಾಸ, ನಾನು
ಚಿಕ್ಕವನಿದ್ದಾಗ ಅವಳಿಗೆ ನನ್ನನ್ನು ಕಂಡರೆ ಎಷ್ಟು ಮಮತೆ; ನಮಗೆ ಇನ್ನು
ಯಾರೂ ಜಡೆ ಹಾಕಕೂಡದು; ಸರಸಾ ಕಕ್ಕೀನೇ ಆಗಬೇಕು. ಜಡೆ ಹಾಕು
ತ್ತಿರುವಾಗ ಅವಳು ಕಥೆ ಹೇಳುವಳು. ಅದರಲ್ಲಿ ನಮಗೆ ಆಸಕ್ತಿ ಹೆಚ್ಚು.
ಅವಳಿಗೋ ಮಕ್ಕಳೆಂದರೆ ಪ್ರಾಣ. ಇವರ ಮಗುವಾದರೇನು ? ಅವರ ಮಗು
ವಾದರೇನು ? ಎಲ್ಲರೂ ಒಂದೇ. ಅವಳನ್ನು ನೋಡಿದವರೆಲ್ಲರೂ " ಈಗಲೇ
ಇತರೇಯವರ ಮಕ್ಕಳಮೇಲೆ ಇಷ್ಟು ಪ್ರೀತಿಯಾದರೆ, ಮುಂದೆ ತನ್ನ ಮಗ
ವನ್ನೇನು ನೆಲದಮೇಲೆ ನಡೆಯಲೂ ಸಹ ಬಿಡೋದಿಲ್ಲ ಅಂತ ಕಾಣುತ್ತೆ "
ಎಂದು ಹೇಳುತ್ತಿದ್ದುದು ಚೆನ್ನಾಗಿ ಜ್ಞಾಪಕದಲ್ಲಿದೆ. ಮನೆಗೆಲಸದಲ್ಲೋ
ಅಚ್ಚುಮೆಚ್ಚು. ನನ್ನ ತಂಗಿಯರನ್ನೂ ಎಷ್ಟೋಸಲ ನೋಡಿದ್ದೇನೆ. ಅವರು
ಎಷ್ಟೋಸಲ ಅಮ್ಮನ ಮಾತಿಗೆ ಪ್ರತಿ ಹೇಳಿದ್ದಾರೆ; ಬೇಡವೆಂದ ಕೆಲಸವನ್ನು
ಮಾಡಿದ್ದಾರೆ. ಆದರೆ ಸರಸಾ ಕಕ್ಕೀಗೆ ಅವರಮ್ಮನಲ್ಲಿ ಬಲುಪ್ರೀತಿ. ಅವಳು
ಅಮ್ಮನಿಗೆ ಪ್ರತಿಹೇಳಿದ ದಿನವಾಗಲೀ, ಅವಳ ತಾಯಿ ಅವಳನ್ನು ಬೈದದಿನ
ವಾಗಲೀ ನನಗೆ ತಿಳಿಯದು. ಚಿಕ್ಕಂದಿನಿಂದಲೂ ಬಲು ಜಾಣೆ. ಬಲು
ಬುದ್ಧಿವಂತೆ. ಅವರಿವರ ಮನೆಗೆ ಅರಿಸಿನಕುಂಕುಮಕ್ಕೆ ಹೋಗಿದ್ದಾಗ ಅಲ್ಲಿ
ಹೇಳಿದ ಹಾಡನ್ನು ಒಂದು ಸಲ ಕೇಳಿದರೆ ಸಾಕು, ಹೇಳುವಳಂತೆ. ಹೀಗೆ
ಅವಳಿದ್ದರೀತಿ, ಮುಖ್ಯ ಆ ನಗುಮುಖ ಪದೇಪದೇ ಜ್ಞಾಪಕಕ್ಕೆ ಬರತೊಡಗಿತು.

ಹೊರಡುವ ಹೊತ್ತಿಗೆ ಸರಿಯಾಗಿ, ಕಾಲೇಜು ಟವರಿನಲ್ಲಿ ಮೂರು
ಘಂಟೆ ಹೊಡೆಯಿತು. ಯಾವಾಗ ಸೈಕಲ್ ಹತ್ತಿದೆನೋ, ಎಲ್ಲಿಲ್ಲಿ ತಿರುಗಿ
ಬರುತ್ತಿದ್ದೆನೋ, ದಾರಿಯಲ್ಲಿ ಏನಾಗುತ್ತಿತ್ತೋ ಒಂದೂ ತಿಳಿಯದು. ನನ್ನ

ಮನಸ್ಸೆಲ್ಲಾ ಆ ನನ್ನ ಸರಸಾ ಕಕ್ಕಿಯಲ್ಲಿ. 'ಆಗ್ಗೂ ಈಗ್ಗೂ ನಾನಂತೂ ಘಡಿಯನಾಗಿಬಿಟ್ಟೆ. ಬಹುಶಃ ಗುರುತೂ ಸಿಕ್ಕದಿರಬಹುದು; ಕಕ್ಕಿಗೂ ಬದಲಾಯಿಸಿರಬಹುದೇ?' ಎಂದು ಮುಂತಾದ ಯೋಚನೆ. ಅಂತೂ ದಾರಿಯಲ್ಲಿ ಹೋಗುತ್ತಿದ್ದೆ. ಶೇಷಾದ್ರಿಪುರ, ಮಹಾರಾಜಾ ಮಿಲ್ಸ್, ಕೃಷ್ಣಾ ಬಿಲ್ಡಿಂಗ್ಸ್ ಒಂದೊಂದೇ ಬಂದು ಹೋದ ಹಾಗೆಲ್ಲಾ ನನ್ನ ಹೃದಯವೂ ಹೊಡೆದುಕೊಳ್ಳಲು ಪ್ರಾರಂಭಿಸಿತು. ಅವರ ಮನೆಯ ರಸ್ತೆಗೆ ತಿರುಗಿದಾಗ ಅಂತೂ ಹೃದಯ ಗಂಟಲಲ್ಲಿ ಸಿಕ್ಕಿಕೊಂಡಹಾಗಾಯಿತು. ಮನೆಯ ಹತ್ತಿರಲೂ ಬಂದೆ. ಇದೇನು ಗಲಾಟೆಯೇ ಇಲ್ಲ! ಸರಸಾಕಕ್ಕಿ ಬಂದರೆ ಚಿಕ್ಕ ಹುಡುಗರ ತುಂಟಪಾಳ್ಯ ಬಂದು ಅಲ್ಲಿರಲೇಬೇಕು. ಅವಳಿಗೆ ಮಲಗಲೂ ಪುರುಸತ್ತಿಲ್ಲ. ಹೀಗಿರುವಾಗ ಗಲಭೆಯೇಕಿಲ್ಲ? ಬಹುಶಃ ಮಲಗಿರಬೇಕು. ಪಾಪ! ನಿದ್ದೆಗೆಟ್ಟು ಬಂದಿದ್ದಾರೆ. ಎಬ್ಬಿಸಲೋ ಬೇಡವೋ? ಅಥವಾ ಹಿಂತಿರುಗಿ ಹೋಗಿ ಸ್ವಲ್ಪ ಹೊತ್ತಾದಮೇಲೆ ಬರಲೋ? ಆದರೆ ಇಷ್ಟು ಹೊತ್ತಿಗಾಗಲೇ ಅವರ 'ಗೇಟ್'ನ ಹತ್ತಿರ ಬಂದಿದ್ದೆ.

ಇಷ್ಟು ಯೋಚನೆ ಮಾಡುತ್ತಾ ಇಳಿಯಲೋ ಬೇಡವೋ ಎಂದುಕೊಂಡು ಸೈಕಲ್ಲಿಂದ ಇಳಿದಿದ್ದಾಯಿತು. ಸೈಕಲ್ಲೂ ಕಾಂಪೌಂಡಿನಲ್ಲಿಟ್ಟೆ. ಒಳಗೆ ಕೈಸಾಲೆಯಲ್ಲಿ ಸರಸಾಕಕ್ಕಿ ಇದ್ದಳು. ಏನೋ ಯೋಚನೆ ಮಾಡುತ್ತಿದ್ದಂತೆ ತೋರಿತು. ನೋಡಿದಳು. ಆದರೆ ಮೊದಲಿನ ಆ ನಗುಮುಖವಿಲ್ಲ. ಆದರೂ ಆದರದಿಂದಲೇ ಇರಬೇಕು. ಹೌದು ಹೌದು, ಆದರದಿಂದಲೇ.

"ಏನು! ಗುರ್ತೇಸಿಗೋಹಾಗಿಲ್ಲ. ಚೆನ್ನಾಗಿದ್ದೀಯಾಪ್ಪ, ರಘು?" ಎಂದು ಕೇಳಿದಳು. ಏನೋ ಕಷ್ಟಪಟ್ಟು ಮಾತನಾಡುತ್ತಿರುವಹಾಗಿದೆಯಲ್ಲಾ ಎಂದುಕೊಂಡೆ.

"ಚೆನ್ನಾಗಿದ್ದೇನೆ. ಸುಖವಾಗಿ ಬಂದಿರಾ ಕಕ್ಕಿ? ನೋಡಿ ತುಂಬಾ ವರ್ಷ ಆಯಿತು."

"ಹೂನಪ್ಪ, ನೀವೂ ಆಕಡೆ ಬರಲಿಲ್ಲ; ನಮಗೂ ಈ ಕಡೆ ಬರಲಿಕ್ಕೆ ಇವರಿಗೆ ಪುರುಸತ್ತಾಗಲಿಲ್ಲ. ಅಮ್ಮ, ಅಣ್ಣ ಎಲ್ಲಾ ಚೆನ್ನಾಗಿದ್ದಾರೆಯೇನಪ್ಪಾ?"

"ಹುಂ. ಎಲ್ಲರೂ ಸುಖವಾಗಿದ್ದಾರೆ."

" ಎಲ್ಲಿ, ಇನ್ನೂ ತುಂಕೂರಲ್ಲೇ ಇದ್ದೀರಾ ? "

" ಯಾಕೆ ? ಆಗಲೇ ಮೈಸೂರಿಗೆ ವರ್ಗ ಆಯಿತೆಂದು ಬರೆದಿದ್ದೆವು. ಮರತೆಯೋ ಕಕ್ಕಿ ? "

" ಹೌದು, ಮರೆತೆ.... .. ....ಈಗ ಕಾವೇರಿ ಎಲ್ಲಿದ್ದಾಳೆ ? "

" ಕಲ್ಕತ್ತೆಯಲ್ಲಿದ್ದಾಳೆ. ನಾಳೆ ನಾಡಿದ್ದರಲ್ಲಿ ಅಣ್ಣ ಹೋಗಿ ಕರೆದು ಕೊಂಡು ಬರಬಹುದು. "

" ಈಗ ಅವಳಿಗೆಷ್ಟು ಮಕ್ಕಳು, ರಘು ? "

ಯಾಕೋ ತಲೆ ತಗ್ಗಿಸಿಯೇ ಮಾತಾಡಿದಳು. ಇವಳಂತೂ ನನ್ನ ಮೊದಲಿನ ಕಕ್ಕಿಯಲ್ಲವೆಂದುಕೊಂಡೆ.

" ಎರಡು. ರುಕ್ಮಿಣಿ ಹಿರಿಯವಳು; ಮೂರ್ತಿ ಕೈಗೂಸು. "

" ಸುಖವಾಗಿರಲಪ್ಪ. ಅಂತೂ ಆ ಸುಖಕ್ಕೂ ಪುಣ್ಯಬೇಕು, ರಘು " ಎಂದಳು. ಏಕೆ ಹೀಗೆ ಹೇಳಿದಳೋ ! ಅವಳ ಆ ನಿಟ್ಟುಸುರಿಗೆ ಕಾರಣ ವೇನೋ ಗೊತ್ತಾಗಲಿಲ್ಲ. ಅಂತೂ ಇವಳಿಷ್ಟು ಬದಲಾಯಿಸಲು ಕಾರಣ ವೇನೋ ಇರಬೇಕು. ಕಕ್ಕನ ಮನೆಯಲ್ಲಿ ಇವಳಿಗೇನು ತೊಂದರೆ ? ಅಥವಾ ಕಕ್ಕನೇನಾದರೂ ಇವಳನ್ನ....... ...ಛೇ ಇರಲಾರದು. ಹಿಂದೊಂದು ಸಲ ಅಣ್ಣ ಕಾವೇರೀನ ಕಲ್ಕತ್ತೆಯಲ್ಲಿ ಬಿಟ್ಟು ಬರೋವಾಗ ಬೊಂಬಾಯಲ್ಲಿ ಇಳಿ ದಿದ್ದರಂತೆ. ಇವರ ಸಂಸಾರ ನೋಡಿ ಸಂತೋಷಪಟ್ಟಿದ್ದು ಹೇಳಿದ್ದು ಎಷ್ಟೋ ಬಾರಿ ಕೇಳಿದ್ದೇನೆ: ಹಾಗಾದರೆ ಹೀಗಾಗಲು ಕಾರಣ ?

" ಚೆನ್ನಾಗಿದ್ದೀಯಾ, ರಘು? " ಎಂದು ಕೇಳಿದರು ದೊಡ್ಡತ್ತೆ—ಸರಸಾ ಕಕ್ಕಿಯ ತಾಯಿ.

' ಚೆನ್ನಾಗಿದ್ದೇನತ್ತೆ. "

" ಅಪ್ಪಾ ? ಅಮ್ಮಾ ?........ಕಾವೇರಿ ? "

" ಎಲ್ಲಾ ಚೆನ್ನಾಗಿದ್ದಾರೆ. "

ಸರಸಾಕಕ್ಕಿ ಏಕೋ ಹೊರಗೆ ಹೊರಟುಹೋದಳು.

“ ಕಾವೇರಿ ಮಕ್ಕಳು ಸುಖವಾಗಿದ್ದಾರೆಯೋ ಅಪ್ಪಾ ? ”

“ ಇದ್ದಾರೆ, ಅತ್ತೆ. ”

“ ಸುಖವಾಗಿರಲಪ್ಪ. ಮುಖ್ಯ ಯಾವುದಕ್ಕೂ ಅದೃಷ್ಟವಿರಬೇಕು. ನಮ್ಮ ಸರಸೂ ಮಗು ಹೇಗಿತ್ತು ಅಂತೀಯಾ ? ಒಳ್ಳೇ ಯೂರೋಪಿಯನ್ನರ ಮಗು ಇದ್ದ ಹಾಗಿತ್ತು ನೋಡು. ಮೈಕೈ ತುಂಬಿಕೊಂಡಿತ್ತು. ಮುದ್ದು ಮುದ್ದಾಗಿ ಮಾತಾಡ್ತಾ ಇತ್ತು. ನಮ್ಮನೇಗೆ ಬರೋರೆಲ್ಲಾ ಮಗೂನ ಮುದ್ದಾಡದೆ ಹೋಗುತ್ತಿರಲಿಲ್ಲ. ಹೋದವರ್ಷದ ಇನ್ಫ್ಲೂಯಂಜಾದಲ್ಲಿ ಹೋಯ್ತಪ್ಪಾ. ಬಲು ಚೆನ್ನಾಗಿತ್ತು ರಘು. ನೀನು ನೋಡಿದರೆ ಏನನ್ನಿಸ್ತಿದ್ದೆಯೋ ! ” ಎಂದು ನಿಟ್ಟುಸಿರುಬಿಟ್ಟರು.

ಈಗ ಅರ್ಥವಾಯಿತು. ಸರಸಕ್ಕ ಹೀಗಾಗುವುದಕ್ಕೆ ಕಾರಣ ತಿಳಿಯಿತು. “ ಅಯ್ಯೋ ಪಾಪ ! ಹಾಗಾದರೆ ಕಕ್ಕೀಗೆ ಒಂದು ಮಗುವಾಗಿತ್ತೆ ? ನಮಗೆ ಗೊತ್ತೇ ಇಲ್ಲ. ಅದಕ್ಕೇ ಕಕ್ಕ ಹೀಗಾಗಿರೋದು ” ಎಂದೆ.

“ ಹೂನಪ್ಪ. ನಮ್ಮ ಸರಸು ಚಿಕ್ಕವಳಾಗಿದ್ದಾಗಲೇ ಮಕ್ಕಳನ್ನ ಎಷ್ಟು ಪ್ರೀತಿಸುತ್ತಿದ್ದಳು ಎಂತ ಗೊತ್ತುತಾನೆ. ಹಾಗೇ ನೋಡು, ತನ್ನ ಮಗು ಎಂದರೆ ಎತ್ತಿಕೊಂಡವಳು ಕೆಳಗಿಳಿಸುತ್ತಿರಲಿಲ್ಲ. ಅದರ ಮೈಗೆ ಸರಿಹೋಗಲ್ಲಾ ಅಂತ ತಾನೂ ಬಲು ಪಥ್ಯ ಮಾಡುತ್ತಿದ್ದಳು, ರಘು ! ಮಗು ಅಳೋದು ಅಂದರೇನು ? ಅದು ಎದ್ದಿತು ಅಂದರಾಯಿತು; ಮಾಡುತ್ತಿದ್ದ ಕೆಲಸ ಬಿಟ್ಟು ಹೋಗಿ ಎತ್ತಿಕೊಳ್ಳೋಳು. ಎಲ್ಲರೆದುರಿಗೆ ಮಗೂನ ತೋರಿಸೋದಕ್ಕೂ ಭಯ; ಎಲ್ಲಿ ದೃಷ್ಟಿ ಆಗುತ್ತೋ ಅಂತ. ಅಂಥ ಮೊಮ್ಮಗನ್ನ ಹತ್ತಿರ ಇಟ್ಟುಕೊಳ್ಳೋ ಪುಣ್ಯ ನನಗಿಲ್ಲ ಕಣಪ್ಪ ” ಎಂದು ಸ್ವಲ್ಪ ಕಣ್ಣೀರಿಟ್ಟರು. ನನ್ನ ಕಣ್ಣಲ್ಲೂ ಎರಡು ತೊಟ್ಟು ನೀರು ಬಂತು.

“ ಯಾರೇನು ಮಾಡಲಿಕ್ಕಾಗುತ್ತತ್ತೆ ? ಮುಖ್ಯ ಹಣೇಬರಹ ” ಎಂದೆ.

“ ನೋಡು, ಆವತ್ತಿನಿಂದ ಸರಸ ಹೀಗಾಗಿದ್ದಾಳೆ. ಎಂಥ ರತ್ನದಂಥ ಹುಡುಗಿ. ಹೀಗಾಗ್ತಾಳೆ ಎಂತ ಯಾರಿಗೆ ಗೊತ್ತು, ರಘು ? ಒಂದು ದಿವಸ ರಾತ್ರಿ ಮಗೂಗೆ ಸ್ವಲ್ಪ ಜ್ವರ ಬಂತು ನೋಡು. ಸರಸೂಗಂತೂ

ಪ್ರಾಣದಲ್ಲಿ ಪ್ರಾಣವಿಲ್ಲ. ಕೂಸನ್ನು ತೊಡೆ ಬಿಟ್ಟಿಳಿಸಲಿಲ್ಲ. ಸರಸೂ ಗಂಡನೂ ಯಾರು ಯಾರೋ ಡಾಕ್ಟರನ್ನೆಲ್ಲಾ ಕರಕೊಂಡು ಬಂದು ತೋರಿಸಿದರು.

ಏನಾದರೇನು ರಘು. ಆವತ್ತು ರಾತ್ರಿ ಅದು ತೀರಿಕೊಂಡಿತು. ಯಾರನ್ನಾದರೂ ಸಮಾಧಾನ ಮಾಡಬಹುದು, ಆದರೆ ಸರಸೂನ ಸಮಾಧಾನ ಮಾಡಲಿಕ್ಕಾಗೊಲ್ಲಪ್ಪಾ. ಆವತ್ತಿನಿಂದ ಈವತ್ತಿನವರಿಗೂ ಹೀಗಾಗಿಬಿಟ್ಟಿದ್ದಾಳೆ. ಊಟ ಉಪಚಾರ ಏನೂ ಬೇಡ. ನಿದ್ದೆಯಿಲ್ಲ, ನೀರಡಿಕೆಯಿಲ್ಲ, ನಾನೂ ಎಷ್ಟೆಷ್ಟೋ ಹೇಳಿದೆ; ಅವಳ ಗಂಡನೂ ಬಲು ಸಮಾಧಾನ ಮಾಡಿದರು. ಹೆತ್ತ ಕರುಳು. ಏನೂ ಉಪಯೋಗ ಆಗಲಿಲ್ಲ. ಆಗಲೇ ದಿನ ತುಂಬಿದೆ. "ಹೆರಿಗೆಗೆ ಇಲ್ಲೇ ಬನ್ನಿ" ಎಂದು ರಾಮೂಗೂ (ಅವರ ಮಗನ ಹೆಸರು – ಸಾಮಿಯ ತಂದೆ) ಬರೆದೆ. ಸರಸಿಗೂ ಅಲ್ಲಿರಲು ಮನಸ್ಸಿರಲಿಲ್ಲ ಅಂತ ಇಲ್ಲಿಗೆ ಬಂದೆವು. ಇಲ್ಲೂ ಹೀಗೇ ಇದ್ದರೆ ಮಗುವಿನ ಗತಿಯೇನು ರಘು ? ನೀನಾದರೂ ಸ್ವಲ್ಪ ಹೇಳಪ್ಪ ಎಂದರು.

ಕಕ್ಕಿಯ ಚರಿತ್ರೆ ಕೇಳಿ ಅಳು ಬರುವ ಹಾಗಿತ್ತು. ಅತ್ತೆನೆಂದೇ ಹೇಳಬೇಕು. ಇನ್ನು ಪುನಃ ಅವಳನ್ನು ನೋಡಲಿ ? ಅವಳೆದುರಿಗೆ ಈ ಮಕ್ಕಳ ಪ್ರಸ್ತಾಪವನ್ನೆತ್ತಲಿ ?

ಸ್ವಲ್ಪ ಹೊತ್ತು ನಿಂತಲ್ಲೇ ನಿಂತಿದ್ದೆ. ಇಬ್ಬರೂ ನೀರವ – ಇಬ್ಬರೂ ಅಧೋಮುಖ. ಸ್ವಲ್ಪ ಹೊತ್ತಾದಮೇಲೆ:

"ಹೋಗಿ ಬರುತ್ತೇನತ್ತೆ" ಎಂದೆ.

"ಬರುತ್ತಾ ಇರಪ್ಪಾ. ನೀನೇ ಬಂದು ನಿನ್ನ ಕಕ್ಕಿಗೆ ಸಮಾಧಾನ ಮಾಡಬೇಕು – ನಮಗೆಲ್ಲಾ ಧೈರ್ಯ ಹೇಳಬೇಕಪ್ಪಾ. ಬರ್ತಾ ಇರು.... ಈಗ ನೀನ್ಯಾವ ಪರೀಕ್ಷೆಗೆ ಓದುತ್ತಿದ್ದೀಯ, ರಘು ?"

"ಡಾಕ್ಟರ್ ಪರೀಕ್ಷೆಗತ್ತೆ."

"ಒಳ್ಳೇದಪ್ಪಾ. ಚೆನ್ನಾಗಿ ಪ್ಯಾಸ್ ಮಾಡು............ಅಂತೂ ಬರ್ತಾ ಇರು, ರಘು."

" ಆಗಲತ್ತೆ " ಎಂದು ಹೇಳಿ ಹೊರಟೆ.

ಹೊರಗೆ ತೋಟದ ಬೆಂಚಿನಮೇಲೆ ಕಕ್ಕಿ ಕುಳಿತಿದ್ದಳು. ಎಲ್ಲೋ ನೋಟ, ಎಲ್ಲೋ ಧ್ಯಾಸ. ಬೈಸಿಕಲ್ ಕೈಗೆ ತೆಗೆದುಕೊಂಡ ಸದ್ದಾಗಲು ತಿರುಗಿ ನೋಡಿದಳು. ನಾನು ಹೊರಟು ನಿಂತಿದ್ದೆ.

" ಹೊರಡ್ತೀಯಾಪ್ಪ. ರಘು " ಎಂದು ಕೇಳಿದಳು.

" ಹೂ ಕಕ್ಕಿ, ಇಷ್ಟರಲ್ಲೇ ಬರುತ್ತೇನೆ. "

" ಒಳ್ಳೇದಪ್ಪಾ " ಎಂದಳು ಅಷ್ಟೆ !

ಹೊರಟೆ. ಏನು ದೈವ ಸಂಕಲ್ಪ ! ಹೇಗಿದ್ದ ಸರಸಾಕಕ್ಕಿ ಹೇಗಾಗಿ ಬಿಟ್ಟಿದ್ದಾಳಲ್ಲಾ......... ಎಂದಾದರೂ ' ಹೊರಡುತ್ತೇನೆ ' ಎಂದರೆ ' ಇಷ್ಟು ಜಾಗ್ರತೆಯೋ ? ' ಎಂದು ಅಲ್ಲೇ ಕೂರಿಸಿಕೊಂಡುಬಿಡುವಳು. ಇವತ್ತೋ? ಆಗಿನ ಸರಸಾವಾಣಿಯಲ್ಲಿ ಈಗಿನ ಮಿತಭಾಷಣವೆಲ್ಲಿ ? ಆ ಹುಸಿನಗು ಎಲ್ಲಿ? ಈ ಅಧೋಮುಖವೆಲ್ಲಿ ? ಹೀಗೂ ಉಂಟೆ ? ಮುಂದಿನ ಮಗುವಾದರೂ ಹಿಂದಿನದಕ್ಕಿಂತ ಚೆನ್ನಾಗಿದ್ದು ಬಲು ದಿವಸ ಸುಖವಾಗಿರಲಿ—ಅದರಿಂದಲಾದರೂ ಕಕ್ಕಿ ಸುಖವಾಗಿರಲೆಂದು ದೇವರಲ್ಲಿ ಮೊರೆಯಿಟ್ಟೆ. ನಾನು ಯಾವಾಗಲೂ ಹೀಗೆ ದೇವರಲ್ಲಿ ಮೊರೆಯಿಟ್ಟವನಲ್ಲ. ಹಾಗಾದರೆ ನನ್ನ ಪ್ರಾರ್ಥನೆ, ನನ್ನ ಮೊರೆ, ಆ ದೇವರಿಗೆ ಕೇಳಿಸಿರಬಹುದೇ ?

‡ ‡ ‡

ಹಾಸ್ಟೆಲ್ ಸೇರಿದೆ. ನೆಪಕ್ಕೆರಡು ತುತ್ತು ಊಟಮಾಡಿದುದಾಯಿತು. ಆ ಬೆಳಗಿನ ಉಲ್ಲಾಸವೆಲ್ಲಾ ಎಲ್ಲೋ ಹೋಯಿತು. ಓದಲು ಮನಸ್ಸಿಲ್ಲ. ಏನು ಕೆಲಸ ಮಾಡಲೂ ಬೇಜಾರು. ಮಲಗಿದರೆ ನಿದ್ದೆ ಬಾರದು. ಸ್ವಲ್ಪ ಜಂಪು ಹತ್ತಿದರಾಯಿತು. ಆ ಸರಸಾಕಕ್ಕಿಯ ಕಥೆ ನನ್ನೆದುರಿಗೆ ಚಿತ್ರಿತವಾಗುವುದು. ಅತ್ತೆ ಈ ಕಥೆಯಾಕೆ ಹೇಳಿದರೋ ಎನ್ನಿಸಿತು. ಬೆಳಗಿನ ಝಾವ ಸ್ವಲ್ಪ ನಿದ್ದೆ ಬಂದರೂ ಬಲು ಜಾಗ್ರತೆ ಭಂಗವಾಯಿತು. ಹೇಗಿದ್ದರೇನು ? ಕಾಲೇಜಿಗೆ ಹೋಗುವುದು ನಿಲ್ಲಿಸಲಾಗುವುದೇ ?

ಕಾಲೇಜಿನಲ್ಲಿ " ಇದೇಕೆ ಹೀಗೆ, ರಘು? " ಮನೆಯಲ್ಲೆಲ್ಲಾ ಸೌಖ್ಯ ತಾನೇ " ಎಂದು ಕೇಳಿದ ನನ್ನ ಸ್ನೇಹಿತ ಕಂಠು.

" ಸೌಖ್ಯವಿಲ್ಲವೆ ಏನು, ಕಂಠು? ರಾತ್ರಿ ಸ್ವಲ್ಪ ಜ್ವರ ಬಂದಿತ್ತು ಅಷ್ಟೆ" ಎಂದೆ.

" ಜ್ವರ ಬಂದವರ ಮುಖ ಅಲ್ಲ, ರಘು " ಎಂದ ಅಷ್ಟೆ.

ದಿವಸಗಳು ಕಳೆದಂತೆಲ್ಲಾ ಈ ಕಥೆಯೂ ಮಾಸಲಾಗತೊಡಗಿತು. ಪುನಃ ಎರಡು ಬಾರಿ ಹೋಗಿದ್ದೆ. ಆ ದುಃಖದ ಮೂರ್ತಿಯನ್ನು ನೋಡಲು ನನಗುತ್ಸಾಹವಿಲ್ಲದಿದ್ದರೂ ನೋಡದೆ ಹಿಂದಕ್ಕೆಬರಲಿಕ್ಕೆ ನನ್ನ ಮನಸ್ಸೊಪ್ಪದು. ಹೀಗೆಯೇ ದಿವಸಗಳನ್ನು ಕಳೆದೆ.

ಇವತ್ತಿನಿಂದ ನಮ್ಮ ಕಾಲೇಜಿನ ಟೆನ್ನಿಸ್ ಮ್ಯಾಚ್. ನನ್ನದೇ ಮೊದಲು. ನಿರಾಯಾಸವಾಗಿ ಗೆದ್ದೆ. ಬರೀ ಗೆದ್ದರಾಯಿತೆ? ಅವರಿವರಿಗೆ ' ಕಾಫಿ ತಿಂಡಿ ' ಆಗಬೇಕಲ್ಲ! ಆಯಿತು. ಇನ್ನೂ ಆರೂವರೆ ಘಂಟೆ ಅಷ್ಟೆ. ಮಲ್ಲೇಶ್ವರಕ್ಕೆ ಹೋಗಿ ಬರೋಣವೆಂದೆನ್ನಿಸಿತು – ಹೊರಟೆ. ಮನೆಯ ಕಾಂಪೌಂಡಿನಲ್ಲಿ ಇಳಿಯುವುದೇ ತಡ ಸಾಮಿ ಬಂದು " ಸರಸತ್ತೆಗೆ ಹೆಣ್ಣು ಮಗು " ಎಂದ. ನನಗೂ ಸಂತೋಷವಾಯಿತು.

" ಹಾಗಾದರೆ ನನಗೆ ಹೆಂಡತಿ ಸಿಕ್ಕಿದಳು " ಎಂದು ನಕ್ಕೆ. ಅತ್ತೇನೂ ಹೊರಗೆ ಬಂದರು. ನಗು ಮುಖ. ಬೆಳಿಗ್ಗೆ ಹಡೆದಳೆಂದು ಗೊತ್ತಾಯಿತು. ತುಂಬಾ ಸಂತೋಷ. ಮಗುವನ್ನು ನೋಡಲೆಂದು ಒಳಗೆ ಹೋದೆ. ಅಲ್ಲೇ ಕಕ್ಕ ಮಲಗಿದ್ದಳು.

" ಬಾ ರಘು, ನೋಡಪ್ಪ ನಿನ್ನ ತಂಗೀನ. ಏನು ನಿನ್ನ ಹಾಗಿದ್ದಾಳೋ ಕಪ್ಪೊ? " ಎಂದಳು. ಇವಳೇ ಅವಳು! ಇವಳೇ ಆ ನನ್ನ ಮೊದಲಿನ ಪ್ರೇಮದ ಸರಸಾಕಕ್ಕ. ಅದೇ ಮಂದಹಸಿತ ವದನ! ಈ ಮಗುವನ್ನು ನೋಡಿ ಆ ಹಿಂದಿನ ದುಃಖ ಮರೆತಿರಬೇಕು. ಮಗು ಬಹು ಚೆನ್ನಾಗಿತ್ತು. ಹಿಂದಿನದನ್ನು ನೋಡಿರಲಿಲ್ಲವಾದರೂ ಅದು ಇದರಷ್ಟು ಸುಂದರವಾಗಿರಲಾರ ವೆಂದುಕೊಂಡೆ.

" ಅಂತೂ ಸಾಮೀಗೆ ಹೆಂಡತಿ ಸಿಕ್ಕಿದ ಹಾಗಾಯಿತು " ಎಂದೆ.

ಕಕ್ಕಿ ನಕ್ಕು, " ಅವರೊಪ್ಪಬೇಕಲ್ಲಪ್ಪಾ ! " ಎಂದಳು.

" ಒಪ್ಪದೇ ಏನು ? ಈಗಾಗಲೇ ಸಾಮಿ ಕುಣಿತಾ ಇದಾನೆ " ಎಂದೆ.

ಸ್ವಲ್ಪ ಹೊತ್ತು ಇದ್ದು ಹಾಸ್ಟಲಿಗೆ ಬಂದೆ.

ಹೀಗೆ ಕಷ್ಟವಾಗಲೀ, ಸಂತೋಷವಾಗಲೀ ಯಾವುದು ಬಂದರೂ ಒಂಟಿಯಾಗಿ ಬರುವುದಿಲ್ಲವೆಂದುಕೊಂಡೆ; ಎರಡುದಿನಕ್ಕೊಮ್ಮೆ ಮಲ್ಲೇಶ್ವರಕ್ಕೆ ಹೋಗಿಬರುತ್ತಿದ್ದೆ. ಹೀಗೆ ಹತ್ತು ದಿವಸಗಳೂ ಆದವು. ಕೂಸು, ಬಾಣಂತಿ ನೀರು ಹಾಕಿಕೊಂಡು ಒಳಕ್ಕೆ ಬಂದರು.

‡ ‡ ‡

ಇವತ್ತು ನನ್ನ ಟೆನ್ನಿಸ್ ' ಫೈನಲ್ಸ್ '. ಲಕ್ಷ್ಮಣರಾವ್ ಮೇಲೆ ಆಡಬೇಕು. ಹಿಂದೆ ಎಷ್ಟೋಬಾರಿ ಆಡಿ ಗೆದ್ದಿದ್ದೆ. ಆದುದರಿಂದ ಇಂದೂ ಗೆಲ್ಲುವೆನೆಂದೇ ಧೈರ್ಯ. ಎಲ್ಲರೂ ತಿಳಿದುಕೊಂಡದ್ದು ಇದು ಅಜಗಜ ನ್ಯಾಯವೆಂತಲೇ. ನಾಲ್ಕು ಘಂಟೆಗೆ ಸರಿಯಾಗಿ ಹೋದೆ.

" ಒಂದೆರಡು ' ಗೇಮ್ ' ಕೊಡಪ್ಪಾ " ಎಂದ ಲಕ್ಷ್ಮಣರಾವ್.

" ಏನು ಹಾಸ್ಯಮಾಡ್ತೀಯಾ ? " ಎಂದು ನಕ್ಕೆ.

ಆಟ ಪ್ರಾರಂಭವಾಯಿತು. ಆ ದಿನ ಎಂದಿನಂತೆ ನನ್ನ ಕೈ ಜೋರಿಲ್ಲ. ಎಷ್ಟೋ ಪ್ರಯತ್ನಪಟ್ಟೆ, ಆಗಲಿಲ್ಲ. ಮ್ಯಾಚ್ ಹೋಯಿತು ! ಎಲ್ಲರೂ ' ಹಾರ್ಡ್ ಲೈನ್ಸ್ ' ಎಂದರು. ಏನಂದರೇನು ?

ಹಾಸ್ಟಲಿಗೆ ಹೊರಡಬೇಕೆಂದಿದ್ದೆ. ಅಷ್ಟು ಹೊತ್ತಿಗೆ " ರಘು ! " ಎಂದಾರೋ ಕರೆದ ಹಾಗಾಯಿತು. ನೋಡಿದರೆ, ಮೋಟಾರಿನಲ್ಲಿ ಸಾಮಿಯ ತಂದೆ ಬಂದಿದ್ದಾರೆ. ನನ್ನನ್ನೇಕೆ ಹುಡುಕಿಕೊಂಡು ಬಂದರು ? ಮೋಟಾರಿನ ಬಳಿ ಹೋದೆ.

" ರಘು, ಡಾಕ್ಟರ್ ಕೃಷ್ಣಸ್ವಾಮಿರಾವ್ ಎಲ್ಲಿರುತ್ತಾರೆ ? " ಎಂದು ಕೇಳಿ ಇಳಿದರು.

ನಾವಿಬ್ಬರೂ ಡಾಕ್ಟರ್‌ಬಳಿ ಹೋದೆವು. ಅವರು ಡಾಕ್ಟರೊಂದಿಗೆ ಮಾತಾಡುತ್ತಿದ್ದುದು ಕೇಳಿ ಎದೆಯೊಡೆಯಿತು. ಸರಸಳಿಗೆ ಕಷ್ಟವಿನ್ನೂ ತಪ್ಪಲಿಲ್ಲವೇ ? ಸರಸಾಕಕ್ಕಿಯ ಮಗುವಿಗೆ ವಿಪರೀತ ಜ್ವರವಂತೆ. ಕೂಸಿಗೆ ನೀರು ಹಾಕಿದಾಗಿನಿಂದ ಜ್ವರ ಪ್ರಾರಂಭವಾಗಿದೆಯಂತೆ. ಅವರೊಂದಿಗೆ ಮಲ್ಲೇಶ್ವರಕ್ಕೆ ಹೊರಟೆ.

ಮನೆಯಲ್ಲಿ ಎಲ್ಲಿ ನೋಡಿದರೂ ಪೆಚ್ಚು ಮುಖವೇ. ಸರಸಳ ಸ್ಥಿತಿಯಂತೂ ನೋಡಲು ಎದೆ ಕರಗುವುದು. ತೊಡೆಯ ಮೇಲಿದ್ದ ಮಗುವನ್ನು ನೋಡಿ ಅಳುತ್ತಿದ್ದಾಳೆ.

ಡಾಕ್ಟರು ಮಗುವನ್ನು ನೋಡಿದರು. " ಸ್ವಲ್ಪ ಜ್ವರ ಅಷ್ಟೆ. ಬೆಚ್ಚಗೆ ಹೊದಿಸಿ ಈ ಔಷಧ ಕೊಡೀಯಮ್ಮ; ಜಾಗ್ರತೆ ವಾಸಿಯಾಗುತ್ತೆ " ಎಂದರು. ಏನು ಹೇಳಿದರೇನು ಅವಳಿಗಿದು ತಿಳಿದಹಾಗಿಲ್ಲ. ಡಾಕ್ಟರು ಹೋದರು. ಕಾರಿನವರೆಗೂ ಅವರನ್ನು ಹಿಂಬಾಲಿಸಿ ಒಳಗೆ ಬಂದೆ. ನಮ್ಮ ಅತ್ತೆ ನಿಂತಿದ್ದರು. ಅವರ ಕಣ್ಣಲ್ಲೂ ನೀರು.

" ರಘು, ಹೇಗಾದರೂ ಮಾಡಿ ಸರಸಾನ ಸಮಾಧಾನ ಮಾಡಪ್ಪಾ ! ಕೂಸಿಗಿಂತ ಅವಳ ಭಯಾನೇ ಹೆಚ್ಚಾಗಿದೆ " ಎಂದರು.

ಸಮಾಧಾನ ಮಾಡುವುದು ಹೇಗೆ ?

ಕಕ್ಕಿ ಇದ್ದ ಕೊಠಡಿಗೆ ಮೆತ್ತಗೆ ಹೋದೆ. ಅವಳ ದುಃಖ ನನ್ನಿಂದ ನೋಡಲಾಗಲಿಲ್ಲ. ಅತ್ತು ಅತ್ತೂ ಅವಳ ಕಣ್ಣೆಲ್ಲಾ ಬಾತು ಹೋಗಿತ್ತು. ಹೊಟ್ಟೆಯಲ್ಲೇನೂ ಇಲ್ಲ – ಈಗ ಅವಳಿಗೆ ಹೊಟ್ಟೆಯ ಯೋಚನೆಯೋ ?

" ಸ್ವಲ್ಪ ಸಮಾಧಾನ ಮಾಡಿಕೋ, ಕಕ್ಕಿ. ಡಾಕ್ಟರು ವಾಸಿಯಾಗುತ್ತೆ ಎಂತ ಹೇಳಿದಮೇಲೂ ನಿನಗೆ ಧೈರ್ಯ ಇಲ್ಲವೇ ? " ಎಂದೆ.

ಉತ್ತರವಿಲ್ಲ.

" ಬಹಳ ಒಳ್ಳೇ ಡಾಕ್ಟರು ಕಕ್ಕಿ, ಬಹಳ ಗಟ್ಟಿಗ. ಸ್ವಲ್ಪ ಜ್ವರ ಅಷ್ಟೆ. ಎಲ್ಲಾ ವಾಸಿಯಾಗುತ್ತೆ " ಎಂದೆ.

" ಏನೋಪ್ಪಾ " ಎಂಬ ಮಾತು ಕೇಳಿಸಿದ ಹಾಗಾಯಿತು.

ಸ್ವಲ್ಪ ಧೈರ್ಯ ಬಂತು. ಸ್ವಲ್ಪ ಹೊತ್ತು ಸುಮ್ಮನಿದ್ದು;

" ತೊಟ್ಲಲ್ಲಿ ಮಲಗಿಸಿದರೆ ತೂಗ್ತಾ ಇರ್ತೀನಿ........ನೀನೇನಾದರೂ ಸ್ವಲ್ಪ ತಗೋ, ಕಕ್ಕಿ. ಬರೀ ಹೊಟ್ಟೇಲಿ ಇರಬಾರದು " ಎಂದೆ. ಇದಕ್ಕೆ ಉತ್ತರವೇ ಇಲ್ಲ. ಮಗುವನ್ನೂ ತೊಡೆಬಿಟ್ಟು ಇಳಿಸಲಿಲ್ಲ; ಅಳುವನ್ನೂ ನಿಲ್ಲಿಸಲಿಲ್ಲ. ನನಗೂ ಇನ್ನು ಮುಂದೆ ಅಲ್ಲಿರಲಾಗಲಿಲ್ಲ. ಹೊರಗೆ ಬಂದೆ. ನಮ್ಮತ್ತೆ ಬಂದರು; ಬಂದು,

" ರಘು ನೀನೇ ಅವಳಿಗೆ ಸಮಾಧಾನ ಹೇಳಬೇಕಪ್ಪಾ; ನಮ್ಮ ಕೈಲಾ ಗೋದಿಲ್ಲ. ನೀನಿವತ್ತು ಇಲ್ಲೇ ಇರಪ್ಪ. ನನಗ್ಯಾಕೋ ಏನೂ ದಿಕ್ಕೇ ತೋಚದ ಹಾಗಾಗಿದೆ " ಎಂದರು.

ಇವರೆಲ್ಲಾ ಏಕಿಷ್ಟು ಹೆದರಿದ್ದಾರೋ ನನಗರ್ಥವಾಗಲಿಲ್ಲ.

" ಯಾಕತ್ತೆ, ಇಷ್ಟು ಹೆದರಿದ್ದೀರಿ ? ಸ್ವಲ್ಪ ಜ್ವರ ಅಷ್ಟೆ. ಜಾಗ್ರತೆ ವಾಸಿಯಾಗುತ್ತೆ ಎಂತ ಡಾಕ್ಟರೇ ಹೇಳಲಿಲ್ಲವೇ ! ನಾಳೇಗೆಲ್ಲಾ ವಾಸಿಯಾ ಗುತ್ತೆ. ಅದಕ್ಯಾಕೆ ಇಷ್ಟು ಹೆದರಿಕೆ " ಎಂದೆ.

" ಸಧ್ಯ ವಾಸಿಯಾಗಲಪ್ಪ; ದೇವರಿಗೆ ಹರಕೇ ಹೊತ್ತುಕೋತೀನಿ.... ಆದರೆ ಇವತ್ತುರಾತ್ರಿ ನೀನಿಲ್ಲೇ ಇರತೀಯಾಪ್ಪ ? ಎಂದರು. ಸರಿ, ಅಲ್ಲೇಇದ್ದೆ.

ಒಬ್ಬರಿಗೂ ಊಟ ಸೇರದು. ಮಗುವಿಗಿಂತ ಅದರ ತಾಯಿಯನ್ನು ನೋಡಿದರೇ ದುಃಖ ಹೆಚ್ಚು. ಯಾರಿಗೂ ಏನೂ ಬೇಕಾಗಿಲ್ಲ. ಕಕ್ಕಿ ಆಸ್ಥಳ ವನ್ನು ಬಿಟ್ಟಿದ್ದೇ ಇರಲಿಲ್ಲ. ಅವಳಿಗೆಂದು ಇಟ್ಟಹಾಲು ಅವಳೆದುರಿಗೇ ಬೆಕ್ಕು ಕುಡಿದು ಹೋಗಿದೆ. ಎಷ್ಟು ಸಮಾಧಾನ ಮಾಡಿದರೂ ಸಮಾಧಾನ ವಾಗಲೊಲ್ಲಳು. ಮಗುವೂ ಮಲಗಿದ್ದಿತು. ಮೊದಲಿನ ಹಾಗೆಯೇ ಇತ್ತು.

ಹೋಗಿ ಮಲಗಿದೆ. ಹನ್ನೆರಡು ಘಂಟೆ ಹೊಡೆದಿತ್ತು. ಕಕ್ಕಿಯ ಯೋಚನೆ ಇರುವಾಗ ನಿದ್ರೆ ಹೇಗೆ ಬರಬೇಕು ? ಅತ್ತೆ ಏಕಿಷ್ಟು ಹೆದರಿದ್ದಾರೆ? ಇದೆಲ್ಲಾ ಏಕೋ ವಿಚಿತ್ರವಾಗಿ ತೋರಿತು. ನಿದ್ರೆ ಜೊಂಪು ಹತ್ತಿರಬೇಕು.

'ಕಿಟ್' ಎಂದು ವಿಕಾರವಾಗಿ ಕಿರಿಚಿದ ಧ್ವನಿ! ಎಲ್ಲರೂ ಥಕ್ಕನೆ ಎದ್ದು ಕುಳಿತೆವು. ಎಲ್ಲಿಯ ಶಬ್ದವೆಂದು ಗೊತ್ತು! ಎದೆ ಹೊಡೆದುಕೊಳ್ಳುತ್ತಿತ್ತು. ಹಾಗೆಯೇ ಓಡಿದೆವು ಸರಸೂ ಬಳಿಗೆ !!

ನೋಡಿದೆವು; ಮಗು ಉಸುರಾಡುವುದು ಬಲು ಕಷ್ಟವಾಗಿದೆ. ಅತ್ತೆ, ನೋಡಲಾರದೆ ಅಲ್ಲಿಯೇ ಕುಳಿತುಬಿಟ್ಟರು. "ಅಣ್ಣಾ! ರಘೂ....ಅಯ್ಯೋ! ....ಅಣ್ಣಾ, ನನ್ನ ಮಗು ಉಳಿಸು, ರಘೂ" ಎಂದು ಸರಸ ಘಟ್ಟಿಯಾಗಿ ಅಳತೊಡಗಿದ್ದಾಳೆ. ನಮ್ಮೆಲ್ಲರ ಕಣ್ಣಲ್ಲೂ ನೀರು. ಸಾಮಿಯು ತಂದೆ ನನಗಲ್ಲೇ ಇರುವಂತೆ ಹೇಳಿ ಡಾಕ್ಟರನ್ನು ಕರೆತರಲು ಹೋದರು.

ಕಕ್ಕಿಯು "ರಘೂ, ಅಮ್ಮಾ, ಅಯ್ಯೋ ನನ್ನ ಕೂಸೇ....ಇನ್ನಾರ ಹೊಟ್ಟೆಯಲ್ಲಾದರೂ ಹುಟ್ಟಬಾರದಾಗಿತ್ತೆ? ಅಯ್ಯೋ! ನನ್ನ ಕಂದಾ!" ಎಂದಳುತ್ತಿದ್ದಾಳೆ—ನೆನೆನೆನಿಸಿಕೊಂಡು ಬಿಕ್ಕಿಬಿಕ್ಕಿ ಅಳುತ್ತಿದ್ದಾಳೆ. ನನಗೂ ವಿಪರೀತ ದುಃಖ; ಸಮಾಧಾನ ಮಾಡಲು ಗಂಟಲೇ ಒಣಗಿ ಹೋಗಿದೆ.

ಉಸಿರಾಡುವುದು ಮತ್ತೂ ಕಷ್ಟವಾಗಿದೆ. ಇನ್ನೇನು ಡಾಕ್ಟರು ಬರುವ ಹೊತ್ತಾಯಿತು. ಮಗು ಒಂದು ಬಾರಿ ಕಣ್ಣು ಬಿಟ್ಟಿತು. ಕಕ್ಕಿ ಎತ್ತಿ ಮುದ್ದಿಟ್ಟಳು. ಪುನಃ ಕಣ್ಣುಮುಚ್ಚಿತು. 'ಗೊರ್' ಎಂದು ಉಸಿರೆಳೆದು ಕೊಂಡಿತು ಅಷ್ಟೆ! —ನಾನಿನ್ನು ನೋಡಲಾರೆ—ಹಾ! ಡಾಕ್ಟರು ಬಂದರು. ಆದರೇನು?

"Too Late" ("ಮೀರಿಹೋಯಿತು") ಎಂದು ಹಿಂದಿರುಗಿದರು.

"ಹಲ್ಲಿದ್ದವರಿಗೆ ಕಡಲೆ ಇಲ್ಲ; ಕಡಲೆ ಇದ್ದವರಿಗೆ ಹಲ್ಲಿಲ್ಲ" ನಿಶ್ಚಯ. ಕಕ್ಕಿಗೆ 'ಮಗು' ಎಂದರೆ ಪ್ರಾಣ—ಚಿಕ್ಕಂದಿನಿಂದಲೂ ಅಷ್ಟೆ. ಯಾರ ಮಗುವಾಗಲೀ ಅದನ್ನೆತ್ತಿ, ಆಡಿಸಿ, ಮುದ್ದಾಡಿ ಕಳುಹದಿದ್ದರೆ ಅವಳಿಗೆ ಸಂತೋಷವಿಲ್ಲ. ಅವಳಿಗೆ ಈಗ ಮಗುವನ್ನು ಸಾಕಿ ಸಲಹಲು ಶಕ್ತಿಯಿರುವಾಗ ಮಗುವಿನ ಕೊರತೆಯೇ! ಬೇಡಬೇಡವೆಂದರೂ ಬಡವರಿಗೇಕೆ ಮಕ್ಕಳು? ಇದೂ ನಿನ್ನ ಮಾಯೆ; ದೇವರೇ ನಿನಗೆ ಕಣ್ಣಿಲ್ಲ—ತಾಯಿಯ ಪ್ರೇಮ ಸಲಿಲದ ಆಳವಿನ್ನೂ ನಿನಗರ್ಥವಾಗಿಲ್ಲ. ಎಲ್ಲರನ್ನೂ ಬಿಟ್ಟು ಪ್ರೇಮಮೂರ್ತಿಯಾದ ಆ ಸರಸಳಿಗೆ ಇಷ್ಟು ಕಷ್ಟವೇಕೆ?

ಕಕ್ಕಿಯ ದುಃಖ ನೋಡಲಾರದೆ ಹೊರಗೆ ಬಂದರೆ ಅಲ್ಲಿ ಮೊಡತ್ತೆ "ಹಿಂದಿನದೂ ಹೀಗೇ ಹೋಯಿತು, ರಘೂ, ಏನು ಪಾಪ ಮಾಡಿದ್ದಳ್ಳಾ. ನಾನು........" ಎಂದು ಅಳಲಾರಂಭಿಸಿದರು. ನನ್ನ ಅತ್ತೆಯ ಹೆದರಿಕೆ ಈಗ ಗೊತ್ತಾಯಿತು. 'ಕೈಗೆ ಬಂದ ತುತ್ತು ಪುನಃ ಬಾಯಿಗೆ ಬರಲಿಲ್ಲ' ಸಮಾಧಾನ ಮಾಡುವುದಾರನ್ನು ? ಹೇಗೆ ?

ಬೆಳಗಾಯಿತು. ಸಂಸ್ಕಾರಕ್ಕೆ ಮಗುವನ್ನು ತೆಗೆದುಕೊಂಡು ಹೋಗಬೇಕು. ಆದರೆ ಸರಸಳ ಬಳಿ ಹೋಗಲಾರಿಗೂ ಧೈರ್ಯವಿಲ್ಲ. ತೊಡೇಮೇಲೆ ಮಗುವಿದೆ; ಅದನ್ನೇ ನೋಡುತ್ತಿದ್ದಾಳೆ. ಮೊದಲಿನ ಆ ಅಳುವಿಲ್ಲ. ಅತ್ತೆ ಒಳಗೆ ಹೋದರು. ಕಕ್ಕಿ ನೋಡಿದಳು. ಆ ಅಳುವಿಲ್ಲ, ನಾನೂ ನೋಡುತ್ತಿದ್ದೆ.

"ಅಮ್ಮ, ಅಮ್ಮ, ಹುಶ್. ಮಗು ಮಲಗಿದೆ; ಶಬ್ದ ಮಾಡಬೇಡ. ನಡಿ, ನಡಿ" ಎಂದಳು.

ಆ ತಾಯಿಯ ಪ್ರೇಮವು ಕಕ್ಕಿಯನ್ನು ಎಲ್ಲಿಂದೆಲ್ಲಿಗೆ ಕರೆದೊಯ್ದಿದೆ ! ಹಾ ! ಆ ಕಕ್ಕಿ ನಮಗಿನ್ನು ದಕ್ಕುವಳೇ ?

ಅತ್ತೆಗೆ ತಡೆಯಲಾಗಲಿಲ್ಲ. "ಸರಸೂ, ನಮ್ಮಮ್ಮಾ" ಎಂದತ್ತರು. ಹಾಗೇ ತೊಡೆಯಮೇಲಿದ್ದ ಮಗುವನ್ನು ಕೈಗೆ ತೆಗೆದುಕೊಂಡರು.

"ಪಿಶಾಚಿ, ದೆವ್ವ, ಏನು ನೀನು ಮಾಡಿದ್ದು; ನನ್ನ ಮಗೂನ ಅನ್ಯಾಯವಾಗಿ ಕೊಂದೆ" ಎಂದು ಹಾರಿಬಂದು, ಮಗೂನ ಕಸಿದುಕೊಂಡು, ಬಿಗಿದಪ್ಪಿ ಮುದ್ದಿಟ್ಟು, ಗಟ್ಟಿಯಾಗಿ ಅಳತೊಡಗಿದಳು. ಎಷ್ಟುಹೊತ್ತು ಸುಮ್ಮನಿರಲಾದೀತು ? ಅದರಲ್ಲೂ ದುಃಖದ ಕಾರಣವನ್ನು ನೋಡಿದಷ್ಟೂ ಜ್ಞಾಪಕ ಹೆಚ್ಚಾಗುವುದು ಅಷ್ಟೆ.

ಅಳುತ್ತಳುತ್ತಾ ಅತ್ತೆ ಮುಂದುವರಿದರು. ಯಾವ ಪ್ರಾಣಿಯೇ ಆಗಲಿ, ಆಗತಾನೇ ತಾನು ಪಡೆದ ಮರಿಯನ್ನು ರಕ್ಷಿಸುವಂತೆಯೇ ಕಕ್ಕಿಯೂ ತೊಡಗಿದಳು. ಅತ್ತೆ ಮುಂದುವರೆದಷ್ಟೂ ಕಕ್ಕಿಯೂ ಮಗುವನ್ನು ಎದೆಗೆ ಬಿಗಿದಪ್ಪಿದಳು.

“ಅಮ್ಮಾ ಬೇಡ; ಬೇಡಾಮ್ಮಾ. ಮಗೂನ ಕಸುಕೋಬೇಡ. ಅದು ಸತ್ತಿಲ್ಲ—ಸತ್ತಿಲ್ಲ” ಎಂದು ಚೀರತೊಡಗಿದಳು. ಮೂಲೆಯಲ್ಲವಿತಿಟ್ಟುಕೊಂಡಳು. ಅತ್ತೆಗೂ ಅಳು. “ಅಯ್ಯೋ ಸರಸಾ, ನನ್ನ ಸರಸಾ” ಎಂದರತ್ತಾ ಕೊನೆಗೆ ಮಗುವನ್ನು ತೆಗೆದುಕೊಂಡರು. ಕಕ್ಕಿ ಪುನಃ ಮಗುವನ್ನು ಕಸಿದುಕೊಳ್ಳಲೆಂದು ಹಾರಿದಳು. ಆದರೆ ಅತ್ತೆ ಮುಂದುವರಿದಿದ್ದರು; ಸಿಗಲಿಲ್ಲ. ಸೊಪ್ಪೆಂದು ಬಿದ್ದಳು! ಮೈಮೇಲೆ ಪ್ರಜ್ಞೆಯಿರಲಿಲ್ಲ. ಪುನಃ ಎಚ್ಚೆತ್ತಳು. ಆದರೇನು? ಜ್ಞಾನೇಂದ್ರಿಯವು ಮಗುವಿನೊಂದಿಗೇ ಹೋಗಿದ್ದಿತು!!

‡ ‡ ‡

ಈಗ ಸರಸಳನ್ನು ನೋಡಲಾರೆ. ತಾಯನ್ನು ಕಂಡರಂತೂ ತನ್ನ ಮಗುವನ್ನು ಕೊಂದವಳೆಂದು ಅವಳು ಕಿಡಿಕಿಡಿಯಾಗುತ್ತಾಳೆ.

“ಬಾ ಕಂದ, ಬಾ, ಬಾ, ಬಾಮ್ಮ” ಎಂದು ತನ್ನಷ್ಟಕ್ಕೆ ತಾನೇ ಅಳುತ್ತಾಳೆ—ನಗುತ್ತಾಳೆ: ನಿದ್ರೆಯಿಲ್ಲ; ನೀರಡಿಕೆಯಿಲ್ಲ; ಅವಳ ಅರಿವು ಅವಳಿಗೇ ಇಲ್ಲ. ಆಗಾಗ್ಗೆ ಸ್ವಲ್ಪ ಪ್ರಜ್ಞೆ ಬರುತ್ತದೆ—ಬಂದರೂ ಕ್ಷಣಿಕ. ತನ್ನ ಹಿಂದಿನ ಸ್ಥಿತಿ ಜ್ಞಾಪಕ ಬಂತೆಂದರೆ ಹುಚ್ಚು ಇಮ್ಮಡಿಯಾಗುತ್ತದೆ.

ಅವಳಗಂಡ ಬಂದರು. ಕರೆತರಲು ಸ್ಟೇಷನ್ನಿಗೆ ಹೋಗಿದ್ದೆ. ಮನೆಗೆ ಬಂದಾಗ ಕಕ್ಕಿ ತೋಟದಲ್ಲಿದ್ದಳು. ಹೆದರಿ ಹೆದರಿಕೊಂಡು ಕಕ್ಕಿಯ ಬಳಿ ಹೋಗಿ, ಕಕ್ಕ ಬಂದ ವಿಚಾರ ಹೇಳಿದೆ. ಗಹಗಹಿಸಿ ನಕ್ಕಳು. ಮರುಕ್ಷಣ ಅತ್ತಳು. ಕಕ್ಕನೇ ಬಂದು ಎದುರಿಗೆ ನಿಂತರು. ಅವಳಿಗೆ ಅದರ ಅರಿವಿಲ್ಲೆಂದು ತೋರುತ್ತದೆ. “ಸರಸಾ, ಸರಸಾ” ಎಂದರು. ಎಲ್ಲೋ ನೋಡುತ್ತಿದ್ದವಳು “ಬಂದೆ, ಕಂದಾ; ಬಂದೆ ತಾಳು” ಎಂದೆದ್ದು ಬೇರೊಂದೆಡೆಗೆ ಓಡಿದಳು. ಪುನಃ ಹಿಂತಿರುಗಿ ಬಂದು ಮೊದಲಿನ ಹಾಗೆಯೇ ಕುಳಿತಳು. ಕಕ್ಕನ ಕಣ್ಣಿನಲ್ಲೂ ನೀರು ಧಾರೆಧಾರೆ. ಸರಸಳ ಬಳಿ ಕುಳಿತು ಅತ್ತರು. ಆದರ ಅರಿವೇ ಅವಳಿಗಿಲ್ಲ.

**ಮಗುವಿನ ಮೋಹವೆಂದರೆ ಹೀಗೂ ಉಂಟೆ?**

# ಡಾಕ್ಟರಿನ ಡೈರಿ

ನಾನು ಮೊನ್ನೆ ಆಸ್ಪತ್ರೆಯಿಂದ ಬಂದೆ. ಹೊರಗೆ ವಿಪರೀತ ಮಳೆ, ಘಾಳಿ, ಗುಡುಗು, ಮಿಂಚು. ಇಷ್ಟೇಟಿಗಾದರೂ ಕ್ಲಬ್ಬಿಗೆ ಹೋಗೋಣ ಎಂದುಕೊಂಡೆ. ಆದರೆ ಮನೆಯವರೆಲ್ಲಾ ಯಾರಮನೆಗೋ ಆರುತಿ ಅಕ್ಷತೆಗೆ ಹೋಗಿದ್ದವರು, ಜವಾನನಿಗೆ 'ಛತ್ರಿ ತೆಗೆದುಕೊಂಡು ಬಾ' ಎಂದು ಹೇಳಿ ಕಳುಹಿಸಿದ್ದುದರಿಂದ 'ಅವನು ಇದ್ದ ೨, ೩ ಛತ್ರಿಗಳನ್ನೆಲ್ಲಾ ಈಗತಾನೇ ತೆಗೆದುಕೊಂಡು ಹೋದ' ಎಂದು ಅಡಿಗೆಯವನು ಹೇಳಿದ. ನನಗೆ ಮಾಡಲೇನೂ ಕೆಲಸವಿಲ್ಲದಾಯಿತು. ಅಲ್ಲೇ ನನ್ನ ರೂಮಿನಲ್ಲಿ ಕುಳಿತುಕೊಂಡು ಆಸ್ಪತ್ರೆಗೆ ಸಂಬಂಧಪಟ್ಟ ಕಟ್ಟೆಲ್ಲಾ ಸರಿಯಾಗಿಯಾದರೂ ಇಡೋಣವೆಂದು ಬೀರೂ ಬಾಗಿಲು ತೆಗೆದೆ. ಹಾಗೆಯೇ ನೋಡಿದರೆ ವಿಪರೀತ ಹಳೇ ಡೈರಿಗ ಳಿದ್ದುವು. ಅದನ್ನು ನನ್ನ ಹಿಂದಿನವರು ಯಾರೋ ಬರೆದಿರಬೇಕು. ನೋಡಿ ನನಗೀಗ ಜ್ಞಾಪಕ ಬಂತು. ಬೆಂಗಳೂರಿನಲ್ಲಿದ್ದಾಗ ನನ್ನ ಸ್ನೇಹಿತನೊಬ್ಬನು 'ಇದರಲ್ಲಿ ಸ್ವಾರಸ್ಯವಿದೆ ಓದು' ಎಂದು ಕೊಟ್ಟಿದ್ದನು. ಒಂದು ಹಾಳೆ ತಿರುವಿ ಹಾಕಿದೆ. ಏನುಕಾರ್ಯದಿಂದಲೋ ಓದದೇ ಹಾಗೆಯೇ ಬಿಟ್ಟಿದ್ದೆ. ಬರೆದಿದುದರಲ್ಲಿ ಏನೋ ಸ್ವಾರಸ್ಯವಿದ್ದ ಹಾಗಿತ್ತು. ಹಾಗೇ ಎಲ್ಲಾ ಓದಿದೆ. ಅದೇ ಒಂದು ಕಥೆ. ಅದನ್ನು ಬೇರೇರೀತಿಯಲ್ಲಿ ಬರೆದರೆ ಅವರ ಸಾರವೆಲ್ಲಾ ಹೋಗುತ್ತೆಯಲ್ಲಾ ಎಂದುಕೊಂಡು ಅವರು ಹೇಗೆ ಬರೆದಿದ್ದರೋ ಹಾಗೆಯೇ ಬಂದಿದೇನೆ.

‡ ‡ ‡

ಅವರು ಬರೆದುದು:—ಕ್ಲಬ್‌ನಲ್ಲಿ ಆಟ ಜಾಗ್ರತೆಯಾಗೇ ಆಯಿತು. ಮನೆಯಲ್ಲಿ ಕುಳಿತಿರಲು ಬೇಜಾರಾಗಿ ಅಲ್ಲಿಯೇ ಬಳಿಯಲ್ಲಿರುವ ಹೊಲಗಳಲ್ಲಿ ತಿರುಗಾಡಲೆಂದು ಹೊರಟೆ. ಊರುಬಿಟ್ಟು ಒಂದು ಅಥವಾ ಒಂದೂವರೆ ಮೈಲಿ ಹೋಗಿರಬಹುದು. ಅಷ್ಟರಲ್ಲಿ ಕತ್ತಲಾಯಿತು. ಆದರೆ ಬೆಳದಿಂಗಳಿನ

ದಿವಸ. ಇಂಥಹ ದಿವಸಗಳನ್ನು ಕಳೆಯಲು ಎಲೆಕ್ಟ್ರಿಕ್ ದೀಪವಿಲ್ಲದ ಹಳ್ಳಿಗಳೇ ಅನುಕೂಲ. ಆ ಸೌಂದರ್ಯಕ್ಕೆ ಮೆಚ್ಚಿ ಹಾಗೆಯೇ ಮುಂದೆ ಹೊರಟೆ. ಸ್ವಲ್ಪ ದೂರ ಹೋಗಿರಬಹುದು. ಅಷ್ಟರಲ್ಲಿ "ಗೊರ್ ಗೊರ್" ಎಂಬ ಶಬ್ದ, ನಾನಿದ್ದೆಡೆಯಿಂದ ನೋಡಿದರೆ ಯಾವುದೋ ಪ್ರಾಣಿಯಿರುವ ಹಾಗೆ ಕಾಣುತ್ತಿತ್ತು. ನಾನು ಡಾಕ್ಟರೇನೋ ನಿಜ; ಎಷ್ಟೋಬಾರಿ ಅರ್ಧರಾತ್ರಿಯಲ್ಲಿ ಎದ್ದು ಹೋಗಿ ರೋಗಿಗಳಿಗೆ ಔಷಧವೇನೋ ಕೊಟ್ಟು ಬಂದಿರುವೆನು. ಆದರೆ ಊರಿನಿಂದ ಇಷ್ಟು ದೂರದಲ್ಲಿ—ತೊಂದರೆಯಿಂದ ಕೂಗಿದರೂ ಕೇಳಿಸದಷ್ಟು ದೂರದಲ್ಲಿ—ಆ ಶಬ್ದವನ್ನು ಕೇಳಿ ಬೆಚ್ಚಿಬಿದ್ದೆ. ಏನು ಮಾಡಲೂ ತೋಚದಾಯಿತು. ಮೇಲಾಗಿ ಈಚೀಚೆಗೆ ಯಾರೋ "ಕೂಗುಮಾರಿ" ಎಂದು ಬೇರೇ ಹೆದರಿಸಿದ್ದರು. ಸ್ವಲ್ಪ ಹೊತ್ತಿನಮೇಲೆ ಪುನಃ ಅದೇ ಶಬ್ದ. ಆದರೆ ಈ ಬಾರಿ ಯಾರೋ ದುಃಖದಿಂದ ನರಳುತ್ತಿರುವ ಹಾಗೆ ಕೇಳಿಸಿತು. ಇದಾರು? ಯಾರಾದರೂ ಮನುಷ್ಯರೇ? ಇಷ್ಟಾದರೂ ನನ್ನ ಹೆದರಿಕೆ ತಪ್ಪಲಿಲ್ಲ. ಊರೊಳಗೆ ಓಡಿಹೋಗಿ ಯಾರನ್ನಾದರೂ ಕರೆತರಲೆ ಎನ್ನಿಸಿತು. ಅಷ್ಟರೊಳಗೆ ಇಲ್ಲಿ ಏನಾದರೂ ಅನಾಹುತವಾದರೆ? ಅಥವಾ ಯಾರಾದರೂ ದುಷ್ಟರು ಯಾರೊಬ್ಬನಿಗೋ ತೊಂದರೆ ಮಾಡಿರಬಹುದೇ? ಎಂದುಕೊಂಡೆ. ಸ್ವಲ್ಪ ಕೇಳಿದೆ. ಅದೇ ಕ್ಷೀಣ ಸ್ವರ. ಏನಾದರೂ ಆಗಲಿ ಹತ್ತಿರ ಹೋಗಿ ನೋಡಿಕೊಂಡೇ ಬರುವೆನೆಂದು ಮುಂದೆ ಹೊರಟೆ. ಆ ಪ್ರಾಣಿಯೂ ಮೇಲಕ್ಕೆದ್ದುವಂತೆ ಕೊಡವಿತು. ದೂರದಿಂದ ನೋಡಲು ಯಾರದೋ ತಲೆ ಹಿಂದೆ ಕೂದಲು ಕಾಣಿಸಿತು. ಹೆಂಗಸಿಗೆ ತಲೆಯಂತೆ ತೋರಿತು.

"ಯಾರದು?" ಎಂದೆ. ಉತ್ತರವೇ ಇಲ್ಲ.

ಪುನಃ "ಯಾರದು?" ಎಂದೆ. "ಯಾ ಕಾ ಮಿ" ಎಂದು ಹೆಂಗಸಿನ ಧ್ವನಿ.

"ಇಷ್ಟು ಹೊತ್ತಿನಲ್ಲಿ ಇಲ್ಲಿ ಏನು ಮಾಡುತ್ತೀ? ಯಾವ ಹಳ್ಳಿ ನಿನ್ನದು?" ಎಂದೆ.

"ಅದೆಲ್ಲಾ ನಿನ್ಗ್ಯಾಕ್ಬೇಕೆ. ನಿನ್ದಾರಿ ಹಿಡಿದು ಹೋಗಪ್ಪ" ಎಂದಳು.

ಕೋಪಬಂತು. "ಹಾಗೆಂದರೆ ಏನು? ಇಲ್ಲಿ ಯಾಕೆ ನರಳುತ್ತಾ ಬಿದ್ದಿರುತ್ತೀ. ರಾತ್ರಿ ಕೆಟ್ಟಪ್ರಾಣಿ ಯಾವುದಾದರೊಂದು ಬಂದು ನಿನಗೇನಾ

ವರೂ ತೊಂದರೆ ಮಾಡಿದರೇನುಗತಿ ಹೋಗು. ನಿಮ್ಮ ಹಳ್ಳಿಗೆ ಹೋಗು" ಎಂದು ಹೇಳಿ ಕಳಿಸಲು ಸ್ವಲ್ಪ ಮುಂದೆ ಹೊರಟೆ.

"ನನ್ನ ಗೋಳು ನಿನಗ್ಯಾಕೆ ಸಾಮಿ. ನೀನಿಷ್ಟು ನೀನು ಹೋಗಪ್ಪಾ" ಎಂದಳು.

ಬೆಳದಿಂಗಳಿನ ಬೆಳಕಿನಲ್ಲಿ ನೋಡಿದರೆ ಯಾವಳೋ ಒಬ್ಬಳು ಕೂಲಿಯವಳು. ಹದಿನೆಂಟು ಅಥವಾ ಹತ್ತೊಂಭತ್ತು ವರುಷವಿರಬಹುದು. ನೋಡಲು ಸೌಮ್ಯ ರೂಪ; ಅತಿ ಲಕ್ಷಣವಂತೆಯಲ್ಲದಿದ್ದರೂ ಕುರೂಪಿಯಲ್ಲ. ಅವಳ ಮೈ ಕೈ ನೋಡಿದರೆ ಯಾವ ರೋಗವೂ ಇದ್ದ ಹಾಗೆ ಲಕ್ಷಣಗಳಿಲ್ಲ. ಅಷ್ಟಾದರೂ ಇವಳ ದುಃಖವೇನು? ಏನಾದರೂ ಆಗಲೆಂದು "ಇರಲಿ. ನಿಮ್ಮ ಹಳ್ಳಿಗೆ ನೀನೇನು ಹೋಗುತ್ತೀಯೋ ಅಥವಾ ನಾನೇನಾದರೂ ಬಂದು ಕಳುಹಿಸಲೋ?" ಎಂದು ಬೆದರಿಸಿದೆ.

"ನಿನಿಗ್ಯಾಕಪ್ಪಾ ಸಾಮಿ ನನ್ನೊಡವೆ. ನಿಮ್ಮ ದಾರಿ ಹಿಡಿದುಕೊಂಡು ಹೋಗಲಿಕ್ಕಿಲ್ಲವೇ?" ಎಂದು ಹೇಳಿ ಎದ್ದು ಓಡಿ ಹೊರಟು ಹೋದಳು.

ಇವಳೀನಡತೆಗೆ ನಾನು ಪುನಃ ಬೆಚ್ಚಿಬಿದ್ದೆ; ನಾನು ಹೆದರಿಸಿದ್ದುದಕ್ಕೆ ಇವಳೆಲ್ಲಾದರೂ ಕೆರೆ ಕೊಳಗಳಲ್ಲಿ ಬಿದ್ದರೆ? "ಹಾಳಾಗಿ ಹೋಗಲಿ. ಅವಳಗೊಡವೆ ನನಗೇಕೆಂದು" ಹಿಂತಿರುಗಲು ಹೊರಟೆ. ಆದರೆ ನನ್ನ ಮನಸ್ಸಿನಲ್ಲಿ ಇನ್ನೂ ಅರುಕಳು. ಅವಳಲ್ಲೇ ಎಲ್ಲಾದರೂ ಅವಿತಿರುವಳೋ ಏನೋ ಎಂದು ಇನ್ನೂ ಸ್ವಲ್ಪಮುಂದೆ ಹೊರಟೆ. ಎಲ್ಲೂ ಅವಳ ಸುಳಿವು ತೋರಲಿಲ್ಲ. ದೂರದಲ್ಲೊಂದು ದೀಪವು ಹಳ್ಳಿಯಿದೆ ಎಂದು ತೋರಿಸುತ್ತಿತ್ತು. ಹಾಗಾದರೆ ಅವಳು ಅದೇ ಹಳ್ಳಿಯವಳಿರಬೇಕು. ಅಲ್ಲಿಗೇ ಹೋಗಿರಬೇಕೆಂದು ಊಹಿಸಿ ಹಿಂತಿರುಗಿದೆ. ಪುನಃ ಅದೇ ಸ್ಥಾನದಲ್ಲಿ ಅವಳೇ ಮಲಗಿದ್ದಳು! ಸ್ವಲ್ಪ ಹೊತ್ತು ನೋಡಿದೆ. ಸ್ವಲ್ಪವೂ ಶಬ್ದವಿಲ್ಲ; ಕಲ್ಲುಗುಂಡಿನಹಾಗೆ ಬಿದ್ದಿದ್ದಳು: ನನಗೆ ಆಶ್ಚರ್ಯ, ಬೇರೆ ಹೆದರಿಕೆ! ಪುನಃ "ಯಾರದು? ಯಾರದು?" ಎಂದು ಕೂಗಿದೆ. ಸ್ವಲ್ಪವೂ ಸಪ್ಪಳವಿಲ್ಲ. ಹಾಗಾದರೆ ಅವಳ ಗತಿ ಏನು? ಹತ್ತಿರಹೋಗಿ ನೋಡಲೇ? ಆ ಸ್ಥಳದಲ್ಲಿ ಅವಳಬಳಿ ನಾನೊಬ್ಬನೇ ಇರಲು ಭಯ ಬೇರೆ! ಆದರೂ ಚಿಂತೆಯಿಲ್ಲವೆಂದು ಹತ್ತಿರ ಹೋದೆ. ನನ್ನ ಬೂಟ್ಸಿನ

ಶಬ್ದ ಕೇಳಿಸಿರಬೇಕು! ಎದ್ದವಳೇ ಅಳುತ್ತ ಅಳುತ್ತಾ ಹಳ್ಳಿಯ ಕಡೆಗೆ ಓಡಿ ಹೊರಟುಹೋದಳು; ನಾನು ಸ್ವಲ್ಪಹೊತ್ತು ಅಲ್ಲೇ ನಿಂತುಕೊಂಡು ನೋಡಿದೆ. ಸ್ವಲ್ಪ ಮುಂದೆ ಹೋಗಿ ಬೆಳಕಿನಲ್ಲಿ ನೋಡಿದೆ. ಅದೇ ಮೂರ್ತಿಯು ಪುನ ಓಡಿಹೋಗುತ್ತಲೇ ಇತ್ತು. ಇನ್ನೇನೂ ಬರಲಾರಳೆಂದು ಹಿಂತಿರುಗಿದೆ. ಆದರೂ ಅವಳ ಯೋಚನೆಯೇ ಯೋಚನೆ. ಅವಳು ಅಲ್ಲಿ ಮಲಗಿದ್ದುದು ಕಣ್ಣುಮುಂದೆ ನಿಂತಿರುವಂತೆಯೇ ಕಾಣಿಸುತ್ತಿತ್ತು. ಏನಾದರೂ ಚಿಂತೆಯಿಲ್ಲ ಬೆಳಗಾದ ತಕ್ಷಣದಲ್ಲಿಯೇ ಆ ಹಳ್ಳಿಗೆ ಹೋಗಿ ವಿಚಾರಿಸಬೇಕೆಂದುಕೊಂಡೆ. ಅಥವಾ ಊರೊಳಗೆ ಹೋಗಿ ಪೋಲಿಸಿಗೆ ವಿಚಾರ ತಿಳಿಸಲೇ ಎಂಬ ಆಲೋಚನೆ ಬೇರೆ? ಬೆಳಗಾದಮೇಲೆ ನಾನು ಹಳ್ಳಿಗೆ ಹೋಗುವುದಕ್ಕೆ ಆಗದಿದ್ದರೆ ಅವಳು ಮಲಗಿದ್ದ ಸ್ಥಳದವರಿಗಾದರೂ ಹೋಗಿಬರಬೇಕೆಂದು ಯೋಚಿಸುತ್ತಾ ಮನೆಗೆ ಬಂದೆ."

ಇಷ್ಟುಹೊತ್ತಿಗೆ ಸರಿಯಾಗಿ ನಮ್ಮ ಮ ನೆ ಯ ವ ರೂ ಬಂದರು. ಆ ಪೋರ ದಾರಿಯಲ್ಲಾ ಸಕ್ಕರೆಮಾಡಿಕೊಂಡು, ಅವರಮ್ಮನ ಬಗಲಿನಲ್ಲಿ ಕುಳಿತುಕೊಂಡು ಅಳುತ್ತಾ ಬಂದ. ನನ್ನ ಡೈರಿ ಮುಚ್ಚಿಟ್ಟು, ಅವನನ್ನು ಕರೆದುಕೊಂಡು "ಯಾಕಳುತ್ತೀ? ಏನು ಬೇಕು?" ಎಂದು ಕೇಳಿದೆ. 'ಸಕ್ಕರೆ' ಎಂದ. ಅಲ್ಲೇ ಬಳಿಯಲ್ಲೇ ನಿಂತಿದ್ದ ಅವನಕ್ಕ "ಎರಡು ಪಟ್ಟು ತಿಂದಿದಾನಣ್ಣಯ್ಯ. ನಂದೂ ಬೇಕಂತೆ" ಎಂದಳು. "ಸ್ವಲ್ಪ ಕೊಡಮ್ಮಯ್ಯ" ಎಂದು ಹೇಳಿದೆ. "ಅಷ್ಟೊಂದು ತಿಂದರೆ ಯಾತಕ್ಕೆ ಬರಬೇಕು. ಕೊಡಿಸ್ಬೇಡಿ" ಎಂದು ಒಳಗಿನಿಂದ ಅಪ್ಪಣೆ—ಅಂತೂ ಅವನಿಗೆ ಸ್ವಲ್ಪ ಸಕ್ಕರೆ ಕೊಡಿಸಿ 'ಎಲೆ ಹಾಕು, ಊಟಕ್ಕೆ ಬರುತ್ತೇನೆ' ಎಂದು ಹೇಳಿ ಕಳುಹಿಸಿ ಪುನಃ ಡೈರಿಯನ್ನು ತೆಗೆದೆ—

ಡೈರಿಯದು—"ರಾತ್ರಿಯಲ್ಲಾ ಅದೇ ಯೋಚನೆ. ನಿದ್ರೆಯಲ್ಲೂ ಅವಳು ಅಲ್ಲೇ ನರಳುತ್ತಾ ಬಿದ್ದಿರುವ ಹಾಗೆ ಭಾವನೆ. ಹೀಗಾಗಿ ಕೋಳಿ ಕೂಗುವುದೇ ತಡ ಎದ್ದೆ. ಸ್ವಲ್ಪ ಬೆಳಗಾಗಲೆಂದು, ಅಷ್ಟರೊಳಗಾಗಿ ಸ್ನಾನ ಮಾಡಿ ಕಾಫಿ ಕುಡಿದು ಸಿದ್ಧನಾದೆ. ಐದು ಘಂಟೆಯಾದ ತಕ್ಷಣವೇ ಹೊರಟೆ. ನಿನ್ನೆಯಂತೆಯೇ ಆ ಸ್ಥಳಕ್ಕೆ ಬಂದು ನೋಡಿದರೆ ಏನೂ ಇರಲಿಲ್ಲ. ಅಲ್ಲಿ ಇಷ್ಟು

ಸ್ವಲ್ಪ ಹುಡುಕಿದೆ. ಎಲ್ಲಿ ಯಾರೂ ಕಾಣಲಿಲ್ಲ. ಹಳ್ಳಿ ಎಷ್ಟು ದೂರವೆಂದು ನೋಡಿದೆ. ಏನಿಲ್ಲವೆಂದರೂ ಎರಡು ಮೈಲಿ ಇರಬಹುದೆಂದುಕೊಂಡೆ. ಇಷ್ಟು ಹೊತ್ತಿಗೆ ಏಳುಗಂಟೆಯಾಗಿದ್ದಿತು. ನಾನು ಹಿಂತಿರುಗಿ ಆಸ್ಪತ್ರೆಗೆ ಹೋಗು ವಷ್ಟು ಹೊತ್ತಿಗೆ ಬಹಳ ಹೊತ್ತಾಗುತ್ತೆಂದು ತಿಳಿದೂ, ಅವಳಿಗೆ ತೊಂದರೆ ಏನೂ ಆಗಿರಲಾರದೆಂದು ಊಹಿಸಿಯೂ ಹಿಂತಿರುಗಿದೆ. ಆಸ್ಪತ್ರೆಗೆ ಹೋದೆ. ಹೀಗೆಯೇ ಸಾಯಂಕಾಲದೊಳಗಾಗಿ ಆ ವಿಚಾರವೇ ಮರೆತುಬಿಟ್ಟಂತಾಯಿತು.

ಸಾಯಂಕಾಲ ಟೆನಿಸ್ ಆಡುತ್ತಿದ್ದೆ. ನನ್ನ ಜವಾನಾ ಬಂದು "ಸ್ವಾಮಿ, ಯಾರೋ ಹಳ್ಳಿಯವರು ಒಂದು ಇಂಪೇಷಂಟ್ (Inpatient) ತಂದಿದಾರೆ. ಅವಳ ಪ್ರಾಣಹೋಗುತ್ತಾ ಇದೆಯಂತೆ, ಜಾಗ್ರತೆ ಬರಹೇಳಿದರು" ಎಂದ. ನನಗೆ ಆ ಹೆಂಗಸಿನ ಜ್ಞಾಪಕವಾಯಿತು. ಆಟ ಬಿಟ್ಟವನೇ ಸೈಕಲ್ ಮೇಲೆ ಆಸ್ಪತ್ರೆಗೆ ಹೋದೆ. ಗಾಡಿಯಲ್ಲಿ ಒಬ್ಬ ಹೆಂಗಸಿನ ಆಕೃತಿ. ತಲೆ ಕೈಕಾಲಿ ಗೆಲ್ಲಾ ಬಟ್ಟೆ ಕಟ್ಟಿಬಿಟ್ಟಿದ್ದರು. ಒಳಗೆ ಕರೆದುಕೊಂಡು ಬರುವಂತೆ ಹೇಳಿ ಒಳಗೆ ಹೋದೆ. ಅವಳನ್ನು ಕರೆತಂದಮೇಲೆ ಮೈ, ಕೈಗೆ ಕಟ್ಟಿದ್ದ ಬಟ್ಟೆ ಯನ್ನು ಬಿಚ್ಚಿಸಿನೋಡಿದರೆ ಅದೇ ಹೆಂಗಸು!! ನನಗೆ ಅವಳ ಆ ವರ್ತನೆಯೇ ತಿಳಿಯದಾಯಿತು. ಅವಳಿಗೆ ಮೈಮೇಲೆ ಪ್ರಜ್ಞೆಯಿರಲಿಲ್ಲ. ಕೈ ಮೈಗೆಲ್ಲಾ ಸರಿಯಾಗಿ ಔಷಧಿ ಹಾಕಿ, ಬಟ್ಟೆ ಕಟ್ಟಿ ಒಂದು ಕೋಣೆಯಲ್ಲಿ ಮಲಗಿಸಿ ಬಂದು, ಅವಳ ಜೊತೆಯಲ್ಲಿ ಬಂದವರನ್ನು "ನಿಮ್ಮದು ಯಾವ ಹಳ್ಳಿ?" ಎಂದು ಕೇಳಿದೆ. "ಇಲ್ಲೆ ಐತಲ್ಲಿ ಸ್ವಾಮಿ—ಹೊಸಳ್ಳಿ" ಎಂದರು. ಅದೇ ನಾನು ಹೋಗಬೇಕೆಂದಿದ್ದ ಹಳ್ಳಿ. "ಈ ಹೆಂಗಸು ಯಾರು? ಹೀಗೇಕೆ ಘಾಯವಾಯಿತು? ಎಂದು ಕೇಳಿದೆ. "ಇವಳು ನಮ್ಮಳ್ಳಿಯವಳೇ ಬುದ್ದಿ. ತಂದೆ ತಾಯಿ ಯಾರೂ ಇಲ್ಲ. ಅವಳಣ್ಣೊಬ್ಬನಿದಾನೆ. ಇವಳೂ ಅವನೂ ಕೂಲಿ ಮಾಡಿ ತಿಂತಾರೆ. ಇವತ್ತು ಹೊತಾರೆ ಬಲು ಹೊತ್ತಾದರೂ ಇವಳು ಗುಡ್ಲಿಂದ ಹೊರಗೆ ಬರ್ಲೇ ಇಲ್ಲ. ಮಧ್ಯಾಹ್ನ ಹೋಗಿ ನೋಡಿದರೆ ಇವಳಿಗೆ ಘಾಯಾಗಿ ಮಲಗ್ಬಿಟ್ಟಿದ್ಳು. ಇವಳಣ್ಣ ಇದ್ದಿದ್ದೇ ಇಲ್ಲ. ಮನೆ ಒಳಗೆಲ್ಲಾ ರಕ್ತಮಯ. ಸರಿ, ನಾವು ಅವಳನ್ನು ಇಲ್ಲಿಗೆ ಕರೆದುಕೊಂಡು ಬಂದು ಹೊತ್ತು ಹಾಕಿದೆವು" ಎಂದರು. ನನಗೆ ವಿಶೇಷವೇನೂ ತಿಳಿಯಲಿಲ್ಲಿ. ಏನೋ ಅನಾಹುತ ನಡೆದಿದೆ ಎಂದಷ್ಟು ಗೊತ್ತು. ಅವರನ್ನು ಕಳುಹಿಸಿ ಅವಳ ಬಳಿ

ಹೋದೆ. ಮೊದಲು ಹೇಗಿದ್ದಳೋ ಹಾಗೇವೇ ಇದ್ದಳು. ಇಷ್ಟುಹೊತ್ತಿಗೆ ಊಟಕ್ಕೆ ಹೊರಟೆ — ಊಟಮಾಡಿದವನೇ ಪುನಃ ನನ್ನ ಡೈರಿ ತೆಗೆದೆ. "ಎಂದೂ ಇಲ್ಲದ ಓದು ಇವತ್ತೇನು?" ಎಂದು ಪ್ರಶ್ನೆಯಾಯಿತು. "ಸುಮ್ಮಗಿರು—ಇದೂ ಒಂದು ಕಥೆ" ಎಂದು ಹೇಳಿ ಓದಲು ಪ್ರಾರಂಭಿಸಿದೆ.

ಡೈರಿಯಲ್ಲಿ ಹೀಗಿತ್ತು "ಮನೆಗೆ ಹೋಗಿ ಊಟ ಜಾಗ್ರತೆಯಾಗಿ ಮುಗಿಸಿಕೊಂಡು ಬಂದೆ; ರೋಗಿಗೆ ಔಷಧಿ ಹಾಕಿಸಿದೆ--ಮೊದಲಿನಹಾಗೆಯೇ ಇದ್ದಾಳೆ. ಆದರೆ ಈ ಸಲ "ಅಣ್ಣಾ" ಎಂಬ ಸ್ವರ. ತನ್ನ ಅಣ್ಣನನ್ನು ಜ್ಞಾಪಿಸಿಕೊಳ್ಳುತ್ತಿರಬೇಕೆಂಬುದೇ ನನ್ನ ಭಾವನೆ—ರಾತ್ರಿ ಏನೂ ವಿಶೇಷವಿಲ್ಲ. ಮರುದಿವಸ "ಬೆಳಿಗ್ಗೆ ಆಸ್ಪತ್ರೆಗೆ ಹೋದವನೇ ಅವಳ ಬಳಿ ಹೋದೆ. ಬಹಳ ಜ್ವರ ಬಂದಿದೆ. ಮೈ ಕೈ ನೋವಿನ ಸಂಕಟ. ಔಷಧಿ ಹಾಕಿ ಮುಲಾಮು ಕಟ್ಟಿಸಿದೆ. "ಅಣ್ಣಾ, ಅಣ್ಣಾ" ಎಂಬುದೊಂದೇ ಸ್ವರ. ಇವಳಣ್ಣನ್ನ ಸರಿಯಾಗಿ ತಿಳಿದುಕೊಂಡು ಅವನೆಲ್ಲಿರುವನೋ, ಈ ಅನಾಹುತಗಳಿಗೆ ಕಾರಣವೇನೋ ತಿಳಿಯಬೇಕು.

ಊಟಮಾಡಿ ಮನೆಯಲ್ಲಿರುವಾಗ, ಕೆರೆಯಲ್ಲಿ ಬಿದ್ದ ಯಾವನೊಬ್ಬ ಶರೀರವೋ ಪರೀಕ್ಷೆಗೆ (Post-mortem) ಬಂದಿರುವದಾಗಿ ತಿಳಿಯಿತು. ಬರುತ್ತೇನೆಂದು ಅವರಿಗೆ ಹೇಳಿ ಕಳುಹಿಸಿ, ಸ್ವಲ್ಪ ಹೊತ್ತಿನಮೇಲೆ ಹೊರಟೆ. ಪರೀಕ್ಷೆಯಲ್ಲಿ, ಕತ್ತು ಹಿಸಿಕಿ ಸಾಯಿಸಿ ಅವನನ್ನು ಕೆರೆಯಲ್ಲಿ ಹಾಕಿರಬೇಕೆಂದು ತಿಳಿಯಿತು. ಅದೇ ರೀತಿ ಬರೆದಿಟ್ಟೆ. ವಿಚಾರಿಸಿದ್ದರಲ್ಲಿ ಅವನೂ ಹೊಸಹಳ್ಳಿಯವನೆಂದೂ, ಕಾಹಿಲೆಯಿಂದ ಮಲಗಿದ್ದವಳ ಅಣ್ಣನೆಂದೂ, ಯಾರಿಂದ ಆ ರೀತಿಯಾಯಿತೋ ತಿಳಿಯದೆಂದೂ, ಹಳ್ಳಿಯಲ್ಲಿ ಇವರಿಬ್ಬರು ಬಲು ಒಳ್ಳೆಯವರೆಂದೂ, ಈಚೀಚೆಗೆ ಯಾರೋ ಇಬ್ಬರು (ಸಾಹುಕಾರರಿರಬೇಕು) ಇವರ ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದರೆಂದೂ ತಿಳಿಯಿತು. ಆದರೆ ಅವರಿಬ್ಬರು ಯಾರೆಂದು ತಿಳಿಯದಾಯಿತು. ಆದುದರಿಂದಲೇ ವಿಚಾರವನ್ನೆಲ್ಲಾ ಅವಳಿಂದಲೇ ತಿಳಿಯಬೇಕೆಂದುಕೊಂಡೆ '—ಮರುದಿವಸ—" ಅವಳಿಗೆ ನಿನ್ನೇಗಿಂತಲೂ ವಾಸಿ "ಅಣ್ಣನೆಲ್ಲಿ?" ಅವರಿಬ್ಬರೆಲ್ಲಿ? ಎಂದು ಇನ್ನೂ ಏನೇನೋ ಅಸಂಬದ್ಧ ಪ್ರಲಾಪನೆ. ಅವಳಣ್ಣನು ಸತ್ತುಹೋದನೆಂದಾದರೂ ಅವಳಿಗೆ

ಹೇಗೆ ಹೇಳುವುದು ? ಕೇಳಿದರೆ ಎದೆಯೊಡೆದು ಎಲ್ಲಿ ಸಾಯುವಳೋ ಎಂದು ಭಯ. ಆದರೂ ಹೇಗಾದರೂ, ಇನ್ನು ಸ್ವಲ್ಪ ದಿವಸಗಳು ಬಿಟ್ಟು ಮೇಲಾದರೂ ಹೇಳಲೇ ತೀರಬೇಕಷ್ಟೆ ? "

ಇಲ್ಲಿಂದ ಮುಂದೆ ಒಂದು ವಾರದವರಿವಿಗೂ ಅವಳ ವಿಚಾರವಾಗಿ ಡೈರಿಯಲ್ಲಿ ಏನೂ ಇಲ್ಲ. ಇಷ್ಟು ಹೊತ್ತಿಗಾಗಲೇ ಒಂಭತ್ತುವರೆ ಘಂಟೆಯಾಗಿದ್ದಿತು. ಯಾರೊಬ್ಬಳೋ ನನ್ನೆದುರಿಗೂ ಬಂದು ನಿಂತುಕೊಂಡಹಾಗೆ ಭಾಸವು. ಎಲ್ಲಾ ಹುಡುಗರೂ ನಿದ್ರೆ ಹೋಗುತ್ತಿದ್ದರು. ಕಥೆ ಓದಿಯೇ ಮಲಗಬೇಕೆಂದುಕೊಂಡೆ.

" ಮಲಗಲು ಇನ್ನೂ ಹೊತ್ತಾಗಿಲ್ಲವೇ ? " ಎಂಬ ಪ್ರಶ್ನೆ ಬಂತು. ಕೇಳಿದವಳು ಶಾರದ.

" ಇಲ್ಲ, ಬಹು ಸ್ವಾರಸ್ಯವಾಗಿದೆ. ಎಷ್ಟು ಹೊತ್ತಾದರೂ ಓದಿಯೇ ಮಲಗುವೆನು " ಎಂದೆ.

" ನಾನು ಓದಲೇ " ಎಂದಳು.

" ಬೇಡ ಶಾರದ, ನೀನು ಹೆದರುತ್ತೀ " ಎಂದೆ.

" ನೀವಿರುವಾಗ ನನಗೇನು ಹೆದರಿಕೆ " ಎಂದಳು.

" ಹಾಗಾದರೆ ಓದು " ಎಂದೆ. ಅವಳು ಸುಮ್ಮನಾದಳು. ಓದಲು ಪ್ರಾರಂಭಿಸಿದಳು. ಒಂದು ವಾರದ ಹಾಳೆ ತಿರುವಿ ಹಾಕಿದ ಮೇಲೆ ಪುನಃ ಆ ರೋಗಿಯ ಸಮಾಚಾರ.

" ಈಗ ಅವಳಿಗೆ ಹುಷಾರಾಗಿದೆ. ಎದ್ದು ಕುಳಿತುಕೊಳ್ಳುತ್ತಾಳೆಯೇ ಹೊರ್ತು ನಡೆಯಲು ಶಕ್ತಿ ಸಾಲದು. ನನ್ನ ಗುರ್ತು ಅವಳಿಗೆ ಹತ್ತಿದಹಾಗೆ ಕಾಣಿಸುತ್ತದೆ. ಹತ್ತಿರ ಹೋದರೆ ಸ್ವಲ್ಪ ಹೊತ್ತು ಬಿರಬಿರನೆ ನೋಡುತ್ತಾಳೆ. ನಂತರ ತಲೆ ತಿರುಗಿಸುತ್ತಾಳೆ — ಆಗಾಗ್ಗೆ, " ಅಯ್ಯೋ ಅಣ್ಣಾ " ಎನ್ನುತ್ತಾಳೆ.

" ನಿನ್ನದು ಯಾವ ಊರು ? " ಎಂದು ಕೇಳಿದೆ.

" ಹೊಸಳ್ಳಿ " ಎಂದಳು.

" ಹೆಸರೇನು ? "

" ಈರಿ "

" ಆ ದಿನ ರಾತ್ರಿ ನೀನೇ ಅಲ್ಲವೆ ಆ ಹೊಲದಲ್ಲಿ ಮಲಗಿದ್ದುದು ? " ಎಂದೆ. ಉತ್ತರವಿಲ್ಲ.

" ಹಾಗೇಕೆ ಮಲಗಿದ್ದೆ ? " ಎಂದೆ. ಬರೀ ನಿಟ್ಟುಸಿರು ಬಿಟ್ಟಳು. ಆ ದುಃಖದ ಯಾತನೆ ನನಗಾಯಿತು.

" ಅಲ್ಲಿ ನಿನ್ನವರಾರಾದರೂ ಇದ್ದಾರೆಯೇನು ? "

" ನನ್ನಣ್ಣ ಇದ್ದಾನೆ. " ಅವಳಣ್ಣನು ಇನ್ನು ಇಲ್ಲಿ ಇಲ್ಲವೆಂಬುದು ಹೇಳುವುದಾದರೂ ಹೇಗೆ ?

" ತಂದೆತಾಯಿ ? " " ಇಲ್ಲ "

" ಇತರೇ ನಂಟರು ? " " ಇಲ್ಲ "

" ನೀವು ಏನು ಮಾಡುತ್ತೀರಿ ? "

" ಕೂಲಿ " ಎಂದಳು.

" ಈ ಘಾಯಗಳೆಲ್ಲಾ ನಿನಗೇಕಾಯಿತು ? " ಎಂದು ಕೇಳಿಯೇಬಿಟ್ಟೆ. ಉತ್ತರವಿಲ್ಲ.

" ನನ್ನಣ್ಣ ಬದುಕಿದಾನೆಯೇ ಸ್ವಾಮಿ " ಎಂದಳು.

" ಇಲ್ಲ " ಎಂದೆ—" ಅಯ್ಯೋ ದೇವ್ರೆ ? ಅಯ್ಯೋ ಅಣ್ಣಾ " ಎಂದು ಅಳುತ್ತಾ ಕುಳಿತಳು.

ನನಗೆ ಅಲ್ಲಿರಲಾಗಲಿಲ್ಲ. ಸಮಾಧಾನ ಮಾಡುವಂತೆ ಇತರರಿಗೆ ಹೇಳಿ ಹೊರಟುಹೋದೆ. ಮರುದಿವಸ ಆಸ್ಪತ್ರೆಗೆ ಹೋದಮೇಲೆ ಅವಳ ದೇಹ ಸ್ಥಿತಿ ನೋಡಲು ಹೋದೆ. ನನ್ನನ್ನು ಕಂಡ ತಕ್ಷಣವೇ ನನ್ನ ಕಾಲಿಗೆ ಬಿದ್ದು 'ನೀನೇ ನನ್ನ ದೇವರು, ನೀನೇ ನನಗೆ ಗತಿ ಸ್ವಾಮಿ " ಎಂದತ್ತಳು. ಅವಳನ್ನು ಸಮಾಧಾನ ಪಡಿಸಿ " ನನ್ನ ಕೈಲಾದಷ್ಟು ಸಹಾಯ ಮಾಡುತ್ತೇನೆಂದೆ. "

“ ನನ್ನಿಂದ ನಮ್ಮಣ್ಣ ಸತ್ತ ಸ್ವಾಮಿ, ನನಗಿನ್ನ್ಯಾರೂ ಗತಿಯಿಲ್ಲ. ನಮ್ಮ ಹಳ್ಳಿಗೆ ಹೋದರೆ ಅವರಿಬ್ಬರ ಗಲಾಟೆ. ಮಾನದಿಂದ ಇರುವ ಹಾಗಿಲ್ಲ ಸ್ವಾಮಿ. ನಿಮ್ಮ ಹತ್ತಿರಲೇ ಸೇರಿಬಿಡ್ತೇನೆ. ಬೇಕಾದರೆ ನೀವು ಬದುಕಿಸಿ, ಇಲ್ಲವಾದರೆ ಸಾಯಿಸಿ ಸ್ವಾಮಿ ” ಎಂದು ಗೊಳೋ ಎಂದು ಗೋಳಿಟ್ಟಳು. ‘ ಅವರಿಬ್ಬರು ’ ಎಂದರೆ ಯಾರು ಎಂದು ಕೇಳಿದೆ—

“ ಅದೇ ನಮ್ಮ ಗೌಡ. ಈ ಊರಿನ ಆ ಸಾಹುಕಾರ ದ್ಯಾಮಣ್ಣ. ಅವರಿಬ್ಬರೂ ಸೇರಿದರೆ ಹಳ್ಳಿಗೆ ಮಾನ ಇಲ್ಲ ಸ್ವಾಮಿ. ನಾಯೀನೇ ತೋಳಾ ಆದ್ರೆ ಕುರಿಮಂದೆ ಕಾಯೋದು ಹೇಗೆ ಸ್ವಾಮಿ ? ಮೇಲಾಗಿ ಆ ಗೌಡನಮೇಲೆ ದೂರು ಹೇಳುವುದಕ್ಕೆ ಯಾರಾದರೂ ಹೋಗುತ್ತಾರೆ ಎಂದು ತಿಳಿದರೆ ಅವರನ್ನ ಕೊಂದುಹಾಕಿಸಿ ಬಿಡುತ್ತಾರೆ ಸ್ವಾಮಿ. ಹಾಗೇನೇ ಮತ್ತೆ ನಮ್ಮಣ್ಣ ಸತ್ತಿರೋದು, ನನ್ನ ಉಳಿಸುವುದಕ್ಕೆ ಹೋಗಿ ಅವನು ಸತ್ತ ಸ್ವಾಮಿ— ಬಂಗಾರದಂಥ ಮನುಷ್ಯ ” ಎಂದಳು.

ನನ್ನ ಮನಸ್ಸು ಕರಗಿತು. ಆ ಸಾಹುಕಾರರ ಕಾಟವನ್ನು ತಡೆಯಲಾರದೆ ಆ ದಿವಸ ರಾತ್ರಿ ಅವಳು ಹೊಲದಲ್ಲಿ ಬಂದು ಮಲಗಿರಬೇಕೆಂದುಕೊಂಡೆ. ಆದರೆ ಆ ಸಾಹುಕಾರನು ಇವರಿಗೆ ಗುರುತಾದುದು ಹೇಗೆ ? ಇದೇ ಸಂಶಯವನ್ನು ಅವಳನ್ನೇ ಕೇಳಿದೆ.

“ ನಿಮಗೇನೋ ಕೈತುಂಬಾ ದುಡ್ಡು ಬರುತ್ತದೆ. ಸಾಲಾ ಗೀಲಾ ಕೇಳೋದಿಲ್ಲ. ಆದರೆ ನಾವು ಬಡವರೇನು ಮಾಡಬೇಕು ಸ್ವಾಮಿ ? ಅಂಥಾ ಸಾಹುಕಾರರ ಸಹಾಯವಿಲ್ಲದೆ ನಮ್ಮ ಪಾಡು ಇಲ್ಲಸ್ವಾಮಿ. ನಮ್ಮಣ್ಣ ಮೊದಲು ಗೌಡರ ಹತ್ರ ಸಾಲಾ ತಂದ. ಒಂದು ದಿವಸ ಈ ಗೌಡ್ರು ಸಾಹುಕಾರರನ್ನು ಕರೆತಂದರು. ಅವರು ಒಳ್ಳೆಯವರ ಹಾಗೆ ತೋರಿದರು. ಆಮೇಲೆ ಸಾಲಾ ಕೇಳಿದಾಗೆಲ್ಲಾ ಕೊಡುವರು. ಎರಡುದಿವಸ ತಡಾ ಆದರೂ ಬಡ್ಡಿ ಬಿಟ್ಟು ಹಣ ತೆಗೆದುಕೊಳ್ಳುವರು. ಆಗಾಗ್ಗೆ ನಮ್ಮ ಗುಡಿಸಲಿಗೆ ಬಂದು ನಮ್ಮಣ್ಣನ್ನ ವಿಚಾರಿಸಿಕೊಂಡು ಹೋಗುವರು. ನಾವುಮಾಡಿದ ಕೆಲಸಾನ್ನೆಲ್ಲಾ ಮೆಚ್ಕೊಳ್ಳೋರು. ಆದರೆ ಆಮೇಲೆ ಅವನೆಂಥಾ ಮನುಷ್ಯಾ ಎಂದು ತಿಳಿಯಿತು ಸ್ವಾಮಿ. ಇದನ್ನ ನಮ್ಮಣ್ಣನ ಮುಂದೆ ಹೇಳಿದೆ. ಅವನಿಗೆ ಸಿಟ್ಟುಬಂದು

ಸಾಹುಕಾರರಮೇಲೆ ರೇಗಿದ. ಅವರಿಗೂ ಬಲು ಸಿಟ್ಟುಬಂತು. ಆ ವಿಪರೀತ ಸಾಲಾನೆಲ್ಲಾ ಹಿಂದಕ್ಕೆ ಕೊಡು ಎಂದು ತಗಾದೆ ಮಾಡಿದರು. ಇಲ್ಲದಿದ್ದರೆ ಜೈಲಿಗೆ ಕಳುಹಿಸುತ್ತೇನೆಂದು ಹೆದರಿಸಿ ಹೊರಟುಹೋದರು. ನನ್ನಣ್ಣನ ಕೈಲಿ ಸಾಲಾನೆಲ್ಲಾ ಕೊಡಲಿಕ್ಕಾಗುವುದಿಲ್ಲವೆಂದು ನನಗೆ ಗೊತ್ತು. ಆದುದ ರಿಂದ ಅವನು ಜೈಲಿಗೂ ಹೋಗುತ್ತಾನೆಂದು ತಿಳಿದುಕೊಂಡೆ. ಅವನು ಹೋದರೆ ನನಗಿನ್ನಾರು ಗತಿ ? ಎಲ್ಲಾದರೂ ಹಾಳಾಗಿ ಹೋಗೋಣ ಎಂದು ಆದಿನ ರಾತ್ರಿ—ನೀವು ನನ್ನ ಮತ್ತೆ ಗುಡಿಸಲಿಗೆ ಕಳಿಸಿದ ರಾತ್ರಿ—ಆ ಹೊಲದಲ್ಲಿ ಬಂದು ಮಲಗಿದೆ. ಆದರೆ ನೀವು ಬಂದು ಮತ್ತೆ ನನ್ನ ಕಳುಹಿಸಿದಿರಿ. ಗುಡಿಸಲಿಗೆ ಹೋಪೆ ರೊಟ್ಟಿ ತಿಂದು ಮಲಗಬೇಕೆಂದಿದ್ದೆವು. ಆಗ ಮತ್ತಾರೋ ಬಾಗಿಲು ತಟ್ಟಿದರು. ನನಗಾಗಲೇ ಭಯ. ಆದರೆ ನನ್ನಣ್ಣ ಬಾಗಿಲು ತೆಗೆ ಎಂದ. ಬಾಗಿಲು ತೆಗೆದರೆ – ಆ ಸಾಹುಕಾರ. ಅವನ ಜೊತೆಯಲ್ಲಿ ಇನ್ನಿಬ್ಬರಾರೋ ಬಂದಿದ್ದರು. ಆ ಸಾಹುಕಾರ ಮತ್ತೆ ನಮ್ಮಣ್ಣನ್ನ ರೇಗಿಸಿದ. ಅವನು ರೇಗಿ ಹುಚ್ಚಾಬಟ್ಟೆ ಮಾತನಾಡಿದ. ಈ ಮಧ್ಯೆ ಅವನ ಜೊತೆಗೆ ಬಂದ ಅವರಿಬ್ಬರು ನನ್ನಣ್ಣ ಮೇಲೆ ಬಿದ್ದರು. ಅವನೂ ಕುಡುಗೋಲು ತೆಗೆದುಕೊಂಡು ಅವರಿಗೆರಡು ಪೆಟ್ಟು ಕೊಟ್ಟ. ಅವರು ಹಿಂದಿನಿಂದ ಬಂದು ಅವನಬಾಯಿಗೆ ಬಟ್ಟೆ ಕಟ್ಟಿ ಎಲ್ಲೋ ಎತ್ತಿಕೊಂಡು ಹೋಗಿಬಿಟ್ಟರು. ಆ ಸಾಹುಕಾರ ನನ್ನ ತಂಟೆಗೆ ಬಂದ. ನಾನು ನಮ್ಮಣ್ಣ ಬಿಟ್ಟುಹೋದ ಕುಡುಗೋಲಿನಿಂದಲೇ ಅವನಿಗೆರಡುಕೊಟ್ಟೆ. ಅವನ ಚಾಕೂನಿಂದ ನನಗೂ ಏಟು ಬಿತ್ತು. ನಾನು ಕೂಗಾಡಿದೆ. "ಅವನು ಹೆದರಿ ಹೋದ. ನನಗೆ ಪ್ರಜ್ಞೆ ತಪ್ಪಿತು. ಎದ್ದು ನೋಡಿದರೆ ಇಲ್ಲೇ ಇದ್ದೆ" ಎಂದಳು.

"ನಿಮ್ಮ ಗುಡಿಸಲಿಗೂ ಇತರ ಗುಡಿಸಲಿಗೂ ಎಷ್ಟು ದೂರ ?" ಎಂದೆ.

"ಸ್ವಲ್ಪ ದೂರಾನೇ ಸ್ವಾಮಿ. ಬಾಗಿಲ ಮುಚ್ಚಿದಾಗ ನಮ್ಮ ಮನೆ ಯಲ್ಲಿನ ಕೂಗಾಟ ಅವರಿಗೆ ಕೇಳಿಸುವುದಿಲ್ಲ ಸ್ವಾಮಿ. ಕೇಳಿಸಿದರೂ ಗೌಡನ ಭಯ ಬೇರೆ" ಎಂದಳು.

ನನಗೆ ಬಹು ದುಃಖವಾಯಿತು. ಇದೇ ಆಸ್ಪತ್ರೆಯ ಚಾಕರಳನ್ನಾಗಿ ಅವಳನ್ನ ನೇಮಿಸಿದೆ. ಆವಳಿಗೂ ಜೀವನದ ಮಾರ್ಗ ತಿಳಿದು ಸಂತೋಷ ದಿಂದ ಕಣ್ಣೀರು ಸುರಿಸಿದಳು. ಈ ಕೇಸು ಏನಾಗುತ್ತೋ ನೋಡಬೇಕು.

‡ ‡ ‡

ನನಗೂ ಈ ವಿಚಾರ ಓದಿದ ಮೇಲೆ ಏನೋ ಹೊಳೆದ ಹಾಗಾಯಿತು ಈಗಲೂ ಆಸ್ಪತ್ರೆಯಲ್ಲಿ ಈರಿ ಎಂಬುವಳೊಬ್ಬಳಿದ್ದಾಳೆ. ಅವಳೇ ಇವಳಿರ ಬಹುದೇ. ಶಾರದಾ ಓದುತ್ತಿದ್ದವಳು "ಅಯ್ಯಪ್ಪಾ" ಎಂದಳು. "ಏನದು" ಎಂದೆ. ಒಬ್ಬಳೇ ಅವಳು ಆ ಹೊಲದಲ್ಲಿ ಹೇಗಿದ್ದಳು? ನನಗೆ ಕತ್ತಲೆ ಕಂಡರೇ ಭಯ ಎಂದಳು. "ನಿನ್ನ ಧೈರ್ಯ ನೀನೇ ಕೊಚ್ಚುಕೋ ಬೇಕು" ಎಂದೆ. ಅವಳೋದಲು ಪ್ರಾರಂಭಿಸಿದಳು. ನಾನೂ ಬೆಳಗಾಗಲು ವಿಚಾರಿಸ ಬೇಕೆಂದುಕೊಂಡು ಕೇಸಿನ ವಿಚಾರ ತಿಳಿಯಲು ಡೈರಿ ತಿರುವಿಹಾಕಿದೆ—

ಒಂದು ತಿಂಗಳಾದಮೇಲೆ:—"ಅವಳು ಹೇಳಿದಂತೆಯೇ ಹಳ್ಳಿಯವರಿಗೆ ಗೌಡನ ಭಯ. ಅದ್ದರಿಂದಲೇ ಇವಳು ಕೂಗಾಡಿದರೂ ಯಾರೂ ಇವಳಿಗೆ ಸಹಾಯಮಾಡಲಿಲ್ಲ. ಯಾರಿಗೂ ಗೊತ್ತಾಗದಹಾಗೆ ಮಧ್ಯಾಹ್ನ ಗೌಡ ನಿಲ್ಲದ ವೇಳೆಯಲ್ಲಿ ಅವಳನ್ನ ಆಸ್ಪತ್ರೆಗೆ ಕರೆತಂದುದು. ಆದರೆ ಈಗ ಅವರೆಲ್ಲಾ ಗೌಡನಮೇಲೆ ಸಾಕ್ಷಿ ಹೇಳಿದುದರಿಂದ ಗೌಡನಿಗೂ, ಸಾಹುಕಾರನಿಗೂ ಸಜಾ ಆಗಿದೆ. ಎಂದಾದರೂ ಸತ್ಯಕ್ಕೇ ಜಯ."

ಇನ್ನು ಇಲ್ಲಿಗೆ ಡೈರಿ ಮುಗಿಯಿತೆಂದುಕೊಂಡೆ. ಆದರೆ ಇನ್ನೂ ಕೆಲ ವಿದ್ದುದರಿಂದ ಅದನ್ನೆಲ್ಲಾ ತಿರುವಿಹಾಕುವಾಗ ಕೆಲವು ವರ್ಷಗಳಾದಮೇಲೆ ಒಂದು ದಿವಸದಲ್ಲಿ,

"ಈರೀ ಗಂಡನಿಗೂ, ಮಗನಿಗೂ ಪ್ಲೇಗ್ ಬಂದು ಸತ್ತರು. ಪಾಪ! ಅವಳು ಮತ್ತೆ ಅನಾಥೆ. ದೇವರೇ ಕಾಪಾಡಬೇಕೆಂದಿತ್ತು. ಹಾಗಾದರೆ ಈರಿಗೆ ಮದುವೆಯಾಗಿರಬೇಕು. ಎಂದೆಂದು ಹುಡುಕಿದರೆ ಸಿಗಲಿಲ್ಲ. ಇಷ್ಟ ರಲ್ಲೇ ಶಾರದೆ ಇನ್ನೊಂದು ಎರಡುಬಾರಿ ಹೆದರಿ ಹಾಗೂ ಹೀಗೂ ಕಥೆ ಓದು ತ್ತಿದ್ದಳು. "ನಾಳೆ ಓದುವೆಯಂತೆ ಸಾಕು ಶಾರದ" ಎಂದೆ. ಆದರೆ

ಕೇಳಲಿಲ್ಲ. ಓದುತ್ತಲೇ ಇದ್ದಳು. ಹತ್ತು ಹತ್ತೂವರೆ ಘಂಟೆ ಇರಬಹುದು. ಪುಸ್ತಕಗಳನ್ನೆಲ್ಲಾ ಜೋಡಿಸಿ ನಾಳೆಗೆ ಬರೆಯಬೇಕಾದುದನ್ನೆಲ್ಲಾ ಬರೆದು, ಬೆಳಗಾದ ತಕ್ಷಣದಲ್ಲಿ ಆ ಹೆಂಗಸನ್ನು ವಿಚಾರಿಸಬೇಕೆಂದುಕೊಂಡು ಯೋಚಿಸಿ ಮಲಗಲು ಯತ್ನಿಸುವಷ್ಟು ಹೊತ್ತಿಗೆ ಹನ್ನೊಂದೂವರೆಯಾಯಿತು. ಶಾರದಾನೂ "ಇಂಥಹುದೂ ಪ್ರಪಂಚದಲ್ಲಿ ಉಂಟೇ ?" ಎಂದಳು. ರಾತ್ರಿ ಯಲ್ಲಾದರೂ ಹೆದರೀಯೆ. ನೀನು ಘಾಬರೀ ಬೀಳುವುದು ಹಾಗಿರಲಿ. ಆ ಅಕ್ಕನವ್ಮಂದರಿಗೇನಾದರೂ ಆದೀತು." ಎಂದು ಹೇಳಿ ಇಬ್ಬರೂ ಮಲಗಿದೆವು.

ನಿದ್ರೆಯಲ್ಲೂ ನನಗೆ ಏನೋ ಒಂದು ನಾಟಕ ನೋಡಿದ ಹಾಗೆ. ಬೆಳಗಾದಮೇಲೆ ಎದ್ದು ಆಸ್ಪತ್ರೆಗೆ ಹೋದೆ—ಆಸ್ಪತ್ರೆಯನ್ನೆಲ್ಲಾ ಗುಡಿಸಿ ಅಲ್ಲೆ ಬಾಗಿಲಲ್ಲಿ ಮೂವತ್ತೈದು ಅಥವಾ ಮೂವತ್ತಾರು ವರುಷದ ಆ ಹೆಂಗಸು ನಿಂತಿದ್ದಳು.

"ಈರಿ, ನಿನ್ನದು ಯಾವೂರು ?" ಎಂದೆ —

"ಇದೇ" ಎಂದಳು.

"ಎಷ್ಟು ವರ್ಷದಿಂದ್ದೀರಿ ?" ಎಂದೆ.

"ಬಹಳ ವರ್ಷ ಆಯಿತು ಸ್ವಾಮಿ" ಎಂದಳು.

"ಅದಕ್ಕೂ ಮುಂಚೆ ಯಾವ ಊರು ?" ಎಂದೆ–ನಿಟ್ಟುಸಿರು ಬಿಟ್ಟಳು. ಕಣ್ಣಲ್ಲಿ ನೀರು ಬಂತು. ಅವಳ ಅಣ್ಣನನ್ನು ಜ್ಞಾಪಿಸಿಕೊಂಡಿರಬೇಕೆಂದು ತೋರುತ್ತೆ. ಸ್ವಲ್ಪ ಹೊತ್ತಾದಮೇಲೆ "ಹೊಸಳ್ಳಿ" ಎಂದಳು. ಹಾಗಾದರೆ ಇವಳೇ ಅವಳು !

"ನಿನ್ನ ಕಥೆ ನನಗೆ ಗೊತ್ತಾಯಿತು. ನಿಮ್ಮ ಹಳ್ಳಿಯಲ್ಲಿ ನಡೆದಿದುದೆಲ್ಲಾ ನಿಜತಾನೆ ?" ಎಂದೆ. "ನಿಜ ಅಲ್ಲದೆ ಉಂಟೇ ಸ್ವಾಮಿ" ನಿಮಗೂ ಬಲು ಹಿಂದಿದ್ದವರಲ್ಲಿ ಕ್ರಿಷ್ಣಸ್ವಾಮಿರಾಯರು ಅವರನ್ನ ಬೇಕಾದರೆ ಕೇಳಿ, "ನನ್ನ ಮಗನ್ನ ನೋಡಿದರೆ ನನ್ನಣ್ಣನ್ನೇ ನೋಡಿದ ಹಾಗಾಗಿತ್ತು. ಆದರೆ ಅವನೂ ಹೋಗಿಬಿಟ್ಟ" ಎಂದಳು. ಕಣ್ಣಲ್ಲಿ ನೀರು. ಅವಳ ಸ್ಥಿತಿ ನೋಡಿ ಎದೆಯೊಡೆದು ನೀರಾಯಿತು.

" ಈರಿ, ಈ ಆಸ್ಪತ್ರೆ ಕೆಲಸ ಬೇಡ; ನಮ್ಮ ಮನೆಯಲ್ಲೇ ಕೆಲಸ ಮಾಡಿಕೊಂಡಿರು " ಎಂದು ಅವಳನ್ನ ಮನೆಗೆ ಕರೆದುಕೊಂಡು ಹೊರಟೆ—

" ಶಾರದಾ, ಶಾರದಾ " ಎಂದೆ—

" ಏನು " ಎಂದು ಬಂದಳು.

" ಇವಳಾರು " ಗೊತ್ತೇ ?

" ಇಲ್ಲ "

" ಇವಳೇ ಅವಳು ! ಆ ಈರಿ !! " ಎಂದೆ—

" ಯಾರು ಕಥೆಯವಳೇ ? "

" ಹೌದು " ಎಂದೆ—

ಶಾರದಾನೂ ಮಾತಾಡಲಿಲ್ಲ. ಅವಳ ಕಣ್ಣಲ್ಲೂ ತುಂಬಾ ನೀರು.

" ದೇವರು ದೊಡ್ಡವನು " ಎಂದಳು—" ಅದು ನಿಜ " ಎಂದೆ—

ಈರಿ ಸಂತೋಷ ಆ ದೇವರಿಗೇ ಗೊತ್ತು ! ನಮ್ಮ ಮಕ್ಕಳನ್ನು ಕಂಡರೆ ಅವಳಿಗೆ ಬಲು ಸಂತೋಷ.

# ಬಂಜೆ

"ನಿರಿಹಿಡಿದು ನಡುವೇರಿ,
ತೊದಳು ಮಾತನು ಬೀರಿ,
ಕೊರಗ ನಗಿಸಲು ಬಲ್ಲ,
ಮಗುವಿಲ್ಲವೇನೋ ?"

"ಶ್ರೀ"

"ಒಂಭತ್ತು....ಹತ್ತು ...ಹನ್ನೊಂದು....ಇನ್ನೆರಡು ಬಟ್ಟೆ ಎಲ್ಲೀ ?"

"........ ........... ..."

"ಸರಿ, ಈ ಸಲವೂ ಮಗುವಿನ ಬಟ್ಟೆಯೇ ಇಲ್ಲ. ನಿನ್ನಿಂದ ಸಾಕಾಯ್ತು..... ...ಎಲ್ಲೀ ಮಗುವಿನ ಬಟ್ಟೆ ?"

"ಎತ್ತೋಯ್ತೋ ನೋಡ್ತೀನಿ ತಾಯಿ."

"ಏನು ನೋಡ್ತೀಯೋ, ಏನು ಸುಡುಗಾಡೋ. ನಮ್ಮ ಬಟ್ಟೆ ಹೋದ್ರೆ ನೀನು ಉಪಯೋಗಿಸ್ತಿದ್ದೀ ಎನ್ನಬಹುದು. ಮಕ್ಕಳಿಲ್ಲದ ನಿನಗೆ ಮಗುವಿನ ಬಟ್ಟೆಯಿಂದ ಏನೇ ಪ್ರಯೋಜನ. ಆ ಬಟ್ಟೆ ತಂದುಕೊಡೋ ವರೆವಿಗೂ ಇನ್ನು ನಿನಗೆ ಬಟ್ಟೆ ಹಾಕಲ್ಲ. ತಿಳೀತೇನೇ ಚೆನ್ನಿ."

"ಅದನ್ನೇಸಿ ಉಡುಕಿ ತಂದ್ಕೊಟ್ಟೇನು. ಬಟ್ಟೆ ಬಿಡಿ ತಾಯಿ."

"ಇನ್ನೊಂದು ಸಲ ಹೀಗೇನಾದ್ರೂ ಆದ್ರೆ ನಿನ್ನ ಸಂಬಳದಲ್ಲಿ ಹಿಡೀತೀನಿ."

"ಅನ್ನೀ....ಅನ್ನೀ....ನನ್ನಾ...."

"ನೋಡಿ ತಾಯಿ ನೋಡಿ ನನ್ನ 'ಅನ್ನೀ' ಅಂತಾರೆ ಪುಟ್ರಾಯ್ರು."

ಚೆನ್ನಿ ಮುಖ ಹಿಗ್ಗಿ ಅರಳಿತು. "ನನ್ನ ದೇವ್ರೂ" ಎಂದು ಮುದ್ದಿಟ್ಟು ತನ್ನ ಕೈಯಿಂದ ಲಟಿಕೆ ತೆಗೆದಳು. ಶಾರದಾ ಬಟ್ಟೆ ಹಾಕಿದುದು ಅವಳಿಗೆ ತಿಳಿಯದು. ಹಿರಿಹಿಗ್ಗಿದ ಮುಖದಿಂದ ತನ್ನ ಪುಟ್ಟರಾಯರ ಮುಖವನ್ನೇ ನೋಡಿ ನೋಡಿ ತನ್ನೆದೆಯಲ್ಲಿ ತುಂಬಿಕೊಳ್ಳುತ್ತಿದ್ದಾಳೆ.

"ಎರಡು ಷರಟು...."

ಈ ಮಾತುಗಳು ಚೆನ್ನಿಗೆ ಕೇಳಿಸಲೇ ಇಲ್ಲ.

"ಮೂರು ಮಗ್ಗಲಾಸಿಗೆ. ಆ ಮೇಲೆ........"

ಈಗಲೂ ಚೆನ್ನಿ ಉತ್ತರ ಕೊಡದಿದ್ದುದನ್ನು ಶಾರದ ನೋಡಿದಳು. ಚೆನ್ನಿ ನಟ್ಟದೃಷ್ಟಿಯಲ್ಲಿ ತನ್ನ ಮಗುವನ್ನೇ ನೋಡುತ್ತಿದ್ದಾಳೆ. ತಾಯಿಯ ಹೃದಯವು ಹಿರಿಹಿಗ್ಗಿ ಶಾರದಾಗೆ ಸಂತೋಷವಾದರೂ.

"ಚೆನ್ನೀ" ಎಂದಳು.

ಬಾಹ್ಯಪ್ರಪಂಚವನ್ನು ಮರೆತಿದ್ದ ಚೆನ್ನಿ ಬೆಚ್ಚಿಬಿದ್ದು ನೋಡಿದಳು.

"ನೋಡಿದ್ರಾ ತಾಯಿ, ಪುಟ್ಟರಾಯರ ಆಟ" ಶಾರದ ಆಕಡೆ ವಾತ್ಸಲ್ಯದಿಂದ ನೋಡಿ;

"ಇರಲಿ ಬಟ್ಟೆ ಹೇಳು."

"ಎರಡು ಶೀಟ್ಸ್. ಮಗ್ಗಲ್ಹಾ........"

"ಅದೆಲ್ಲಾ ಆಯಿತು........ಸರಿ. ಈ ಸಲ ಶು ಇದೆ. ಮಗುವಿಂದೇ ಲ, ಎಲ್ಲಾದರೂ ಕಳೆದೀಯೆ."

"ಇಲ್ಲ ತಾಯಿ."

"....ಇದೇನೇ ಹೋದ ಸಲ ಹೆಚ್ಚಾಗಿ ನೀಲಿ ಹಾಕಿದೀಯೋ?.... ಇಲ್ನೋಡು ರಾಯರ ಬಟ್ಟೆ ಸರಿಯಾಗ ಮಡಿಕೆ ಮಾಡದೆ ಕೆಡಿಸಿ ಬಿಟ್ಟೇದಿ? ಈ ಸಲ ಸರಿಯಾಗಿ ನೋಡಿ ತಾ."

ಅದಕ್ಕೂ ಅವಳುತ್ತರವೇ ಇಲ್ಲ. ಮಗುವನ್ನೇ ನೋಡುತ್ತಿದ್ದಾಳೆ. ಕೊನೆಗೆ ಅವರಮ್ಮನ ಹಿಂದೆ ಅವಳಾ ಪುಟ್ಟರಾಯರೂ ಹೋದರು.

ಚೆನ್ನಿ ದೊಡ್ಡದಾಗಿ ಸಿಟ್ಟುಸಿರೊಂದನ್ನು ಬಿಟ್ಟು, ಏನೋ ದುಃಖದಿಂದ "ಅಯ್ಯೋ ಬೀರಪ್ಪಾ" ಎಂದು ಹೋದಳು. ಕಣ್ಣೀರೆರಡು ತೊಟ್ಟಿಕ್ಕಿದುವು. ಅವಳು ಹೋಗುತ್ತಿದ್ದುದರರಿವು ಅವಳಿಗೇ ಇಲ್ಲ. "ಮಕ್ಕಳಿಲ್ಲದ ನಿನಗೆ— ಮಕ್ಕಳಿಲ್ಲದ ನಿನಗೆ" ಅಯ್ಯೋ ಬೀರಪ್ಪಾ, ಕೊನೆಗೂ "ನನ್ನ ಬಂಜೆ ಮಾಡಿ ಬಿಟ್ಯಾ" ಎಂದು ಪುನಃ ಅತ್ತಳು.

‡ ‡ ‡

ಇನ್ನೂ ನಸುಗತ್ತಲಿನಲ್ಲಿಯೇ ಚೆನ್ನಿ ಎದ್ದು ಹತ್ತಿರದ ನದಿಯಲ್ಲೇ ಮುಳಿಗೆದ್ದು, ಒದ್ದೆ ಬಟ್ಟೆಯಲ್ಲಿಯೇ ಭೈರಪ್ಪನ ಗುಡಿಗೆ ಹೊರಟಳು. ದೇವರ ಮುಂದೆ ಎಷ್ಟು ಹೊತ್ತು ಕುಳಿತಳೋ, ಎಷ್ಟು ನಮಸ್ಕರಿಸಿದಳೋ ಅವಳಿಗೇ ತಿಳಿಯದು.

"ಭೈರಪ್ಪ, ನಿನಗೆ ಕೋಳಿ, ಕುರಿ, ಕಪ್ಪಣಾನೂ ಕೊಡಿಸೇನು. ನನ್ನ ಕೈ ಬಿಟ್ಟೀ ನೋಡು. ಜನ ಬೈಯ್ಯೋ ಅಂಗೆ ನನ್ನ ಮಾತ್ರ ಬಂಜೀನ ಮಾಡಬ್ಯಾಡ" ಎಂದು ಗೋಳಿಟ್ಟಳು. ಪುನಃ ಬೇಡಿದಳು. ಮತ್ತೆ ನಮಸ್ಕಾರಗಳ ಸುರಿಮಳೆಯಾಯಿತು. ವಿಗ್ರಹವು ಮಾತ್ರ ನಿಶ್ಚಿಂತೆಯಿಂದಿದ್ದಿತು. ಮನೆಗೆ ಹಿಂತಿರುಗಿದಳು. ಒದ್ದೆಯ ಸೀರೆ ಅಲ್ಲಿಯೇ ಹಾಗೆಯೇ ಒಣಗಿದೆ.

"ಏ ಚೆನ್ನಿ" ಎಂದಾರ್ಭಟಿಸಿದ ಅವಳ ಗಂಡ.

"ಓ"

"ಎಲ್ಲಿ ಹೋಗಿದ್ದೀ"

"ಇಲ್ಲೇ ಅನ್ನಿ"

"ಕೂಗಿದ್ಯಾಗ ಜಟ್ನ್ಯಾಕೆ ಬರಲಿಲ್ಲ ಮತ್ತೆ?"

"ಒಳಗನ್ನಿ. ಕೇಳ್ಸಿರಾಕಿಲ್ಲ ಬಿಡು."

"ನಮ್ಮ ಗುಡ್ಲೇನು ದೊಡ್ಡ ಬಂಗ್ಲಾನೆ ಕೇಳ್ದಿದಾರಾಕೆ?"

ಇವನೇನಂದರೇನು? ಚೆನ್ನಿ ದಾರಿಯಲ್ಲಾಡುತ್ತಿದ್ದ ನಂಜಿ ಮಗುವಿನ ಆಟ ನೋಡಿ ನೋಡಿ ನಗುತ್ತಿದ್ದಾಳೆ. ಮುದ್ದು ಮಗು ಪುಟ್ಟಕೈಯಲ್ಲಿ

ಸಣ್ಣ ಕಡ್ಡಿಯೊಂದನ್ನು ಹಿಡಿದುಕೊಂಡು. ದೂರದಲ್ಲಿದ್ದ ಹಸುವೊಂದಕ್ಕೆ 'ತತ್ ತತ್' ಎನ್ನುತ್ತಿದೆ. ಚೆನ್ನಿ ನೋಡಿ ನೋಡಿ ತನ್ನನ್ನೇ ಮರೆತಳು. ಎದೆಯುಬ್ಬಿ ಕಾಯಕರುಳು ಕನವರಿಸಿ ಓಡಿಬಂದು ಮಗುವನ್ನು ಬಿಗಿದಪ್ಪಿ ಮುದ್ದಿಕ್ಕಿದಳು. ಇನ್ನೇನು ಮಗುವನ್ನು ತನ್ನೊಡನೆ ಕರದೊಯ್ಯಬೇಕು.

"ಚೆನ್ನೀ" ಎಂದಾರೋ ಕೂಗಿದಹಾಗಾಯಿತು. ನೋಡಿದರೆ ನಂಜಿ.

"ಬಿಡೇ ಮಗನ್ನ."

"ನಂಜಕ್ಕ ನಾನೋಸಿ ಕರಕೋತೇನೆ."

"ಮುದ್ಲು ಬಿಡೆ. ಇವತ್ತೇನ್ಬಂತಪ್ಪ ನನ್ಗೆ. ಕಣ್ಬಿಡಾಕಿಲ್ಲ. ಆಗ್ಲೆ ನನ್ನ ಮಗ ನಿನ್ನ ತಾಕ."

"ನಂಜಕ್ಕ........"

"ಬಿಡೇ, ಕೇಳಾಕಿಲ್ಲೇನು ನಿಂಗೆ ಬಂಜೇರು ಮಕ್ಕಳ್ನ ಎತ್ಗಕೂಡ್ದು."

ಸಿಡಿಲು ಹೊಡೆದರೂ ಬೆಚ್ಚದ ಚೆನ್ನಿ ತಟ್ಟನೆ ಮಗುವನ್ನು ಕೆಳಕ್ಕಿಳಿಸಿ ಮುದ್ದಿಟ್ಟು;

"ಬಂಜೆ! ಶಿವನೇ ನಾನು ಬಂಜೆ! ಹಾಳು ಬಂಜೆ!!" ಎಂದು ಒಳಗೆ ಹೋದಳು.

ಎಷ್ಟು ಮನನೊಂದರೇನು ಮಾಡುವ ಕೆಲಸ ತಪ್ಪೀತೆ? ರಾಯರ ಮನೆ ಬಟ್ಟೆ ತೆಗೆದುಕೊಂಡು ಹೊಳೆಗೆ ಹೋದಳು. ಇನ್ನೂ ಯಾರೂ ಬಂದಿರಲಿಲ್ಲ. ಸುತ್ತಲೂ ನೋಡಿದಳು. ಯಾರೂ ಇರಲಿಲ್ಲ. ಬಟ್ಟೆಯ ಗಂಟನ್ನು ಹಾಗೆಯೇ ಬಿಸುಟು ಒಳಗೆ ಮುಚ್ಚಿಟ್ಟುಕೊಂಡಿದುದೇನನ್ನೋ ಹೊರಗೆ ತೆಗೆದಳು. ಮುದ್ದಿಕ್ಕಿದಳು. ಮೆಲ್ಲನೆ ಆ ಪುಟ್ಟ ಅಂಗಿಯ ಕೈಗಳೆರಡನ್ನೂ ಬಿಚ್ಚಿ ನೋಡತೊಡಗಿದಳು.

"ಅನ್ನೀ ...ಅನ್ನೀ...." ಇದೇ ಅವಳ ಕಿವಿಯಲ್ಲಿ ಪ್ರತಿಧ್ವನಿಸ ತೊಡಗಿತು.

" ಪುಟ್ಟ ಕೈ. ಪುಟ್ಟ ಮೈ. ಪುಟ್ಟರಾಯರು ನನ್ನಪ್ಪಾ " ಎಂದು ಅಂಗಿಯನ್ನು ಎದೆಗಪ್ಪಿಕೊಂಡು ಪುನಃಪುನಃ ಮುದ್ದಿಕ್ಕಿದಳು.

" ಬಟ್ಟೆ ಒಗೆಯಾಕಿಲ್ವಾ, ಚೆನ್ನೀ " ಎಂದಳು ಅಲ್ಲಿಗೆ ಬಂದ ಕೆಂಚಿ.

ತಟ್ಟನೆ ಚೆನ್ನಿಗೆ ತಾನು ಬಂದ ಕೆಲಸ ಹೊಳೆಯಿತು.

" ರಾಶಿ ಅವೆ ಒಗಿದೇನಂತೆ "

" ಅದೇನೇ ನೋಡ್ತಿದ್ದದ್ದು ? "

" ಪುಟ್ಟರಾಯರ ಅಂಗಿ ಕಾಣವ್ವ. "

" ಯಾಕೆ ಇಷ್ಟು ಯೋಸ್ನೆ ? ಬೀರಪ್ಪ ಮನಸ್ಸುಮಾಡಿದರೆ ನಿಂಗೂ ಆದಾತೂ ಬಿಡು. "

" ನಿನ್ನ ಮಾತು ನಿಜ ಆಗ್ಲವ್ವ. "

‡ ‡ ‡

" ಅನ್ನೀ....ಅನ್ನೀ ......." ಕುಂತರೆ, ನಿಂತರೆ, ಚೆನ್ನಿಗೆ ಇದೇ ಕೇಳಿಸತೊಡಗಿತು. ಮಧ್ಯ ಮಧ್ಯೆ " ಪುಟ್ಟ ಕೈ, ಪುಟ್ಟ ಮೈ " ಎನ್ನುತ್ತಾ ಆ ಅಂಗಿಯನ್ನು ಹೊರತೆಗೆದು ನೋಡಿನೋಡಿ ಮುದ್ದಿಡುವಳು.

ಸಂಜೆ ೫ ಘಂಟೆ. ಚೆನ್ನಿ ಇದೇ ಯೋಚನೆಯಲ್ಲಿಯೇ ಗುಡಿಸಲಬಳಿ ಕುಳಿತಿದ್ದಾಳೆ. ಬಳಿಯಲ್ಲಿಯೇ ನದಿಯು ನಿರಾಲೋಚನೆಯಿಂದ ಹರಿಯುತ್ತಿದೆ. ಯೋಚನೆಯಲ್ಲಿದ್ದ ಚೆನ್ನಿಯ ಕಣ್ಣಿಗೆ ಗಿಡಕ್ಕೆ ತೂಗುತ್ತಿದ್ದ ಜೋಳಿಗೆಯೊಂದು ಕಣ್ಣಿಗೆ ಬಿದ್ದಿತು. ತಟ್ಟನೆ ಓಡಿಹೋದಳು. ಬಳಿಯಲ್ಲಾರೂ ಇಲ್ಲ. ಜೋಳಿಗೆಯಲ್ಲಿ ಮುದ್ದುಮಗು ಒಂದು ಮಲಗಿದೆ. ಚೆನ್ನಿಗೆ ಏನೋ ಹೊಳೆದಂತಾಯಿತು. ಸುತ್ತಲೂ ನೋಡಿದಳು, ಯಾರೂ ಇಲ್ಲ. ಪುನಃ ನೋಡಿದಳು. ಸರ್ರನೆ ಜೋಳಿಗೆಯೊಳಗೆ ಕೈ ಹಾಕಿ ಮಗುವನ್ನೆತ್ತಿಕೊಂಡು ಓಡಿದಳು. ಪುನಃ ಯಾರಾದರೂ ಬಂದು ಮಗುವನ್ನೆಲ್ಲಿ ತೆಗೆದುಕೊಂಡು ಹೋಗುವರೋ ಎಂದು ಭಯವಾಯಿತು. ಎಲ್ಲಿಲ್ಲದ ಶಕ್ತಿ ಅವಳಿಗಾಗ ಬಂದಹಾಗಾಯಿತು. ಮನೆಯಲ್ಲಿ ಗಂಡನಿರಲಿಲ್ಲ. ಸರಸರನೆಂದು ಪುಟ್ಟರಾಯರ ಅಂಗಿ

ಗಳಸ್ನೆಲ್ಲಾ ಗಂಟು ಕಟ್ಟಿದಳು. ಎಲ್ಲಿಯೋ ಮೂಲೆಯಲ್ಲಿ ಗಂಡಸಿಗೆ ಸಿಗದ ಹಾಗಿಟ್ಟಿದ್ದ ಎರಡು ರೂಪಾಯಿಗಳನ್ನು ತೆಗೆದುಕೊಂಡು ಮಗುವನ್ನೂ ಎದೆ ಗಪ್ಪಿಕೊಂಡೋಡಿದಳು. ಇಂತಹವುಗಳು ಯಾವುದನ್ನೂ ಯೋಚಿಸದ ರೈಲು "ಕ್ಯೋ" ಎಂದು ಕೂಗಿ ಚೆನ್ನಿಯ ಊರುಬಿಟ್ಟಿತು. ಚೆನ್ನಿ, ಮಗು ಹೊರಟೇಬಿಟ್ಟರು. ರೈಲು ಹೊರಟಮೇಲೆ ಚೆನ್ನಿ ದೊಡ್ಡದೊಂದು ನಿಟ್ಟುಸಿರು ಬಿಟ್ಟು "ಬೀರಪ್ಪಾ ನಾನಿನ್ನು ಬಂಜೆಯಲ್ಲ. ನಾನಿನ್ನು ಬಂಜೆಯಲ್ಲ" ಎಂದು ಮಗುವನ್ನು ನೋಡಿ ಕೈಲೆತ್ತಿಕೊಂಡು ಮುದ್ದಿಟ್ಟು ಪುನಃ ಎದೆಗವಚಿ ಕೊಂಡಳು.

‡ ‡ ‡

ಅವಳೂರಿನವರಿಗೆ ಇವಳ ನಡತೆಯ ವಿಚಾರದಲ್ಲಿ ಸಂಶಯ. ಮಗು ವನ್ನು ತನ್ನದೆನ್ನುತ್ತಾಳೆ! ಗಂಡನನ್ನೇಕೆ ಬಿಟ್ಟುಬಂದಳು? ಮೊದಲೇ ಸಮಾಚಾರವೇಕೆ ತಿಳಿಸಲಿಲ್ಲ?

"ಚೆನ್ನಿ ಏನ್ತಪ್ಪಿದ್ರೂ ಶೀಲ ಇರ್ಬೇಕು. ಅದೂ ತಪ್ಪಿದ್ನೇನು ನಮ್ಮ ಮನ್ಯಾಗೆ ಇರಾಕಿಲ್ಲ. ನಡೀ ನಿಮ್ಮೂರ್ಗೆ" ಎಂದವಳ ನೆಂಟರಂದರು. ಅವಳಿಗೇನು ಮಾಡಲೂ ತೋಚದೆ ಹಿಂತಿರುಗಿದಳು. ಅವಳ ತಾಯ್ತನ ಅಂದಿಗೇ ಮುಗಿಯಿತು. ಮಗುವಿನ ತಾಯಿ ಇವಳಿಗೆ ಬೈದು, ಎಲ್ಲರೂ ಇವಳಿಗೆ ಛೀಳಿಸಿ, ಇವಳ ಗಂಡ ಇವಳಿಗೆ ಚೆನ್ನಾಗಿ ಎರಡು ಏಟು ಕೊಟ್ಟು ಮಗುವನ್ನು ಇವಳಿಂದ ಕಸಿದುಕೊಂಡರು. ಮಗು ಇವಳನ್ನು ಬಿಟ್ಟು ಹೋಗಲಾರದೆ ಅತ್ತಿತು. ಚೆನ್ನಿ ಅದನ್ನು ಬಿಡಲಾರದೆ ಗೋಳಿಟ್ಟಳು. ಆದರೇನು?

‡ ‡ ‡

"ಬನ್ನಿ. ಇಲ್ಲಿ ಸ್ವಲ್ಪ ಬನ್ನಿ"

"ಏಕೆ?"

"ಜಾಗ್ರತೆ ಬನ್ನಿ ಅಂದ್ರೆ....ನೋಡಿದಿರಾ ಅವಳನ್ನ"

"ಯಾರನ್ನ?"

" ನೋಡಿ ಅವಳನ್ನ. "

ನೋಡಿದೆ. ನಮ್ಮ ಮನೆಯ ತೋಟದಲ್ಲಿ ಹುಚ್ಚಿಯೊಬ್ಬಳು ಕುಣಿಯುತ್ತಿದ್ದಾಳೆ. ಕಂಗೆಟ್ಟ ಮೈ. ಕೆದರಿದ ಜಡೆ. ಹರಕುಪರಕು ಸೀರೆ. ಕೈಯಲ್ಲಿ ಮಗುವಿನ ಅಂಗಿಯೊಂದನ್ನು ಹಿಡಿದುಕೊಂಡು " ಅನ್ನೀ.... ಅನ್ನೀ. ಪುಟ್ಟ ಕೈ. ಪುಟ್ಟ ಮೈ " ಎನ್ನುತ್ತಾ ಒಮ್ಮೆ ಕುಣಿಯುತ್ತಾಳೆ. " ಬಂಜೆ. ನಾನೇ ಬಂಜೆ " ಎಂದು ಮರುಕ್ಷಣ ಅಳುತ್ತಾಳೆ.

" ಯಾರದು ಶಾರದ ? "

" ಗೊತ್ತಾಗ್ಲಿಲ್ವೆ ?.... ಅಗಸರ ಚೆನ್ನಿ "

" ಚೆನ್ನಿ ; ಇದೇಕೆ ಹುಚ್ಚು ? "

" ನಿಮಗೆ ತಿಳಿಯುವುದು ಕಷ್ಟ.... ಮಗುವಿಲ್ಲದೆ ಹುಚ್ಚು. "

ಇದನ್ನು ಕೇಳಿ ನನ್ನ ಮನಸ್ಸೇಕೋ ಕೆಟ್ಟಿತು. ಅವಳನ್ನು ಪುನಃ ನೋಡಿ ಕೊಠಡಿಗೆ ಹೋಗಿ ಕುಳಿತೆ. ನನ್ನೆದುರಿಗೆ ಅವಳಾ ಹುಚ್ಚು ಮೂರ್ತಿ ! ಹಿಂದೊಂದು ಬಾರಿ ನನ್ನ ಸ್ನೇಹಿತ ಮನೋಹರನು ಹಾಡಿದುದು ಕೇಳಿಸತೊಡಗಿತು. ಹೌದು ಅವನದೇ ಕಂಠ. ಇನ್ನೂ ಈಗಲೂ ಅವನ ಆ ಹಾಡು ಸ್ಪಷ್ಟವಾಗಿ ಕೇಳಿಸತೊಡಗಿತು. ಅವನ ಕಂಠದಿಂದ ಹೊರಟ ಆ ಸಣ್ಣ ಕಿರುಕಲು ಧ್ವನಿಯು ನನ್ನ ಮೈ ನಡುಗಿಸಿ, ನನ್ನ ಹೃದಯವೂ,

" ಸಿರಿಹಿಡಿದು ನಡುವೇರಿ,
ತೊದಳುಮಾತನು ಬೀರಿ,
ಕೊರಗ ನಗಿಸಲುಬಲ್ಲ,
ಮಗುವಿಲ್ಲವೇನೊ ? "

ಎಂದು ಅವನು ಅಂದು ಹಾಡಿದುದನ್ನೇ ಹಾಡಿತು.

# ಭೂತನ ಚೇಷ್ಟೆ

ಇಂತಹ ಸೋಜಿಗದ ಸಂಗತಿಯು ನಡೆದುದನ್ನು ಕೇಳಿದ್ದೆನೇ ಹೊರತು ನೋಡಿರಲಿಲ್ಲ. ಕೇಳಿದಾಗಲೆಲ್ಲಾ "ಕಟ್ಟುಕಥೆ" ಎಂದೇ ತಿಳಿಯುತ್ತಿದ್ದೆ. "ಮಲೆನಾಡಿನ ಪಿಶಾಚಿ"ಗಳ ಕಥೆಗಳನೇಕವನ್ನೂ ಓದಿದ್ದೆ; ಕಥೆಯೆಂದು ತಿಳಿಯುತ್ತಿದ್ದೆನೇ ವಿನಃ ಅದಕ್ಕೆ ಬೆಲೆ ಕಟ್ಟುತ್ತಿರಲಿಲ್ಲ. ಇಂತಹವುಗಳಲ್ಲಿ ಭಾಗಿಯಾಗುವೆನೆಂದು ನಾನು ಊಹಿಸಿಯೂ ಇರಲಿಲ್ಲ. ಆದರೂ ಭಾಗಿಯಾದೆ-ಆ ವಿಚಿತ್ರ ಕಥೆಯಲ್ಲಿ ನಾನೂ ಭಾಗವಹಿಸಿದೆ. ಮೊದಲಿಗೇ ಹೇಳುತ್ತೇನೆ. ಇದು ಕಟ್ಟುಕಥೆಯಲ್ಲ—ನಡೆದ ಸಂಗತಿ— ಭೂತನ ಚೇಷ್ಟೆಯ ಒಂದು ಸಂಗತಿ! ಭೂತಗಳ ವಿಚಾರ ಕೇಳಲಿಷ್ಟಪಡದಿರುವವರು ಇದನ್ನು ಓದದಿರಲಿ-ಓದಲು ಪ್ರಾರಂಭಿಸಿ ನಂತರ ಪಶ್ಚಾತ್ತಾಪಪಡಬೇಡಿ.

‡ ‡ ‡

ನನಗೆ ವರ್ಗವಾಗಿ ಬಂದ ಹತ್ತು ದಿವಸಗಳಿಂದಲೂ ಮನೆ ಹುಡುಕುವ ಕೆಲಸವೇ ಆಗಿದೆ. ಊರೋ ಶುದ್ಧ ಹಳೆಯ ಊರು. ಈಗಲೋ ಆಗಲೋ ಬೀಳುವಂತಿರುವ ಮನೆಗಳು. ಬೆಳಕು ಕಂಡರೆ ಮನೆಯವರಿಗೆ ಎಲ್ಲಿ ತೊಂದರೆಯೋ ಎಂದು ಗೋಡೆಯಲ್ಲಿಯೇ ಸಣ್ಣ ರಂಧ್ರಗಳುಳ್ಳ ಮನೆಗಳು! ಬೇರೆ ಊರಿನಲ್ಲಿ 'ಎಕ್ಸ್‌ಟೆನ್ಷನ್'ನಲ್ಲಿ ವಿಶಾಲವಾದ ಸ್ವಚ್ಛವಾದ ಮನೆಗಳಲ್ಲಿದ್ದು ಅಭ್ಯಾಸವಾದ ನನಗೆ ಆ 'ಗುಹೆ'ಗಳನ್ನು ನೋಡಿದೊಡನೆಯೇ ಉಸಿರು ಕಟ್ಟಿಕೊಳ್ಳುತ್ತಿತ್ತು. ಎಕ್ಸ್‌ಟೆನ್ಷನ್‌ನಲ್ಲಿ ಮನೆಗಳೇ ಖಾಲಿ ಇರಲಿಲ್ಲ. ಮನೆಗಳು ಇರಲೇ ಇಲ್ಲವೆಂದಲ್ಲ; ದೊಡ್ಡ ಮನೆಯೊಂದಿದ್ದಿತು. ಎಲ್ಲಾ ರೀತಿಯಲ್ಲಿಯೂ ಅನುಕೂಲವಾದ ಮನೆ. ಹೊರಗಿನ ಮನೆಯಲ್ಲಿ ಬೇರೊಂದು ಸಂಸಾರವೂ ಇರಬಹುದು. ಮನೆಯಲ್ಲಿಯೇ ಭಾವಿ, ವಿಶಾಲವಾದ ಕಾಂಪೌಂಡು. ಎಲ್ಲಾ ವಿಧದಲ್ಲಿಯೂ ನಾನೂ, ಶಾರದ, ಮೆಚ್ಚುವಂತಹ ಮನೆಯೇ. ಆದರೂ, ಆ ಮನೆಯ ವಿಷಯ ಕೇಳಿ ಅಲ್ಲಿಗೆ ಹೋಗಲು

ಆಳುಕಿತು. ಇದುವರೆವಿಗೂ ಮನೆಯವರೇ ಅಲ್ಲಿದ್ದರಂತೆ. ಈಗ ಬಾಡಿಗೆಗೂ ಯಾರೂ ಅಲ್ಲಿಗೆ ಹೋಗುವಂತಿಲ್ಲವಂತೆ. ಆ ಮನೆಯಲ್ಲಿ ಭೂತನ ಉಪದ್ರವ ವಿದೆಯಂತೆ! ಮನೆಯವರಿಗೆ ಎಲ್ಲಿಲ್ಲದ ಗೋಳಾಟ, ತೊಂದರೆ. ಇದನ್ನು ತಾಳಲಾರದೆಯೇ ಅವರು ಬೇರೂರಿಗೆ ಹೊರಟುಹೋದರು. ಭೂತಗಳಲ್ಲಿ ನಂಬಿಕೆಯಿಲ್ಲದ ನಾನು, " ಭೂತವೂ ಇಲ್ಲ, ಗೀತವೂ ಇಲ್ಲ. ಆ ಮನೆಗೇ ಹೋಗೋಣ " ಎಂದುಕೊಳ್ಳುವೆ. ಆದರೆ ಮರುಕ್ಷಣವೇ " ತಿಳಿದೂ ತಿಳಿದೂ ಹೇಗೆ ಹೋಗಲಿ. ಅವಳಿಗೇನಾದರೂ ತೊಂದರೆಯುಂಟಾದರೆ? ಮಕ್ಕಳಿನ್ನೂ ಚಿಕ್ಕವರು; ಅವರಿಗೇನಾದರೂ ಆದರೆ?" ಹೀಗೆಯೇ ಆಲೋಚಿಸುವೆ. ಅಷ್ಟರಲ್ಲಿ ಯಾರೊಬ್ಬರೋ ಒಂದು ಸಮಾಚಾರ ಹೇಳಿದರು. ಅಲ್ಲಿನ ಭೂತ ಆ ಮನೆಯ ಬಳಗವಂತೆ. ಅವರ ವಿನಃ ಇನ್ನಾರಿಗೂ ತೊಂದರೆ ಕೊಡುವು ದಿಲ್ಲವೆಂದರು. ಇಷ್ಟೇ ಧೈರ್ಯ ಸಾಕಾಯಿತು. ಬಲು ಸುಲಭವಾಗಿಯೇ ಬಾಡಿಗೆಗೆ ಗೊತ್ತುಮಾಡಿಕೊಂಡೆ. ಮನೆಯವರನ್ನು ಕರೆಸುವುದಕ್ಕೆ ಮುಂಚೆ ನಾನೊಬ್ಬನೇ ಆ ಮನೆಯಲ್ಲಿದ್ದು ಪರೀಕ್ಷಿಸಿದೆ. ಏನೂ ಆಗಲಿಲ್ಲ. ಭೂತ ವಲ್ಲಿನ ನಂಬಿಕೆ ಕರಗಿತು.

‡ ‡ ‡

ಇಂತಹ ಸೊಗಸಾದ ಮನೆಯನ್ನು ನೋಡಿ ಶಾರದ ಬಲು ಸಂತೋಷ ಪಟ್ಟಳು. ತನಗೆ ಮುಡಿಯಲು ಹೂ ಸಿಗುತ್ತೆಂದು ನನ್ನ ಮಗಳು ವಿಮಾರಾಗೂ ಅವಳ ತಂಗಿ ಚಂದ್ರಾಗೂ ಬಲು ಸಂತೋಷ. ಆ ಮನೆಯ ವಿಷಯ ಶಾರದಾ ಬಳಿ ಹೇಳಲಿಲ್ಲ. ನೆರೆಯವರಿಗೂ ಹೇಳಬೇಡಿರೆಂದಿದ್ದೆ. ಸುಮ್ಮನೆ ಇಂತಹ ವಿಷಯಗಳನ್ನು ಹೇಳಿ ಅವಳಿಗೇಕೆ ಬೆದರಿಸಬೇಕು? ಅವಳೋ, ಮನೆಯಲ್ಲಿ ಚೇಳು ಕಂಡರಾಯಿತು, ಆ ಮನೆಯನ್ನೇ ಬಿಡೋಣ ಎನ್ನುವವಳು. ಇವರು ಬಂದ ಕೆಲವು ದಿವಸವೂ ನಾನು ಜಾಗರೂಕನಾಗಿಯೇ ಇದ್ದೆ. ಯಾರಿಗೂ ಏನೂ ತೊಂದರೆಯಾಗಲಿಲ್ಲ. ತಿಂಗಳಾಯಿತು. ಎರಡಾಯಿತು. ಆರೂ ಆಯಿತು. ತೊಂದರೆ ಇಲ್ಲದೆ ಸುಖವಾಗಿಯೇ ಇದ್ದೆವು. ಆ ಭೂತನ ವಿಷಯವೂ ಮರತೇಹೋಯಿತು.

ಆಫೀಸಿನ ಕೆಲಸ ಮುಗಿಸಿಕೊಂಡು ಮನೆಗೆ ಬರುವವೇಳೆಗೆ ಮನೆಯ ಮುಂದೆ ಗಾಡಿ ನಿಂತಿದ್ದಿತು. ಕಾಫಿ ಕುಡಿಯುತ್ತಿರುವ ವೇಳೆಗೆ ಶಾರದ ಹೇಳಿದಳು.

" ಈ ಮನೆಯವರು ಪುನಃ ಹಿಂದಕ್ಕೆ ಬರ್‍ತಾರಂತೆ "

" ಯಾರು ಹೇಳಿದ್ರು ನಿನಗೆ ? "

" ಅಲ್ನೋಡಿದ್ರೆ ತಿಳಿಯಲ್ವೇ—ಸಾಮಾನು ತರ್‍ತಾ ಇದ್ದಾರೆ. "

ನನ್ನ ಮನಸ್ಸಿಗೇಕೋ ವ್ಯಾಕುಲವಾಯಿತು. ಆ ಭೂತನ ವಿಷಯ ಪುನಃ ಜ್ಞಾಪಕಕ್ಕೆ ಬಂದು ಅಳುಕಿತು. ಮನಸ್ಸಿನಲ್ಲಿಯೇ ಬೇರೊಂದು ಮನೆ ಮಾಡಬೇಕೆಂದುಕೊಂಡೆ.

" ನಾಳೆ ಎಲ್ಲರೂ ಬರ್‍ತಾರಂತೆ. ಆ ಹಿಂದಿನ ಮನೆಯಲ್ಲಿರೋ ಹಾಗಿದೆ " ಎಂದಳು.

" ನಾವು ಬೇರೇ ಮನೆ ನೋಡೋಣೇನು ? "

" ಏಕೆ ?—ಇಂಥಾಮನೆ ಇನ್ನೆಲ್ಲಿ ಸಿಗುತ್ತೆ ? ಅದರಲ್ಲಿ ಅವರೂ ನಮ್ಮ ಜನಾನೇ. ಇಂಥಾ ದೊಡ್ಡ ಮನೆಯಲ್ಲಿ ಒಬ್ಬರೇ ಇರೋದಕ್ಕಿಂತ ಆ ಸಂಸಾರಾನೂ ಹತ್ತಿರದಲ್ಲೇ ಇದ್ರೆ ಅನುಕೂಲ. ಸಮಯ, ಸಂದರ್ಭ, ಅಂದರೆ ಹೊಂದಿಕೊಂಡು ಹೋಗಬಹುದು " ಎಂದು ದೊಡ್ಡ ಲಕ್ಚರೇ ಪ್ರಾರಂಭಿಸಿದಳು. ' ನೋಡೋಣ ' ಎಂದು ಹೇಳಿದರೂ ಬೇರೆ ಮನೆ ಮಾಡಬೇಕೆಂದುಕೊಂಡೆ.

ಮರುದಿವಸ ಭಾನುವಾರ. ಮನೆಯಲ್ಲಿಯೇ ಇದ್ದೆ. ಸಂಜೆಗೆ ಗಾಡಿಯೊಂದು ಬಂದು ನಿಂತಿತು. ಗಾಡಿಯಿಂದಿಳಿದವರು ಆ ಮನೆಯವರು ಅವರ ತಾಯಿ, ಇಬ್ಬರು ಯುವತಿಯರು.

" ಕಾಹಿಲೆ ಬಂದವಳ ಹಾಗಿದ್ದಾಳಲ್ಲ ಅವಳೇ ಅವರ ಸೊಸೆ. ಇನ್ನೊಬ್ಬಳು ಅವರ ಮಗಳು. ಆ ಸೊಸೆಗೇನೇ ಭೂತ ಮೈಮೇಲೆ ಬರುತ್ತಂತೆ " ಎಂದಳು. ಅವಳ ಬಾಯಿಂದ ಭೂತದ ವಿಷಯ ಕೇಳಿ ಬೆಚ್ಚಿದರೂ ತೋರಗೊಡದೆ " ಭೂತ ! ಛೆ, ಏನು ಹಾಗಂದ್ರೆ—ಪಾಪ ಏನೋ ಕಾಹಿಲೆ ಇರಬೇಕು " ಎಂದೆ.

" ಕಾಹಿಲೆ ಅಲ್ಲವಂತೆ, ನಿಜವಾಗಲೂ ಭೂತವಂತೆ. ಈ ಮನೆಯವರ ತಾಯಿ ರುಕ್ಕಮ್ಮ ಇದ್ದಾರಲ್ಲ ಅವರಿಗೆ ಒಬ್ಬ ತಂಗಿ ಇದ್ದರಂತೆ ಗಂಗಮ್ಮಾ ಅಂತ. ಅವರ ಸೊಸೇನ ಇವರು ಬಲು ಗೋಳಿಹುಯ್ಯುಕೊಳ್ತಿದ್ದರಂತೆ. ಅದಕ್ಕೇ ಈಗ ಗಂಗಮ್ಮನೋರು ಭೂತ ಆಗಿ ಬಂದು ಹಿಡಿಸ್ತಿರೋದು. ತಲೇಮೇಲೆ ಗುಂಡಕಲ್ಲು ಬೀಳುತ್ತಂತೆ, ಏನೇನೋ ಆಗುತ್ತಂತೆ. "

" ಅಯ್ಯೋ ಪಾಪ ! ಎಂಥಾ ಚಿಕ್ಕಹುಡುಗಿ. ಯಾರ ತಪ್ಪಿಗೆ ಯಾರಿಗೆ. ಶಿಕ್ಷೆಯೋ. ಇಷ್ಟುದಿನ ಎಲ್ಲಿ ಹೋಗಿದ್ದರಂತೆ ? " ಎಂದೆ.

" ಎಲ್ಲೋ ಯಾತ್ರೆಗೆ ಹೋಗಿದ್ದರು. ಹಾಗೇ ಅವಳ ಊರಿನಲ್ಲೂ ಕೊಂಚದಿನ ಇದ್ದರು ಎಂದು ಕೇಳ್ದೆ. ಇಲ್ಲಿದ್ದರೆ ಮಾತ್ರ ಆ ಭೂತನ ಚೇಷ್ಟೆ, ಈ ಊರು ಬಿಟ್ಟು ಹೋದರೆ ಸುಖವಾಗಿರ್ತಾರಂತೆ. "

" ಹಾಗಾದರೆ ಹೊರಟು ಹೋಗೋದು ತಾನೇ ? "

" ಹೊಟ್ಟೆಗೇನ್ಮಾಡಬೇಕು ?– ಹೊಲಾ ಮನೆ ಎಲ್ಲಾ ಇಲ್ಲೇ ? ಅದರಲ್ಲೋ ಈ ರುಕ್ಕಮ್ಮನವರಂತೂ ' ಭೂತಾನೂ ಇಲ್ಲ, ಗೀತಾನೂ ಇಲ್ಲ. ಎಲ್ಲಾ ಈ ಗಾಜಿನಗೊಂಬೆ ಸೊಸೆ ಆಡ್ತಿರೋ ಆಟ ' ಎಂದು ಮಗನೆದುರಿಗಂದೂ ಅಂದೂ ಈ ಊರೇ ಬಿಟ್ಟು ಹೋಗಲ್ಲಂತೆ. "

" ಅವರು ಹೋಗದಿದ್ದರೆ ಬೇಡ—ಸೊಸೇ ಬೇರೆ ಊರಲ್ಲಿರಲಿ ? "

" ಅದೂ ಇವರಿಗೆ ಸಹನೆ ಇಲ್ಲ. ತಾಯಿ ಮಾತಿನಂತೆ ಅವರೂ ಕುಣೀತಾರಂತೆ. ಇವಳೇನಾದರೂ ತೌರುಮನೆಗೆ ಹೋಗ್ತೀನೆ ಅಂದರೆ ' ನಡಿ ಇನ್ಮೇಲೆ ನಮ್ಮ ಮನೆಗೆ ಬರಬೇಡ ' ಎಂದು ಹೆದರಿಸ್ತಾರಂತೆ. "

" ಅಯ್ಯೋ ಪಾಪ! ನೀನಾಗಲೇ ಎಷ್ಟು ತಿಳಿದುಕೊಂಡು ಬಿಟ್ಟಿದ್ದಿಯಾ? ನಿನಗೆ ಅಂಥಾ ಅತ್ತೆ ಸಿಕ್ಕಿದ್ರೆ...."

" ಅತ್ತೆ ಸಿಕ್ಕಿದ್ರೇನ್ಮಹಾ........ಆಫೀಸಿನಿಂದ ಬರೋ ಹೊತ್ತಿಗೆ ಕಾಫಿ ಕೊಟ್ಟರೆ ತಾಯಿಮಾತು ಕೇಳದೇ ನಮಗೆ ಬೇಕಾದಹಾಗೆ ಅವರ ಮನಸ್ಸೂ ತಿರುಗಿಸಬಹುದು ಎನ್ನೋದು ಬಲ್ಲೆ ! "

‡ ‡ ‡

ಅವರು ಬಂದು ಒಂದು ವಾದವಾದರೂ ಏನೂ ಘಟಿಸಲಿಲ್ಲ. ಯಾರೋ ಮಾಂತ್ರಿಕ ನಿತ್ಯವೂ ಬಂದು ಮಂತ್ರ ಹಾಕುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಇದರಮೇಲೆ ಯಾವು ಯಾವುದೋ ಔಷಧಗಳು. ಯಾವಯಾವ ದೇವರಿಗೋ ಹರಿಕೆಯನ್ನೂ ಹೊತ್ತುಕೊಂಡಿದ್ದರಂತೆ! ಅವರು ಬಂದಂದಿನಿಂದ ಏನೂ ಘಟಿಸಿರಲಿಲ್ಲ. ಆ ಸೊಸೆಯ ಹೆಸರು ಲಕ್ಷ್ಮಿ. ಹೆಸರಿಗೆ ಒಪ್ಪುವ ನಡೆನುಡಿ. ಅವಳಿಗೂ ಶಾರದಾಗೂ ಎಲ್ಲಿಲ್ಲದ ಗೆಳೆತನ ನಡೆಯತೊಡಗಿತು. ತಮ್ಮ ಪಾಡಿಗೆ ತಾವೆಂದಿದ್ದರು. ನಮ್ಮ ಪಾಡಿಗೆ ನಾವೆಂದಿದ್ದೆವು. ಆದರೂ ಏಕೋ 'ಆ ರುಕ್ಕಮ್ಮನವರೊಬ್ಬರಿಲ್ಲದಿದ್ದರೇ' ಎನ್ನಿಸುತ್ತಿತ್ತು. ಅವರ ಬಾಯಿ ಸ್ವಲ್ಪ ಜೋರು. ಮನೆಯಲ್ಲೆಲ್ಲಾ ಅವರದೇ ಅಧಿಕಾರ. ಆದರೆ ಅವರಿಗೂ ನನ್ನವಳನ್ನು ಕಂಡರೆ ಒಂದು ರೀತಿಯ ಮಮತೆ, ಗೌರವ: ನಮ್ಮ ಮಕ್ಕಳನ್ನು ಕಂಡರೆ ಬಲು ಪ್ರೀತಿ.

ರಾತ್ರಿ ಸುಮಾರು ೧ ಘಂಟೆಯಿರಬಹುದು.

"ಶಾರದಮ್ಮಾ, ಶಾರದಮ್ಮಾ" ಎಂದಾರೋ ಕೂಗಿದ ಹಾಗಾಯಿತು. ಎದ್ದೆವು. ಕೂಗುತ್ತಿದ್ದವರು ರುಕ್ಕಮ್ಮನವರು!

"ಕೊಂಚ ಬನ್ನಿ, ಶಾರದಮ್ಮ. ಲಕ್ಷ್ಮಿ ಏಕೋ ಪುನಃ ಹುಚ್ಚುಹುಚ್ಚಾಗುತ್ತಾ ಇದ್ದಾಳೆ. ನಾನು ಹತ್ತಿರ ಹೋಗಕೂಡದು....ಅವರೆದ್ದಿದ್ದಾರೇನು? ಅವರೂ ಬಂದರೆ ಸರಿಹೋದೀತು" ಎಂದರು. ಇದನ್ನು ಕೇಳಿ ಅವರೊಡನೆ ನಾನೂ ಹೊರಟೆ.

ಲಕ್ಷ್ಮಿ ಹುಚ್ಚಿಯಹಾಗೆ ಕುಣಿಯುತ್ತಿದ್ದಾಳೆ. ಆ ಚಿಕ್ಕ ಹುಡುಗಿ ಒಂದೇ ಸಲಕ್ಕೆ ನೆಟ್ಟಗೆ ಹಾರಿ ಸೂರಿಗೆ ತನ್ನ ತಲೆ ತಾಗಿಸಿಕೊಂಡಳು. ನಾವು ಎಷ್ಟುಷ್ಟು ಹಿಡಿದರೂ ಅವಳಿಗೆ ಎಲ್ಲಿಲ್ಲದ ಬಲಬಂದು ಹಾರುವಳು. ತಟ್ಟನೆ ಕೈ ಕೊಡವಿ ಓಡಿಹೋಗಿ ಕಲ್ಲಿನ ಗೋಡೆಗೆ ತಲೆ ತಾಗಿಸಿಕೊಂಡಳು. ಅವಳನ್ನು ಹಿಡಿಯಲು ಬಲು ಪ್ರಯಾಸವಾಯಿತು. ಹಿಡಿದು ಕಟ್ಟಿಹಾಕಿದೆವು. ಬಳಿಯೇ ನಾವೂ ಕುಳಿತೆವು. ಎಲ್ಲಿಂದಲೋ ಅವಳ ತಲೆಯಮೇಲೇ ಕಲ್ಲಿನ ಗುಂಡುಗಳು ಬೀಳಲಾರಂಭಿಸಿದುವು! ನನಗೆ ವಿಚಿತ್ರವಾಗಿ ತೋರಿತು. ಭೂತನ ಚೇಷ್ಟೆಯು ಅರ್ಥವಾಯಿತು. ಕಲ್ಲು ಬಿದ್ದಂತೆಲ್ಲಾ ಅವಳೂ ಕಿಲಕಿಲನೆ ನಕ್ಕು "ರುಕ್ಕೀ

ಏ ರುಕ್ಕೀ ಈಗ ಹೆಂಗಾತು. ನನ್ನ ಸೊಸೇನ ಗೋಳು ಹುಯ್ಯಕೊಂಡೆಯಾ; ನೋಡು—ಈಗ ನೋಡು, ನಿನ್ನ ಸೊಸೇನ " ಎನ್ನುವಳು. ಪುನಃ ಕಿಲಕಿಲನೆ ನಗುವಳು. ಶಾರದ ನನ್ನ ಕಡೆ ನೋಡಿದಳು. ಅವಳು ಹೇಳಿದುದು ಅಕ್ಷರಶಃ ನಿಜವೆಂದು ತಿಳಿಯಿತು.

ಮೇಲಿಂದ ಕಲ್ಲು ಬೀಳುವುದನ್ನು ತಡೆಯಲು ನನಗೊಂದುಪಾಯ ಹೊಳೆಯಿತು. ಲಕ್ಷ್ಮಿಯನ್ನು ಮಂಚದ ಕೆಳಗಿಳಿಸಿದೆವು. ಆಶ್ಚರ್ಯ ! ಅಲ್ಲಿಗೂ ಎಲ್ಲಿಂದಲೋ ಕಲ್ಲುಗಳು ಉರುಳಿಕೊಂಡು ಎಲ್ಲಾ ಕಡೆಯಿಂದಲೂ ಅವಳಿಗೇ ಬಡಿಯಲು ಪ್ರಾರಂಭಿಸಿದುವು. ಮಂತ್ರವಾದಿಗೆ ಹೇಳಿ ಕಳುಹಿಸಿದರೆ "ಭೂತನ ಉಪಾಸನೆ ಮಾಡುತ್ತಿದ್ದೇನೆ. ನಾನು ಈಗೇನೂ ಮಾಡುವಹಾಗಿಲ್ಲ" ಎಂದು ಉತ್ತರ ಕಳುಹಿಸಿದ. ಕಲ್ಲುಗಳ ಸುರಿಮಳೆ ಸ್ವಲ್ಪ ಆದಮೇಲೆ ಝುಗ್ಗನೆ ಅವಳ ಸೀರೆಗೆ ಬೆಂಕಿ ಹತ್ತಿತು ! ಅವಳ ಕೈ ಮೈ ಘಾಯವಾಯಿತು. ಅವಳು ಸಾಯಲಿಲ್ಲ. ಎಂತಹ ದೊಡ್ಡ ಕಲ್ಲು ಅವಳ ತಲೆಯಮೇಲೆ ಬಿದ್ದರೂ ಅವಳಿಗೆ ತೊಂದರೆ, ಸಂಕಟವೇ ಹೊರತು ಸಾಯುತ್ತಿರಲಿಲ್ಲ. ವಿಪರೀತ ಆಯಾಸವಾಗಿ ಬಿದ್ದುಕೊಂಡಳು. ಅವಳಿಗೆ ಸ್ವಲ್ಪ ಕಾಫಿಯೋ, ಹಾಲನ್ನೋ ಕುಡಿಸುವಂತೆ ಶಾರದಾಗೆ ಹೇಳಿದೆ.—ಅವಳೂ ರುಕ್ಕಮ್ಮನವರಿಗೆ ಹೇಳಿದಳು. " ಅದು ಪ್ರಯೋಜನ ಇಲ್ಲಾಮ್ಮಾ. ಇನ್ನೆರಡು ದಿನ ಹೀಗೇ. ಇವಳೇನು ಮುಟ್ಟಿದರೂ ಹಾಳೇ " ಎಂದು ಗೊಣಗುಟ್ಟಿದರು. ಅತ್ತೆ ಸೊಸೆಯರ ಪ್ರೀತಿ ಬಲ್ಲ ಶಾರದ ಮನೆಗೆ ಹೋಗಿ ಹಾಲು ತಂದಳು. ಆ ಪಾತ್ರೆ ಅವಳನ್ನು ಸೋಕಿದೊಡನೆಯೇ ಅದರಲ್ಲಿ ಹಾಲೇ ಇರಲಿಲ್ಲ ! ಬೆಚ್ಚಿಬಿದ್ದು ಪುನಃ ನೋಡಿದರೆ ಹಾಲಿದೆ ! ಈ ರೀತಿಯಾಯಿತು. ಹೀಗೆಯೇ ಇನ್ನೂ ವಿಚಿತ್ರಗಳಾದುವು. ಅವಳ ಮೇಲಿದ್ದ ಒಡವೆ ತಟ್ಟನೆ ಮಾಯವಾಯಿತು. ಒಡವೆ ಹೋದುದನ್ನು ನೋಡಿ ರುಕ್ಕಮ್ಮನವರೂ ಬೆಚ್ಚಿಬಿದ್ದರು.

" ಗಂಗಾ, ಗಂಗಾ, ಈ ಊರು ಬಿಟ್ಟು ಹೋಗ್ತೀವೆ ಕೊಡು. ನನ್ನ ಒಡವೆ ಕೊಡು " ಎಂದರು. ಮೂಲೆಯೊಂದರಿಂದ ಗಂಟೊಂದು ಸರಿದು ಬಂದಿತು. ಅದರಲ್ಲಿ ಆ ಒಡವೆಗಳೇ ಇದ್ದುವು ! ಹೀಗೆಯೇ ರಾತ್ರಿಯಲ್ಲಾ ಆಯಿತು. ಬೆಳಿಗ್ಗೆ ಎಲ್ಲವೂ ಶಾಂತವಾಯಿತು. ಆಯಾಸದಿಂದ, ಲಕ್ಷ್ಮಿ ಹಾಸಿಗೆ ಹಿಡಿದು ಮಲಗಿದಳು. ಹೊಟ್ಟೆಗೆ ಸ್ವಲ್ಪ ಹಾಲೂ ಹಣ್ಣೂ ಸೇರಿತಂತೆ.

ನಿನ್ನೆ ರಾತ್ರಿ ೧ ಘಂಟೆಗೆ ಷುರುವಾದ ಭೂತನ ಚೇಷ್ಟೆ ಈ ದಿನ ಸಂಜೆಗೇ ಷುರುವಾಯಿತು. ಪಾಪ, ಲಕ್ಷ್ಮಿ ಊಟಕ್ಕೆ ಕುಳಿತರೆ ಅನ್ನದ ಬದಲು ಮಣ್ಣಾಗುವುದು! ಇದೇ ಎರಡನೆಯ ದಿನದ ರಾತ್ರಿ. ಈ ರಾತ್ರಿಯಾದರೆ ಇನ್ನೊಂದು ವಾರವೊ ಹದಿನೈದು ದಿವಸವೋ ಚಿಂತೆ ಇಲ್ಲವಂತೆ. ಒಂದು ವಾರವೇಕೆ? ಬಹುಶಃ ಸ್ವಲ್ಪ ಸುಖತೋರಿಸಿ ಹೆಚ್ಚು ಕಷ್ಟ ಕೊಡಲೋ ಸುಗವೋ? ಅಯ್ಯೋ ದೇವರೆ! ಯಾರ ಮುಯ್ಯಿ ಯಾರ ಮೇಲೆ.

‡ ‡ ‡

ನಾವು ಎಷ್ಟೆಷ್ಟೋ ಹೇಳಿದರೂ ಅವರು ಈ ಊರು ಬಿಡಲೊಪ್ಪರು. ನಾನು ಆ ಮನೆ ಬಿಡಲಿಚ್ಛಿಸಿದರೂ ಶಾರದಾ ಒಪ್ಪಲಿಲ್ಲ. "ನಮಗೇನೂ ತೊಂದರೆ ಇಲ್ಲ. ಪಾಪ, ಲಕ್ಷ್ಮೀ ಕಷ್ಟಕ್ಕಾದರೂ ಇರೋಣ" ಎನ್ನುವಳು. ಅವಳನ್ನು ಅವಳ ಮನೆಬಿಟ್ಟು, ನಮ್ಮ ಮನೆಯಲ್ಲಿಟ್ಟುಕೊಂಡರೂ ಪ್ರಯೋಜನವಾಗಲಿಲ್ಲ. ಇಲ್ಲಿಯೂ ಆ ಚೇಷ್ಟೆಗಳೇ ಪ್ರಾರಂಭವಾದುವು. ಬದುಕಬೇಕೆಂದರೆ ಅವಳು ಆ ಊರು ಬಿಡಬೇಕು. ಆ ಊರು ಬಿಟ್ಟರೆ ಜೀವನಕ್ಕಿಲ್ಲದೆ ಎಲ್ಲರೂ ವ್ಯಥೆಪಡಬೇಕು. 'ಜೀವನಕ್ಕೆ ವ್ಯಥೆಪಟ್ಟರೂ ಚಿಂತೆಯಿಲ್ಲ, ಒಂದು ಜೀವ ಉಳಿಸಲು ನಾನಂತೂ ಊರು ಬಿಡುತ್ತಿದ್ದೆ' ಎಂದೆ. ಆದರೆ, ಅವರ ಮತವೇ ಬೇರೆಯಿದ್ದಿತು.

ಭೂತನ ಚೇಷ್ಟೆಗಳು ಸಂಪೂರ್ಣವಾಗಿ ನಡೆದು ಹೋದಮೇಲೆ ಶಾರದಾನೇ ಅವಳನ್ನು ಕರೆತಂದು ಉಪಚರಿಸುತ್ತಿದ್ದಳು. ಅವಳ ಸಂಕಟದಲ್ಲಿ ಇವಳೂ ಸಹಾನುಭೂತಿ ತೋರಿಸಿ ಅವಳ ಕಷ್ಟವನ್ನು ಕಡಿಮೆ ಮಾಡುವಳು. ಅಂತೂ ಲಕ್ಷ್ಮಿಯೂ ನಮ್ಮ ಮನೆಯವಳೊಬ್ಬಳಂತೆಯೇ ಆಗಿದ್ದಳು.

ರಾತ್ರಿ ೧೦ ಘಂಟೆಯ ಸಮಯ. ನಾವೂ ಮಲಗಬೇಕು. ಆಗ ಲಕ್ಷ್ಮಿ "ಅಮ್ಮಾ" ಎಂದು ಕಿರಿಚಿದಳು. ಇಬ್ಬರೂ ಅವಳ ಬಳಿ ಓಡಿದೆವು. ಶಾರದಾ ಹತ್ತಿರ ಕುಳಿತು,

"ಲಕ್ಷ್ಮೀ ಏನು ತಾಯಿ" ಎಂದಳು. ಲಕ್ಷ್ಮೀ ಕಣ್ಣು ಬಿಟ್ಟು,

"ಅಮ್ಮಾ....ಅಮ್ಮಾ" ಎಂದು ಪುನಃ ದೈನ್ಯದಿಂದ ಹೇಳಿದಳು.

" ಏನಮ್ಮಾ, ಏನಾಗುತ್ತೆ—ಹಾಲು ಕೊಡಲೇ " ಎಂದಳು ಶಾರದ. ಲಕ್ಷ್ಮಿ ಮತ್ತೆ ದೈನ್ಯದಿಂದ " ಬೇಡಮ್ಮಾ—ಬೇಡ. ಅಯ್ಯೋ ದೇವ್ರೆ ಸಂಕಟ. ಸತ್ತಾದರೂ......."

" ಲಕ್ಷ್ಮೀ ಬಿಡ್ತೂ ಅನ್ನು—ಹಾಗೆ ಯೋಚನೆ ಮಾಡಬಾರದು. ತೊಗೋಮ್ಮ ಹಾಲು ಕುಡಿ. ಹೊಟ್ಟೇಲೇನೂ ಇಲ್ಲ. ಸಂಕಟ ಅಷ್ಟೆ " ಎಂದು ಹಾಲು ಕುಡಿಸತೊಡಗಿದಳು.

" ಅಯ್ಯೋ ಸಂಕಟ—ಅಮ್ಮಾ—ಅಮ್ಮಾ " ಎಂದು ಹಾಲುಗುಳಿ ದೊಪ್ಪನೆ ಬಿದ್ದಳು. ನಮಗೆ ಭಯವಾಯಿತು. ಅವರ ಮನೆಯವರೂ ಬಂದು ನೋಡಿದರು. ಹೆಸರು ಹಿಡಿದು ಕೂಗಿದರು. ರುಕ್ಕಮ್ಮನವರು, ಲಕ್ಷ್ಮೀ ಹೀಗೆ ಇದ್ದುದು ನೋಡಿರಲಿಲ್ಲ ಅವರಿಗೂ ಹೆದರಿಕೆಯಾಯಿತು. ನಾನೇ ಹೋಗಿ ಡಾಕ್ಟರನ್ನೂ ಕರೆತಂದೆ. ಡಾಕ್ಟರೂ ನೋಡಿದರು. ಕೊನೆಯದಾಗಿ ಇಂಜೆಕ್ಷ್ನ ಕೊಟ್ಟರು. ಪ್ರಯೋಜನವಿಲ್ಲ. ಲಕ್ಷ್ಮಿಯ ಕಷ್ಟ ಮುಗಿದಿದ್ದಿತು. ಲಕ್ಷ್ಮಿಯು ಸತ್ತು ಹೋಗಿದ್ದಳು. ಅಂತಹ ಚಿಕ್ಕ ವಯಸ್ಸಿನಲ್ಲಿಯೇ, ಪ್ರಪಂಚವನ್ನು ತಿಳಿಯದೆಯೇ, ಹೂವರಳಿ ಹಣ್ಣಾಗದೆಯೇ ಉದುರಿದುದನ್ನು ನೋಡಿ ನಮಗೆ ದುಃಖವಾದರೂ ಸಧ್ಯಃ ಅವಳು ಕಷ್ಟದಿಂದ ಪಾರಾದಳಲ್ಲಾ ಎಂದು ಸಂತೋಷವೇ ಆಯಿತು. ರುಕ್ಕಮ್ಮನವರಿಗೆ ತಲೆ ತಾಕಿದಮೇಲೆ ಬುದ್ಧಿ ಬಂತು. ತಾವೇ ಅನ್ಯಾಯವಾಗಿ ಲಕ್ಷ್ಮಿಯನ್ನು ಕೊಂದ ಹಾಗಾಯಿತಲ್ಲಾ ಎಂದು ಬೈದುಕೊಳ್ಳಲಾರಂಭಿಸಿದರು. ಮನೆಯಲ್ಲಾ ಅಳುವಿನಿಂದ ತುಂಬಿಹೋಯಿತು.

ಸಂಸ್ಕಾರ ಕ್ರಿಯೆಗಾಗಿ ಭಟ್ಟರೊಬ್ಬರು ಬಂದರು. ಶಾಸ್ತ್ರವಿಧಿಯಂತೆ ಅವರು ಕೈಕಾಲು ಮುಟ್ಟಿನೋಡಿದರೆ ತಣ್ಣಗಿರಲಿಲ್ಲ! ಅವರಿಗಾಶ್ಚರ್ಯವಾಯಿತು! ನಡುನೆತ್ತಿನೋಡಿದರೆ ಬೆಚ್ಚಗೇ ಇದ್ದಿತು! ತಮ್ಮನ್ನು ತಾವೇ ನಂಬದಾದರು.

" ರಾಯರೆ, ಈ ಆಶ್ಚರ್ಯನೋಡಿ " ಎಂದರು. ನಾನೂ ಮುಟ್ಟಿ ನೋಡಿದೆ. ಭಟ್ಟರು ಹೇಳಿದ್ದಂತೆಯೇ ಬಿಸಿಯಿದ್ದಿತು. ಡಾಕ್ಟರೂ ನೋಡಿದರು-ಬಿಸಿಯಿದ್ದಿತು. ಇಂಜಕ್ಷ್ನ ಕೊಟ್ಟರೆ ಪ್ರಯೋಜನವಾಗಲಿಲ್ಲ. ಅವರಿಗೂ

ದಿಗ್ಭ್ರಮೆಯಾಯಿತು. ಬೆಳಗಿನವರೆವಿಗೂ ಹಾಗೆಯೇ ಇಟ್ಟಿರಬೇಕೆಂದೂ, ಇದು ಭೂತನ ಚೇಷ್ಟೆ ಇದ್ದರೂ ಇರಬಹುದೆಂದೂ ತೀರ್ಮಾನವಾಯಿತು. ಅಳುವೆಲ್ಲಾ ತಟ್ಟನೆ ನಿಂತಿತು. ರುಕ್ಕಮ್ಮನವರು ಎಲ್ಲಾ ದೇವರಿಗೂ ಹರಿಕೆ ಹೊತ್ತರು.

ರಾತ್ರಿಯಲ್ಲಾ ಒಬ್ಬರಿಗೂ ನಿದ್ರೆಯಿಲ್ಲ. ಘಳಿಗೆಗೆಂಟು ಬಾರಿ ಲಕ್ಷ್ಮಿಯ ಕಡೆ ನೋಡುತ್ತಿರುವುದೇ. ಅವಳೋ ನಿದ್ರೆಯಲ್ಲಿದ್ದಂತೆ ತೋರುತ್ತಿದ್ದಳು. ಅವಳು ಬದುಕಲೆಂದೇ ಎಲ್ಲರೂ ಹಾರೈಸುತ್ತಿದ್ದೆವು.

ಬೆಳಗಾಯಿತು. ಮೊದಲು ಬೆಚ್ಚಗಿದ್ದ ಭಾಗವೂ ಈಗ ತಣ್ಣಗಾಗಿದ್ದಿತು. ಲಕ್ಷ್ಮಿಯ ಕೊನೆಯ ಯಾತ್ರೆಯು ಮುಗಿದುದೇ ಸರಿಯೆಂದು ಸಿದ್ಧಾಂತವಾಯಿತು. ಪುನಃ ಮನೆಯಲ್ಲಾ ಅಳುವಿನಿಂದ ತುಂಬಿತು. ರುಕ್ಕಮ್ಮನವರನ್ನು ಸಮಾಧಾನ ಮಾಡುವುದಕ್ಕಂತೂ ಯಾರಿಂದಲೂ ಸಾಧ್ಯವಿಲ್ಲ.

ಎಲ್ಲಾ ಕ್ರಿಯೆಗಳೂ ನಡೆದು ಶವ ಸಂಸ್ಕಾರಕ್ಕೆ ತೆರಳಬೇಕು. " ಜೈ ಭಗವಂತಾ " ಎಂದಾರೋ ಬಂದರು. ಈ ಗಲಾಟೆಯಲ್ಲಿ ಅವರನ್ನು ಕೇಳುವವರಾರು ? ಮುಂದೆ ಹೋಗಿರೆಂದು ಅವರಿಗೆ ಸಂಜ್ಞೆ ಮಾಡಿದೆ. ನನ್ನ ಸಂಜ್ಞೆ ಅವರಿಗೆ ತಿಳಿದಿರಲಾರದು. ಲಕ್ಷ್ಮಿಯ ಶವವನ್ನೇ ಎವೆಯಿಕ್ಕದೆ ನೋಡಿದರು. ನೋಡುತ್ತಾ, ನೋಡುತ್ತಾ ಓಡಿಬಂದು,

" ಸ್ವಾಮಿಾ, ಭಗವಂತಾ, ಮೊದಲು ಕಟ್ಟು ಬಿಚ್ಚೀ ಸ್ವಾಮಿ. ಬದುಕಿದಾಳೆ ಸತ್ತಿಲ್ಲ " ಎಂದರು, ನಮಗೆಲ್ಲಾ ದಿಗ್ಭ್ರಮೆಯಾಗಿ ನಿಂತೆವು. ಅವರೇ ಸರಸರನೆ ಕಟ್ಟು ಬಿಚ್ಚಿದರು.

" ಸ್ವಾಮಿಾ, ಇದು ಭೂತನ ಚೇಷ್ಟೆ. ನೋಡಿ ಆ ಹೆಣ್ಣು ಭೂತವನ್ನು ಇದನ್ನೇ ನಾನು ಹುಡುಕಿಕೊಂಡು ತಿರುಗುತ್ತಿದ್ದುದು. ಬಲು ಕೆಟ್ಟ ಭೂತ " ಎಂದು ಹೇಳಿ ತಮ್ಮಲ್ಲಿದ್ದ ನಿಂಬೆಯ ಹಣ್ಣೊಂದನ್ನು ಹೆಚ್ಚಿದರು.

" ಅಯ್ಯೋ ! " ಎಂದರುಚುತ್ತಾ ಲಕ್ಷ್ಮಿ ಮೇಲಕ್ಕೆದ್ದಳು. ನಮಗೆಲ್ಲರಿಗೂ ದಿಗ್ಭ್ರಮೆಯಾಯಿತು. ಈ ಆಶ್ಚರ್ಯವನ್ನು ನೋಡಲು ಜನ ಸಂದಣಿ ಮೆರೆಯಿತು.

" ಕೊನೆಗೆ ಇಲ್ಲಿ ಸಿಕ್ಕೆಯಾ, ನಡಿ. 'ರಾಮಾ' ಎನ್ನು " ಎಂದರು ಸಾಧುಗಳು.

" ಅನ್ನೊಲ್ಲಾ "

"ಹಾ. ಹಾಗೆನ್ನುವಿಯಾ" ಎಂದು ನಿಂಬೆಯ ಹಣ್ಣಿನ ಹೋಳೊಂದನ್ನು ಕಿವಿಚಿದರು.

" ಅಯ್ಯೊ ಬರ್ತೀನೆ. ನೀವು ಹೇಳಿದಲ್ಲಿಗೆ ಬರ್ತೀನೆ " ಎಂದಿತು ಭೂತ.

ಸಾಧುಗಳು ಲಕ್ಷ್ಮಿಯನ್ನು ಮುಂದೆ ಮಾಡಿಕೊಂಡು ಹೊರಟರು. ನಾವೂ ಅವರಹಿಂದೇ ಹೊರಟೆವು. ಭೂತ ಅಲ್ಲಿ ಇಲ್ಲಿ ಎಲ್ಲಾದರೂ ಓಡಲು ಪ್ರಾರಂಭಿಸಿದರೆ ನಿಂಬೆಯ ಹೋಳಿನಿಂದ ಹಿಡಿತದಲ್ಲಿಡುತ್ತಿದ್ದರು.

ಹೀಗೆಯೇ ಊರ ಹೊರಗೆ ಹೊರಟರು. ಊರಿನಿಂದ ಎರಡು ಮೈಲಿಗಳಾಚೆ ಅಲ್ಲೊಂದು ಭಾರೀ ತೋಪು. ಬೆಳಗಿನ ಹೊತ್ತಿನಲ್ಲೇ ಅಲ್ಲಾರೂ ಹೋಗುತ್ತಿರಲಿಲ್ಲ. ಆ ತೋಪಿನಲ್ಲೊಂದು ಕೇಶವ ದೇವಾಲಯ. ದೇವಾಲಯದ ಬಳಿಯೇ ಆಳವರಿಯದ ಗಭೀರವಾದ ಪುಷ್ಕರಿಣಿಯೊಂದು. ಅಲ್ಲಿಗೆ ನಡೆದರು.

" ಇವಳನ್ನೇಕೆ ಹಿಡಿದೆ ? " ಎಂದರು ಸಾಧುಗಳು.

" ನನ್ನ ಸೊಸೇನ್ನ ಗೋಳಿಡಿಸಿದ್ದಳು ರುಕ್ಕು "

" ಆ ಊರಿಗೇಕೆ ಬಂದಿದ್ದೆ ? "

" ಅಲ್ಲಿ ನನ್ನ ತಂಗೀ ಮಗಳಿದ್ದಳು "

" ನಾನು ಬಂದೇ ಎಂದು ಓಡಿದೆಯೋ, ನಿನ್ನ ಬಿಟ್ಟೇನೆ. ಎಣಿಸು ಎಷ್ಟು ಮನೆ ಹಾಳುಮಾಡಿದೆ ? ಎಷ್ಟು ಜನರನ್ನಾಹುತಿಯಾಗಿಸಿದೆ ? "
" ಹಹ್ಹ " ಎಂದು ಲಕ್ಷ್ಮಿ ನಕ್ಕಳು.

" ನಗುವೆಯಾ............ಮುಳುಗಿ ಅದರಲ್ಲಿ ಸ್ನಾನಮಾಡು " ಎಂದು ಹಣ್ಣು ಕಿವಿಚಿದರು. ಲಕ್ಷ್ಮಿ " ಅಯ್ಯೊ " ಎಂದು ಹಾರಿದಳು. ಅವಳಿಗೆ ಈಜು ಬಾರದು. ನಮಗೆ ಭಯವಾಯಿತು. " ಬಾ ಮೇಲಕ್ಕೆ " ಬಂದಳು.

ದೇವಸ್ಥಾನದ ಸುತ್ತಲೂ ಪ್ರದಕ್ಷಣೆ ಮಾಡಿಸಿ " ನಡೀ, ನೀನಿನ್ನು ಆ ಗಿಡದ ಮೇಲಕ್ಕೆ. ' ರಾಮಾ ' ಅನ್ನು ಪುನಃ ಬರಬೇಡ " ಎಂದು ಪುನಃ ಹಣ್ಣು ಕಿವಿಚಿದರು.

" ರಾಮಾ, ರಾಮಾ " ಎನ್ನುತ್ತಾ ಲಕ್ಷ್ಮಿ ದೊಪ್ಪನೆ ಬಿದ್ದಳು.

" ಅವಳಗುಪಚರಿಸಿ. ಭೂತ ಬಿಟ್ಟಿತು. ಪುನಃ ಬರುವುದಿಲ್ಲ "ವೆಂದರು. ಎಲ್ಲರೂ ಲಕ್ಷ್ಮಿಯ ಬಳಿ ಸಾರಿದೆವು. ಲಕ್ಷ್ಮಿ ಮೇಲಕ್ಕೆದ್ದಳು. ನಮಗೆಲ್ಲರಿಗೂ ಸಂತೋಷವಾಗಿ ಸಾಧುಗಳಿಗೆ ವಂದಿಸಲು ಹಿಂತಿರುಗಿ ನೋಡಿದರೆ ಅವರೇ ಇರಲಿಲ್ಲ.

‡ ‡ ‡

ಲಕ್ಷ್ಮೀ ಭೂತನಿಂದ ಬಿಡುಗಡೆ ಹೊಂದಿ ವರ್ಷದ ಮೇಲಾಗಿದೆ. ಸುಖವಾಗಿದ್ದಾಳೆ. ಈಗ ಅವಳಿಗೊಂದು ಮಗು. ರುಕ್ಕಮ್ಮನವರಂತೂ ಬಲು ಮಾರ್ಪಟ್ಟಿದ್ದಾರೆ. ತಮ್ಮ ಸೊಸೆಯನ್ನು ಕಂಡರೆ ಬಲು ಪ್ರೀತಿ. ಲಕ್ಷ್ಮೀ ಶಾರದ ಅಕ್ಕತಂಗಿಯರಂತಿದ್ದಾರೆ. ದೈವಮಾಯೆ ಬಲ್ಲವರಾರು ?

ಓಂ ಶಾಂತಿಃ ಶಾಂತಿಃ ಶಾಂತಿಃ.

# ನನ್ನ ಮದುವೆ

" ನಾಳೀಗೆ ಮೂರು ವರ್ಷ ಆಗುತ್ತೆ; ಏನೂ ಅನ್ನೋದು ಗೊತ್ತೆ ? "

" ಅಯ್ಯೊ ! ಪಾಪ. ನಿನಗೊಬ್ಬಳಿಗೇ ಗೊತ್ತಿರೋದು ಸುಮ್ಮನಿರು ಸಾಕು. ನನ್ನ ಡೈರಿ ತೆಗೆದುನೋಡು ನನಗೆ ಗೊತ್ತೋ ಇಲ್ವೋ ? "

" ಅಂತೂ ಆ ಎದುರುಗೊಳ್ಳೋ ರಾತ್ರಿ ಜ್ಞಾಪಿಸಿಕೊಳ್ಳಲಿಕ್ಕೆ ನನಗೆ ಭಯವಾಗುತ್ತೆ. ನೀವಿಲ್ಲದಿದ್ರೆ ನಮ್ಮ ಗತಿ ಏನಾಗ್ತಿತ್ತು ! ನಮ್ಮ ಮನೆತನದ ಮಾನಮರ್ಯಾದೆ ಏನಾಗ್ತಿತ್ತು ಎಂತ ಯೋಚಿಸಿಕೊಳ್ಳಲಿಕ್ಕೂ ಭಯ ವಾಗುತ್ತೆ !! "

" ಏನಾಗ್ತಿತ್ತು ಶಾರದ ? ನನ್ನ ಬದಲು ಇನ್ನೊಬ್ಬನಿಗೆ ಕೊಟ್ಟು ಮದುವೆ ಯಾಗ್ತಿತ್ತು. ಹಾಲು, ಸಕ್ಕರೆಯಲ್ಲಿ ಬೆಳೆದ ನೀನು ಹಾಲು ಸಕ್ಕರೆ ತಿನ್ನೋರ ಮನೆಗೇ ಸೇರ್ತಿದ್ದೆಯೋ ಏನೋ ? "

" ಮತ್ತಾಗಲೆ ಪ್ರಾರಂಭಿಸಿದರಲ್ಲ—ಹಾಲುಸಕ್ಕರೆ, ಹಾಲುಸಕ್ಕರೆ ಅಂತ; ನಾನು ಮನೆಗೆ ಹೋದಾಗಲೆಲ್ಲಾ ಅಮ್ಮ " ಹಾಲುಸಕ್ಕರೆಯಲ್ಲಿ ಬೆಳೆದ ಶಶೀ ( ಇದು ಶಾರದಾನ ತೌರುಮನೇ ಹೆಸರು) ನಮ್ಮಂಥಾ ಬಡವರ ಮನೆಯಲ್ಲಿ ಏನೂ ಅಂಥಾ ಸುಖಪಟ್ಟಾಳು " ಎಂದು ನೀವು ಹೇಳಿದ್ದನ್ನೇ ಹೇಳ್ತಿರ್ತಾಳೆ. ನಿಮ್ಮ ಕೈ ಹಿಡಿದನಲ್ಲ. ನನಗದೇ ಸಾಕು. "

" ಶಾರದಾ, ಮದುವೆಯಾಗೋದಕ್ಕೂ ಮುಂಚೆ, ನೀವು ನಮ್ಮೂರಿ ನಲ್ಲೇ ಇದ್ದಾಗ ನೀನೊಂದುಬಾರಿ ನಿಮ್ಮ ತಾಯಿಜೊತೆಗೆ ನಮ್ಮ ಮನೆಗೆ ಬಂದಿದ್ದಾಗ ನಮ್ಮ ತಾಯಿ—' ಶಶಿ ' ನಿನಗ್ಯಾವಾಗ ಮದುವೆ ? " ಎಂದು ಕೇಳಿದ್ದಕ್ಕೆ, ' ನಿಮ್ಮ ರಘು ನನ್ನ ಎಂದು ಮದುವೆ ಮಾಡಿಕೊಂಡರಂದು '

ಎಂದು ಹೇಳಿದ್ದು ಜ್ಞಾಪಕದಲ್ಲಿದೆಯೇ? ಅಂತೂ, ದೇವರಿಗೆ ನಿನ್ನ ನನ್ನ ಮೊರೆ ಕೇಳಿಸಿತು ಎಂದು ಕಾಣುತ್ತೆ. ಇನ್ನೇನು ನಿನ್ನ ಮದುವೆ ಆಗಿಹೋಯಿತು, ಇನ್ನು ನಾನು ಮದುವೆ ಯೋಚನೆ ಬಿಟ್ಟು ಯಾವುದಾದರೊಂದು ಸೇವಾ ಕಾರ್ಯಕ್ಕೆ ಸೇರಿಕೋಬೇಕೂ ಎಂತಿದ್ದಾಗಲೇ ನಿನ್ನ ಜೊತೆಗೆ ನನ್ನ ಮದುವೆ ಆಗಬೇಕೆ! ಅಷ್ಟು ಜಾಗ್ರತೆ ಇದೆಲ್ಲಾ ಹೇಗಾಯಿತು, ಶಾರದ?"

"ದೇವರ ದಯೆಯಿದ್ದು—ನೀವು ಮನಸ್ಸುಮಾಡಿದ್ದರಿಂದ. ಮದುವೆ ನಿಶ್ಚಯವಾದೊಡನೆಯೇ ಆ ಮದುವೆ ಬೇಡ, ನಿಮ್ಮನ್ನೇ ಮದುವೆಯಾಗ್ತೀನೆ ಎಂದು ಅಮ್ಮನಿಗೆ ಸೂಕ್ಷ್ಮವಾಗಿ ಹೇಳಿದೆ. ಆದರೆ ಅಮ್ಮಂದೊಂದು ರೀತಿ. ಅವರ ಮೋಟಾರು; ಹೊರಗಿನ ಡಬ್ಬು ಇವಕ್ಕೆ ಮೋಸಹೋದಳು. ನಮ್ಮ ಮನೆಯಲ್ಲೋ, ನಿಮಗೆ ಗೊತ್ತಿರೋ ಹಾಗೆ, ಅಮ್ಮನ ಮಾತೇ ಸ್ವಲ್ಪ ಹೆಚ್ಚು ............ಅಂತೂ ಆ ಕಷ್ಟದಿಂದ ಪಾರಾದೆವಲ್ಲ ...ಅಷ್ಟೇ ಸಾಕು."

"ನಮ್ಮ ಪಾಲಿಗಂತೂ ದೇವರಿದ್ದಾನೆ....ಅಲ್ವೆ? ಶಾರದ"

"ಹು"

‡ ‡ ‡

"ನನ್ನ ಮದುವೆ ಇತರೆಯ ಮದುವೆಯಂತೆ ನಡೆಯಲಿಲ್ಲ. ವರ ಹುಡುಗಿಯನ್ನು ನೋಡಿದ, ಹುಡುಗಿ ವರನನ್ನು ಮೆಚ್ಚಿದಳು, ಇಬ್ಬರ ತಂದೆ ತಾಯಿಯರು ಒಪ್ಪಿದರು; ಮದುವೆ ವಿಜೃಂಭಣೆಯಿಂದ ನಡೆಯಿತೆಂದ ಹಾಗಾಗ ಲಿಲ್ಲ. ಇಂತಹುದು ನೂರಕ್ಕೆ ತೊಂಬತ್ತೊಂಬತ್ತಾದರೂ ಉಳಿದಿರುವ ಇನ್ನೊಂದಕ್ಕೆ ನನ್ನ ಮದುವೆ ಸೇರಿದುದು. ನಮ್ಮ ಮದುವೆಯಲ್ಲಿ ವರನಾಗಲಿ ಕನ್ಯೆಯಾಗಲಿ ಒಪ್ಪಿರಲಿಲ್ಲವೆಂದಲ್ಲ. ನಮ್ಮಿಬ್ಬರಿಗೂ ಮದುವೆಯಾಗುವುದಕ್ಕೆ ಮುಂಚೆಯೇ ಒಬ್ಬರಿಗೆ ಒಬ್ಬರಲ್ಲಿ ಪ್ರೀತಿ. ಆಗಲೇ ಗಂಡಹೆಂಡತಿಯರಾದು ವೆಂದು ಭಾವಿಸಿದ್ದರೂ ಶಶಿಗೆ ಮನೆಯಲ್ಲಿ ಏನು ತೊಂದರೆಯಾದರೂ ನನ್ನ ಬಳಿಯೇ ಓಡಿ ಬರಬೇಕೆ? ಅವಳ ಮನೆಯಲ್ಲಿ ತಿಂಡಿ ಏನಿದ್ದರೂ ಅವಳ ಪಾಲಿನಲ್ಲಿ ನನಗರ್ಧ. ನಾನಾದರೂ ಹಾಗೆಯೇ ಅವಳನ್ನು ಕಾಣುತ್ತಿದ್ದೆ. ಅವಳು ಅರಿಶಿನ ಕುಂಕುಮಕ್ಕೆ ಕರೆಯಲು ಹೋದರೆ ನಾನು ಟೆನ್ನಿಸ್

ಮ್ಯಾಚಿನಲ್ಲಿ ಗೆದ್ದ ಕಪ್ಪೇ ಆಗಬೇಕೆ! ಅವಳ ತಾಯಿ ಅವಳಿಗೆ ಬೈಯಲಿ, ಹೊಡೆಯಲಿ, ಮನೆಯಲ್ಲಿನ ಇತರ ಬಟ್ಟಲುಗಳನ್ನೆಲ್ಲಾ ಬಿಟ್ಟು ನನ್ನ ಕಪ್ಪೇ ಆಗಬೇಕೆ! ಪಾಪ, ಇನ್ನೂ ಏನೂ ತಿಳಿಯದ ಬಾಲೆ!

ನಮ್ಮದು ತುಂಕೂರು, ನಮ್ಮ ತಂದೆ ಲಾಯರು, ರಸ್ತೆಗೆ ಮೂರು ನಾಲ್ಕು ಬೋರ್ಡುಗಳಿರುವ ಈಗಿನ ಕಾಲದಲ್ಲಿ ನಮ್ಮ ತಂದೆ ಹಾಗೂ ಹೀಗೂ ತಮ್ಮ ಹಿಂದಿನ ಕೀರ್ತಿಯ ಮೇಲೆಯೇ ತಳ್ಳಿಕೊಂಡು ಹೋಗುತ್ತಿದ್ದರು. ನಾನೂ ಅಲ್ಲಿಯೇ ಓದುತ್ತಿದ್ದೆ. ಅಕ್ಕತಂಗಿಯರಿಲ್ಲದೆ ನಾವು ಮೂರು ಜನ ಅಣ್ಣತಮ್ಮಂದಿರು ಮಾತ್ರ, ನಾನೇ ಕಿರಿಯವನು.

ಶಶಿಯ ತಂದೆಗೆ ವರ್ಗವಾದಾಗ ನಾನಲ್ಲಿಯೇ ಸೀನಿಯರ್ ಇಂಟರ್ ಕ್ಲಾಸಿನಲ್ಲಿ ಓದುತ್ತಿದ್ದೆ. ಅವರು ಅಸಿಸ್ಟೆಂಟ್ ಕಮಿಷನರು. ಬಲು ದಿನ ದಿಂದಲೂ ಅಸಿಸ್ಟೆಂಟ್ ಕಮಿಷನರುಗಳು, ಇರುತ್ತಿದ್ದ ಮನೆ. ನಮ್ಮ ಮನೆಯಿಂದ ಎರಡನೇದು. ಶಶಿಯವರು ಬಂದಾಗ ಯಾರು ಬಂದವರೆಂಬು ದನ್ನು ನಾನು ನನ್ನ ರೂಮಿನ ಕಿಟಕಿಯಿಂದಲೇ ನೋಡುತ್ತಿದ್ದೆನು. ಆಗ ಶಶಿಗೆ ೯—೧೦ ವರ್ಷವಿರಬಹುದು. ಏನೂ ತಿಳಿಯದ ಹಸುಳೆ. ಅವಳ ಅಣ್ಣ, ತಂಗಿ, ತಮ್ಮಂದಿರಿಬ್ಬರು, ಕೈಗೂಸೊಂದು ಹೀಗೆ ದೊಡ್ಡ ಸಂಸಾರ.

ನಮ್ಮ ತಾಯಿಯದು ತುಂಬಾ ಸರಳ ಸ್ವಭಾವ. ಹಳೆಯ ಕಾಲದವ ಳಾದಾಗ್ಯೂ ನಮ್ಮ ಈ ಅಣ್ಣತಮ್ಮಂದಿರಿಂದ ಮಾರ್ಪಟ್ಟಿದ್ದಳು. ಓದುಬರಹ ಬಲ್ಲವಳು. ಪಕ್ಕದ ಮನೆಗೆ ಹೊಸಬರು ಬಂದರೆಂದಮೇಲೆ ಅವರನ್ನು ವಿಚಾರಿಸಿಕೊಂಡು ಬರದಿದ್ದರಾಗುತ್ತದೆಯೇ? ಸಂಜೆ ನಾಲ್ಕು ಗಂಟೆಗೆ ಅವರ ಮನೆಗೆ ಹೋದಳು. ರಾತ್ರಿ ಊಟಕ್ಕೆ ಕುಳಿತುಕೊಳ್ಳುವ ಹೊತ್ತಿಗೆ ಅವರು ನಮ್ಮ ಹಳೆಯ ಸಂಬಂಧಿಗಳಾಗಿದ್ದರು! ನಾನು ಅಮ್ಮನಿಗೆ ಆಗಾಗ್ಗೆ ಈಗಲೂ ಹಾಸ್ಯಮಾಡುತ್ತಿರುತ್ತೇನೆ. "ಅಮ್ಮಾ, ಪಕ್ಕದ ಮನೆಗೆ ಬಂದಿದಾರಲ್ಲ ಅವರು ನಮ್ಮ ಸಂಬಂಧಿಕರಂತೆ, ಹೌದೇನಮ್ಮಾ?" ಎಂದರಾಯಿತು. "ಹೋಗೋ, ನಿನಗೆ ಹಾಸ್ಯ. ನಮ್ಮ ಸೋದರಮಾವನ ಕಡೆಯವರಂತೋ ಅವರು" ಎಂದು ಹೇಗೆ ಹೇಗೋ ಸಂಬಂಧಕಲ್ಪಿಸುವಳು.

ಅಂತೂ, ಆ ರಾತ್ರಿ ಅವರು ನಮ್ಮ ಸಂಬಂಧಿಕರೆಂದು ಸಿದ್ಧಾಂತ ಮಾಡಿದಹಾಗಾಯಿತು. ಅವರು ಎಷ್ಟಿದ್ದರೂ ದೊಡ್ಡ ಪದವಿಯಲ್ಲಿರುವವರು. ಬೆಂಗಳೂರು ಮೈಸೂರುಗಳಲ್ಲಿ ಅವರನ್ನು ಕೇಳುವವರಿಲ್ಲದಿದ್ದರೂ ಈ ಊರಿಗೆ ಅವರೇ ಬಹು ದೊಡ್ಡವರು. ನಮ್ಮ ಮನೆಗೆ ಬರುವುದೆಂದರೇನು? ಈ ರೀತಿಯ ದೊಡ್ಡಸ್ಥಿಕೆರಾಯರ ಪತ್ನಿ ಕಮಲಮ್ಮನವರಿಗೆ ತುಂಬಾ ಎಂದು ಕಾಣುತ್ತೆ. ಅವರು ಇತರ 'ಆಫೀಸರುಗಳ' ಮನೆಗೆ ಹೋಗುತ್ತಿದ್ದರೇ ವಿನಾ ನಮ್ಮ ಮನೆಗೆ ಬರಲಾಗದು. ಬಂದರೂ ಏನೋ ಒಂದು ತರಹ! ರಾತ್ರಿಯಾಗಿದ್ದರಂತೂ ಎಂತಹ ಬೆಳದಿಂಗಳಿದ್ದರೂ ಸರಿಯೆ ಪಕ್ಕದಲ್ಲಿ ಪೆಟ್ರೋಮ್ಯಾಕ್ಸ್ (Petromax) ಹಿಡಿದುಕೊಂಡ ಜವಾನನಿದ್ದೇ ಇರಬೇಕು. ನಾನೂ ಅಮ್ಮನಿಗೆ ಆಗಾಗ್ಯೆ ಹೇಳುತ್ತಲೇ ಇದ್ದೆ. "ಅಮ್ಮಾ, ತಾವು ದೊಡ್ಡವರು ಎಂದು ತಿಳಿದುಕೊಂಡಿರುವವರ ಗೊಡವೆ ನಮಗೇಕೆ? ಕರೆದರೂ ಅವರು ನಮ್ಮ ಮನೆಗೆ ಬರದಿರುವಾಗ ನೀನೇಕಮ್ಮ ಅವರ ಮನೆಗೆ ಹೋಗುತ್ತೀ?" ಎನ್ನುವೆ. ನಾನು ಈಗಿನ ಕಾಲದ ಹುಡುಗ. ದೊಡ್ಡವ ರಾಗಿದ್ದರೆ ಅವರ ಮನೆಯಲ್ಲಿ ಹೊರಗೇಕೆ ಆ ಅಟ್ಟಹಾಸ ಎನ್ನುವ ಹುಡುಗ ನಾನು. ಆದರೆ ನಮ್ಮ ತಾಯಿಯ ಹೃದಯ ಬಲು ಮೃದು. ಅವಳ ಹೃದಯದಲ್ಲಿ ಐಶ್ವರ್ಯವಂತರಿಗೆ ಬೇರೆ ಬಡವರಿಗೆ ಬೇರೆ ಸ್ಥಳವಿರಲಿಲ್ಲ. "ಅವರು ಬರದಿದ್ದರೆ ಬೇಡಾ, ಮಗು. ಅವರು ಕೇಳದಿದ್ದರೂ ನಮ್ಮ ಕೈಲಾದ ಸಹಾಯ ನಾವು ಮಾಡೋಣ" ಎನ್ನುವಳು. "ಎಲ್ಲರೂ ಏಕೆ ನಮ್ಮ ತಾಯಿಯ ಹಾಗೆ ಇರಬಾರದು? ಛೆ! ಐದು ಬೆರಳೂ ಒಂದೇ ಸಮಾನ ಗಿರುತ್ತವೆಯೇ?" ಎಂದುಕೊಳ್ಳುವೆ.

ಆದರೆ ಶಶಿಯಲ್ಲಿ ಆ ಡಾಂಭಿಕತೆಗಳು ಕಾಣುತ್ತಿರಲಿಲ್ಲ. ನನಗೆ ಮೊದ ಲಿಂದಲೂ ಮಕ್ಕಳೆಂದರೆ ಆಶೆ. ಅವರೊಡನಾಡಿ, ನಲಿದಾಡಿ, ಅವರನ್ನೂ ನಗಿಸಿ ನಾನೂ ನಕ್ಕರೆ ನನಗೆ ಅಂದು ಸಂತೋಷ. ಯಾರ ಮಕ್ಕಳಾದರೂ ಅವರನ್ನು ಒಂದೆರಡು ದಿನಗಳಲ್ಲಿ ಗುರ್ತುಮಾಡಿಕೊಳ್ಳುವೆ. ಹೀಗೆಯೇ ಶಶಿಯ ಗುರ್ತು ಅವಳ ತಂಗಿ ತಮ್ಮಂದಿರ ಗುರ್ತೂ ಆದುದು. ಅವರು ನನ್ನ ಬಳಿ ಬಾರದ ದಿನವಿಲ್ಲ. ನಾನು ಅವರಿಗೆ ಕಥೆಹೇಳಿ, ಆಟವಾಡಿ, ನಗಿಸದ ದಿನವಿಲ್ಲ. ಅದರೂ ಶಶಿಯಲ್ಲಿ ನನಗೂ, ನನ್ನಲ್ಲಿ ಶಶಿಗೂ ಏನೋ

ಒಂದು ತರಹೆಯ ಪ್ರೇಮ. ಬೆಳೆಯತೊಡಗಿತು.—ದಿನದಿನಕ್ಕೂ ವೃದ್ಧಿಯಾಗತೊಡಗಿತು. ಇಷ್ಟಾದರೂ ಅವರ ತಾಯಿಯ ಗುರ್ತಾಗಿರಲಿಲ್ಲ. 'ಯಾವನೋ ಒಬ್ಬನು ಹೆಂಗಸರನ್ನು ಕಂಡರೆ ಓಡಿಹೋಗುತ್ತಿದ್ದನಂತೆ!' ನಾನು ಹಾಗೆ ಓಡಿಹೋಗದಿದ್ದರೂ ಯಾರಾದರೂ ಹೊಸಬರು ಮನೆಗೆ ಬಂದರೆ ನನಗೆ ಮನೆಯಲ್ಲಿರಲಾಗುತ್ತಿರಲಿಲ್ಲ; ಅವರು ಮಾತನಾಡಿಸಿದರಂತೂ ಉತ್ತರ ಕೊಡಲು ಮೊದಲೇ ಧೈರ್ಯಸಾಲದು! ಹೀಗಿದ್ದಮೇಲೆ ಅವರ ಗುರ್ತಾದರೂ ಹೇಗೆ ಆಗಬೇಕು?

ನಾನು ಶಶಿಯನ್ನು ಪ್ರೀತಿಸುತ್ತಿದ್ದರೂ ಅವಳನ್ನು ಮದುವೆಯಾಗುವೆನೆಂಬ ಯೋಚನೆ ಮಾಡಿರಲಿಲ್ಲ. ಈ ಯೋಚನೆಮಾಡುವಂತೆ ಮಾಡಿದವಳು ಅವಳೇ—ಆ ಹುಚ್ಚು ಹುಡುಗಿ! ಅದು ಆದದ್ದು ಹೀಗೆ—

ಶಶಿ, ಅವಳ ತಾಯಿ, ಇಬ್ಬರೂ ಅರಿಶಿನ ಕುಂಕುಮಕ್ಕೆಂದು ನಮ್ಮ ಮನೆಗೆ ಬಂದರು. ಅಂದು, ನಮ್ಮಣ್ಣನಮಗಳು—ಮೀರಾನ ಹುಟ್ಟಿದ ದಿವಸ. ದೊಡ್ಡವರ ಮನೆಯವರು ಕೊನೆಗೆ ನಮ್ಮ ಮನೆಗೆ ಬಂದರೆಲ್ಲಾ ಎಂದು ಅಮ್ಮನಿಗೆ ಸಂತೋಷ. ಕೊನೆಗೆ ಅವರು ಹೊರಡುವುದಕ್ಕೆ ಮುಂಚೆ ಅಮ್ಮ ಶಶೀನ ಕುರಿತು, "ಶಶಿ ನಿನಗ್ಯಾವಾಗ ಮದುವೆ?" ಎಂದು ಹಾಸ್ಯಕ್ಕೆ ಕೇಳಿದರೆ ಈ ಹುಚ್ಚುಹುಡುಗಿ "ನಿಮ್ಮ ರಘು ನನ್ನ ಎಂದು ಮದುವೆಯಾದರೆ ಅಂದು" ಎನ್ನುವುದೇ! "ನಿನ್ನಂಥ ರತ್ನ ಸೊಸೆಯಾಗಬೇಕಾದರೆ ನಾನು ಪುಣ್ಯಪಡೆದಿರಬೇಕು" ಎಂದಳು ಅಮ್ಮ. ಅಂತೂ ಅಂದಿನಿಂದ 'ಅವಳನ್ನೇಕೆ ಮದುವೆಯಾಗಬಾರದು?' ಎಂದು ಯೋಚಿಸುವೆ. ಆದರೆ ಬಡವರಾದ ನಾವೆಲ್ಲಿ—ಶಿರಿತನದಿಂದ ಮೆರೆಯುವ ಅವರೆಲ್ಲಿ? ಹೀಗೆಂದುಕೊಂಡು ಆಶೆ ಬಿಡುವೆ. ಆದರೆ ನೆಟ್ಟ ಈ ಯೋಚನೆ ಬೇರೂರಿತು. ಈ ಯೋಚನೆ ಯಾರೆದುರಿಗೆ ಹೇಳಲಿ? ಅಮ್ಮನೆದುರಿಗೆ ಹೇಳಿ ನಗೆಗೀಡಾಗಲೇ? ಅಷ್ಟರಲ್ಲಿ ಇನ್ನೊಂದು ಸಂಗತಿ ಜರುಗಿತು.

ಹತ್ತಿರದ ಊರಿನಲ್ಲೇ ರಥೋತ್ಸವ. ಕಮಲಮ್ಮನವರಿಗೋ ಹೋಗಬೇಕೆಂದಾಶೆ. ಇನ್ನು ಹುಡುಗರನ್ನು ಕೇಳಬೇಕೆ? ಸಂತೋಷದಿಂದ ಮನೆಯಲ್ಲೆಲ್ಲಾ ಕುಣಿದಾಡತೊಡಗಿದರು. ಶಶಿ ಬಂದು ನಾನೂ ಬರುವಂತೆ ಬಲ

ವಂತ ಪಡಿಸಿದಳು. ಆದರೆ, ನಾನು ಬರುವುದಿಲ್ಲವೆಂದೂ, ಬಂದರೂ ಸಂಜೆಗೆ ಸೈಕಲ್‌ಮೇಲೆ ಬರುವೆನೆಂದೂ ಹೇಳಿಕಳುಹಿಸಿದೆ. ಅವರ ಮನೆಯವರೆಲ್ಲಾ ಹೊರಡಲು ಸಿದ್ಧರಾದರು. ಆದರೆ ಕಮಲಮ್ಮನವರ ದುರ್ದೈವದಿಂದಲೋ ಏನೋ ಅಂದೇ ದಿವಾನರು ಅಲ್ಲಿಗೆ ಬರಬೇಕೇ ? "ಆಳುಗಳ್ಯಾರನ್ನೂ ಕಳುಹಿಸಲಾಗುವುದಿಲ್ಲ"ವೆಂದರು ರಾಯರು. ಆದರೆ ಹೊರಟ ಕಮಲಮ್ಮನವರು ಹಾಗೆ ಹೀಗೆ ನಿಲ್ಲುವವರಲ್ಲ. ಹೊರಡಲೇಬೇಕು. ಇಲ್ಲದಿದ್ದರೆ ಅವರಿಗೆ ಅಪಮಾನವಾದಹಾಗೆ. ಏನುಮಾಡಬೇಕೆಂದು ಯೋಚಿಸತೊಡಗಿದರು.

"ಹೊರಡೊದ್ಯಾವಾಗಮ್ಮ? " ಎಂದು ಮಕ್ಕಳು ಕೇಳಿದರು. ಕಮಲಮ್ಮನವರಿಗೆ ಸಿಟ್ಟುಬಂತು. ಯಾರೋ ನಿಮ್ಮನ್ನು ಕರೆದುಕೊಂಡು ಹೋಗೋದು ?

" ಚೋರ " ಎಂದರು ಹುಡುಗರು.

" ಅವರ್‍ಯಾರೂ ಬರೋಹಾಗಿಲ್ಲ"—ಹುಡುಗರ ಮುಖ ಪೆಚ್ಚಾಯಿತು.

" ರಘು ಬರ್‍ತ್ತಾನೇನು ಕೇಳಲೇನಮ್ಮ ? " ಎಂದಳು ಶಶಿ.

' ಯಾರನ್ನು ಕರೆದುಕೊಂಡು ಹೋಗುವುದು ? " ಎಂದು ಯೋಚಿಸುತ್ತಿದ್ದ ಕಮಲಮ್ಮನವರಿಗೆ ಶಶಿಯಿಂದ ಒಳ್ಳೇ ಅನುಕೂಲವಾಯಿತು. ಹುಡುಗರನ್ನು ಅಮ್ಮನಹತ್ತಿರ ಕಳುಹಿಸಿದರು. ಸರಿ, ನಾನೂ ಅವರೊಂದಿಗೆ ಹೊರಟೆ.

ಕಮಲಮ್ಮನವರು ಬುದ್ಧಿವಂತರು. ದಾರಿಯಲ್ಲಿ ನನ್ನೊಡನೆ ಮಾತಿಗೆ ಪ್ರಾರಂಭಿಸಿದರು.

" ಏನು ರಘು, ನಮ್ಮ ಗುರ್ತಿದೆಯೇನಪ್ಪ ? "........

" ಗುರ್ತಿಲ್ಲದೇ ಉಂಟೆ " ಎಂದು ನಕ್ಕೆ.

" ನಾವೂ ನಿಮ್ಮ ಬಳಗಾನೇಕಣೋ........ಹಿಂದೊಂದುಸಲ ಬಂದಿದ್ದಾಗ ನಿಮ್ಮ ಮನೇಲೇ ಇಳಿದುಕೊಂಡಿದ್ದೆವು. ಆಗ ನೀನಿನ್ನೂ ಕೈಗೂಸು. ನಿನಗೇನು ಗೊತ್ತು ಪಾಪ....ಈವಾಗ ನೀನೇನು ಓದ್ತಿದ್ದೀಯಾ ? "

" ಈಸಲ ಸೀನಿಯರ್ ಇಂಟರ್ ಪರೀಕ್ಷೆಗೆ ಕಟ್ಟಿದೇನೆ. "

" ಮುಂದೇನು ಮಾಡಬೇಕೊಂತ ಇದ್ದೀಯಾ ? "

" ಡಾಕ್ಟರ್ ಪರೀಕ್ಷೆಗೆ ಹೋಗೋಣ ಎಂದು ಅಂದುಕೊಂಡಿದೇನೆ "

" ಈಗ ಎಷ್ಟು ವರ್ಷಾನೋ, ನಿನಗೆ ? "

" ೧೮ ಆಯ್ತು "

" ನಿಮ್ಮಮ್ಮ ನಿನಗೆ ಮದುವೆ ಎಂದು ಮಾಡ್ತಾರಂತೋ ? " ಎಂದರು.

ಇದು ಕೇಳಿದ ತಕ್ಷಣವೇ ಯಾಕೋ ಶಶೀಕಡೆ ನೋಡಿದೆ. ಅವಳೂ ನನ್ನ ಕಡೆಯೇ ನೋಡುತ್ತಿದ್ದಳು. ಶಶಿ ಹೇಳಿದ ಹಾಗೆ " ನೀವೂ, ಶಶೀ ಎಂದೊಪ್ಪುತ್ತೀರೋ ಅಂದು " ಎಂದುಬಿಡಲೆ ಎನ್ನಿಸಿತು. ಆದರೂ,

" ನನಗ್ಯಾಕೆ ಇಷ್ಟುಬೇಗ ಮದುವೆ ?........ಮದುವೇನೇ ಬೇಡ ಅಂತ ........"

" ಎಲ್ಲರೂ ಹೀಗೆನ್ನೋರೆ, ಇಷ್ಟು ದಿವಸದಿಂದ ಕಾದಿದಾರೆ ನಿಮ್ಮ ಸೋದರತ್ತೇ ? "

" ಇಲ್ಲಾಮ್ಮಾ ; ಆ ಹುಡುಗೀನ ಮದುವೆ ಆಗೋದಿಲ್ಲ. ಚಿಕ್ಕಂದಿನಿಂದಲೂ ನಾನು ಎತ್ತಿ ಆಡಿಸಿದ ಅವಳು ನನ್ನ ತಂಗಿ. ಆದರೆ ನಾನು ಮನಸ್ಸಿನಲ್ಲಿ ಮಾಡಿಕೊಂಡಿರುವವಳನ್ನೇ ಮದುವೆ ಆಗಬೇಕು. ಇಲ್ಲದಿದ್ದರೆ ಇಲ್ಲ....ಮುಕ್ಕಾಲು ಮೂರುವೀಸಪಾಲು—ಇಲ್ಲ. "

' ಏನು ರಘು ಹಾಂಗೆದ್ರೆ. ಈಗಿನ ಕಾಲದ ಹುಡುಗರ ಮಾತೇ ತಿಳಿಯೋಲ್ಲ. "

" ನಾನು ಮಾತನಾಡುತ್ತಿರುವ ಹುಡುಗಿ ದೊಡ್ಡವರ ನುನೆಯವಳು. ನಮ್ಮ ಮನೆಗಾದರೂ ಹೇಗೆ ಕೊಟ್ಟಾರು ? "

ನಾನು ಮಾತನಾಡುತ್ತಿದ್ದುದು ಯಾರ ವಿಚಾರವಾಗಿ ಎನ್ನುವುದು ಅವರಿಗೆ ತಿಳಿಯದಿರಲಿಲ್ಲ.

" ಹೀಗೆಲ್ಲಾ ಹೇಳಬಾರದಪ್ಪ. ನಿಮ್ಮ ತಾಯಿತಂದೆ ಹೇಳಿದಹಾಗೆ ಕೇಳಬೇಕು " ಎಂದರು.

"ಎಲ್ಲಾ ವಿಚಾರದಲ್ಲೂ ತಾಯಿ ತಂದೆ ಹೇಳಿದಹಾಗೆ ಕೇಳೋದು. ಆದರೆ, ಮದುವೆ ವಿಚಾರದಲ್ಲಿ ಹುಡುಗ ಹುಡುಗಿಯರ ಒಪ್ಪಿಗೆ ಇರಬೇಕಲ್ವೆ?" ಎಂದೆ.

"ಏನೋಪ್ಪ........ಕಾಲಾನೇ ಬದಲಾಯಿಸಿದೆ ಈಗ" ಎಂದರು.

ಈ ರೀತಿಯ ಹರಟೆಗಳಲ್ಲಿ ರಥೋತ್ಸವವನ್ನು ಪೂರೈಸಿಕೊಂಡು ಹಿಂತಿರುಗಿದೆವು, ಕಾಲವು ಒಂದೇ ಸಮನಾಗಿರುವುದೇ? ಬಹುಶಃ ಈ ವಿಚಾರ ಅವರು ಮರೆತರೂ ನಾನು ಮರೆಯಲಾಗುವುದಿಲ್ಲ.

‡ ‡ ‡

ನಮ್ಮೂರಿನಲ್ಲಿ ಅವರಿದ್ದುದು ಎರಡೇ ವರ್ಷ. ಅವರಿಗೆ ಹಾಸನಕ್ಕೋ ಎಲ್ಲಿಗೋ ವರ್ಗವಾಯಿತು. ನಾನೂ ಓದಲು ಬೆಂಗಳೂರಿಗೆ ಬಂದೆ, ಹಾಸ್ಟಲಿನಲ್ಲಿರಲು ದುಡ್ಡಿನ ಯೋಗ್ಯತೆ ಇಲ್ಲ. ಆದುದರಿಂದ ಮಲ್ಲೇಶ್ವರದಲ್ಲಿ 'ರೂಂ' ಮಾಡಿಕೊಂಡು, ಹೋಟಲಿನಲ್ಲಿ ಊಟಮಾಡಿಕೊಂಡಿದ್ದೆ. ಹೀಗೆ ಮತ್ತೆರಡು ವರ್ಷಗಳು ಕಳೆವ ವೇಳೆಗೆ ಶಶಿಯ ತಂದೆಗೆ ಇಲ್ಲಿಗೇ ವರ್ಗವಾಯಿತು. ಅವರಾದರೂ ನಾನು ಇದ್ದ ರೂಮಿನಪಕ್ಕದ ಮನೆಗೇ ಬರಬೇಕೆ!

ಶಶಿಯಲ್ಲಿ ಮೊದಲಿನ ಹುಡುಗಾಟಿಕೆ ಇಲ್ಲ; ಮೊದಲಿನಂತೆ ನನ್ನನ್ನು ಕಂಡರೆ ಓಡಿಬರಳು. ಈಚೆಗೆ ಅವಳಿಗೆ ಎಲ್ಲಿಲ್ಲದ ನಾಚಿಕೆ ಬಂದಿದೆ. ಕಮಲಮ್ಮನವರಿಗೆ ನಾನಿಲ್ಲಿರುವುದು ತಿಳಿಯಿತು; ಇಲ್ಲಿ ಅವರ ದರ್ಬಾರು ಯಾರು ಕೇಳಬೇಕು? ಆದುದರಿಂದ ಹಬ್ಬ ಹುಣ್ಣಿಮೆಗಳಿಗೆಲ್ಲಾ ನನಗೆ ಔತಣ. ಒಂದು ದಿವಸ ಹೀಗೆ ಅವರ ಮನೆಗೆ ಹೋಗಿದ್ದೆ.

"ರಘು, ನಮ್ಮ ಶಶೀ ಮದುವೆ ಇನ್ನೊಂದು ತಿಂಗಳಿಗೆ ಎಂದು ಗೊತ್ತಾಗಿದೆ. ನೀನು ನಮ್ಮ ಮನೆಯವನೇ ಎಂದು ತಿಳಿದುಕೊಂಡು ಬರ್‍ತಿರಬೇಕಪ್ಪಾ" ಎಂದರು. ಹಠಾತ್ತಾಗಿ ಸಿಡಿಲುಬಿದ್ದರೂ ಇಷ್ಟು ಬೆದರುತ್ತಿರಲಿಲ್ಲ! ಅವರು ಹೇಳಿದುದು ಕೇಳಿ ನನಗೆ ತುಂಬಾ ದುಃಖವಾಯಿತು, ಮಾತನಾಡಲಾರದಾದೆ.

"...........ವರ........ಯಾರು?" ಎಂದೆ.

" ಬಸವನಗುಡಿಯಲ್ಲಿದ್ದ ರಲ್ಲಪ್ಪ ರೆವೆನ್ಯೂ ಸೆಕ್ರೆಟರಿ ಶ್ರೀನಿವಾಸರಾಯರ ಮಗ ಲಕ್ಷ್ಮಣರಾವ್. ಅವರೂ ಪುಣ್ಯವಂತರು, ಪಾಪ ಆ ಹುಡುಗನೂ ಡಾಕ್ಟರ್ ಪರೀಕ್ಷೆಗೋ ಏನೋ ಓದ್ತಿದಾನಂತೆ " ಎಂದರು.

" ಓಹೋ ತಿಳೀತು ನೀವು ಹೇಳ್ತಾ ಇರೋದು ನಮ್ಮ ಕ್ಲಾಸಿನಲ್ಲಿರೋ ಲಚ್ಚೀನ ! " ಎಂದು ಹೇಳಿ, ಇತರ ಮಾತುಕಥೆಗಳಾಡಿ ಹಿಂತಿರುಗಿದೆ. ಲಚ್ಚೀ ! ಲಚ್ಚಿ !! ಲಚ್ಚೀ, ಎಂದರೆ ಅವನೊಬ್ಬ ಷೋಕಿಲಾಲ್. ಎದೆ ಸೀಳಿದರೂ ಮೂರಕ್ಷರವಿಲ್ಲ. ಆದರೇನು ಈಗಿನ ಕಾಲದಲ್ಲಿ ' ದುಡ್ಡಿದ್ದವನೇ ದೊಡ್ಡಪ್ಪ 'ನಷ್ಟೆ ? ಲಚ್ಚೀ ಅವರಪ್ಪನಿಗೆ ಒಬ್ಬನೇ ಮಗ. ಅವರ ತಂದೆ ಪುಣ್ಯವಂತರು, ಬಲು ಒಳ್ಳೆಯವರು ತನ್ನಂತೆಯೇ ಇತರರೆಂದು ತಿಳಿದವರು. ಆದರೆ ಲಚ್ಚಿ ಹಾಳಾದುದು ಅವರಿಗೇನು ಗೊತ್ತು ? ಅವನು ಹಾಳಾಗಿ ಹೋಗಿರುವನೆಂದು ನಾನಾದರೂ ಹೇಗೆ ಹೇಳಲಿ ? ಅಯ್ಯೊ ಶಶಿ ! ನನ್ನಗತಿ ಹಾಗಿರಲಿ ಅವನ ಹೆಂಡತಿಯಾದ ಮೇಲೆ ನಿನ್ನ ಪಾಡು ? ಅಂತಹ ಐಶ್ವರ್ಯ ವಂತರ ಐಶ್ವರ್ಯವೂ ಬೇಡ ಸಂಬಂಧವೂ ಬೇಡ.

ಈಗ ಶಶಿಯನ್ನು ಲಚ್ಚೀ ಮದುವೆ ಮಾಡಿಕೊಳ್ಳದ ಹಾಗೆ ಮಾಡ ಬೇಕಾದುದು ನನ್ನ ಕರ್ತವ್ಯವೇ ? ಏನು ಮಾಡಲಿ ? ಲಚ್ಚೀಗೆ ಹೆದರಿಸಲೆ ಅಥವಾ ಕಮಲಮ್ಮನವರಿಗೆ ಹೇಳಲಿ ? ಕಮಲಮ್ಮನವರು ನಂಬಿದರಂತೂ ಸರಿ. ಹಾಗಿಲ್ಲದೆ ಸ್ವಾರ್ಥಪರಾಯಣತೆಯೆಂದು ತಿಳಿದರೆ ? ಅಥವಾ ಶಶಿಗೇ ಹೇಳಲೋ ? ಪಾಪ—ಅವಳಿಗೆ ಗೊತ್ತಾದರೂ ಏನು ಮಾಡಿಯಾಳು ? ಕಮಲಮ್ಮನವರೆದುರಿಗೆ ಅವಳ ಮಾತೆ ?

ಮದುವೆಯ ದಿನವೂ ಸಮೀಪಿಸತೊಡಗಿತು. ನಾನು ಒಂದು ದಿನ ಅವರ ಮನೆಗೆ ಹೋದೆ. ಶಶಿ ಅಲ್ಲೇ ನಿಂತಿದ್ದಳು. ಅವಳತಾಯಿ ಒಳಗಿದ್ದ ರೆಂದು ತೋರುತ್ತೆ.

" ಮದುವೆಯಾದಮೇಲೆ ನಮ್ಮನ್ನ ಮರೀಬೇಡಮ್ಮ " ಎಂದೆ.

" ನಿಮ್ಮನ್ನ ಮರೆಯುವುದಕ್ಕಾಗುತ್ತದೆಯೇ. ನೀವು ಮರೆತರೂ ಚಿಕ್ಕಂದಿ ನಲ್ಲಿ ಹೇಳಿದ್ದನ್ನ ನಾನು ಮರೆತಿಲ್ಲ. ಏನೋ ನೀವೇ............"

" ಶಶೀ " ಎಂದು ಅವರಮ್ಮ ಕೂಗಿದರು. ಹೊರಟುಹೋದಳು.

ಹಾಗಾದರೆ ಶಶಿ ನನ್ನ ಮರೆತಿಲ್ಲ! ಏನಾದರೇನು ಕಮಲಮ್ಮನವರೆದುರಿಗೆ ನಾನಾರು? ಈ ಸಮಯದಲ್ಲಿ ಆ ದೇವರೆಲ್ಲಿ? ನಮ್ಮ ಸಹಾಯಕ್ಕೇಕೆ ಬರಬಾರದು? ಕಮಲಮ್ಮನವರು ಬಂದರು.

"ರಘು, ನಾಳೆಯಿಲ್ಲ ನಾಡಿದ್ದೇ ಎದುರುಗೊಳ್ಳೋದು. ನೀನು ನಮ್ಮ ಮನೆಗೇ ಬಂದುಬಿಡು. ಮೇಲಿನ ಉಸ್ತುವಾರವೆಲ್ಲಾ ನಿನ್ನದೇನಪ್ಪಾ, ನಿಮ್ಮಮ್ಮ ಬಂದು ಹೋಗೋ ಹಾಗೆ ಕಾಗದಾನೂ ಹಾಕ್ಸಿದೇನೆ, ಲಗ್ನಪತ್ರಿಕೇನೂ ಕಳಿಸಿದ್ದೇನೆ."

"ಆಗಲಮ್ಮ ಬರ್ತೀನೆ"

ದೊಡ್ಡವರ ಮನೆಯ ಮದುವೆಯಲ್ಲಿ ನನ್ನಿಂದ ಕೆಲಸವೇನು? ನೋಡಿಕೊಳ್ಳಲು ಆಳುಕಾಳುಗಳಿದ್ದೇ ಇದ್ದಾರೆ. ಮೇಲಾಗಿ ನಾನು ಆಶೆಪಟ್ಟು ಮದುವೆಯಾಗಬೇಕೆಂದಿದ್ದ ಹುಡುಗಿಯು ಬೇರೊಬ್ಬರ ಕೈಸೇರುವುದನ್ನಾದರೂ ಹೇಗೆ ನೋಡಲಿ? ಅವರ ಮನೆಯಲ್ಲಿ ಗುರುತೆಂದರೆ ಕಮಲಮ್ಮನವರೊಬ್ಬರು. ಅವರೂ ತಮ್ಮ ಸಡಗರದಲ್ಲಿ, ನನ್ನನ್ನು ಮರತೇ ಮರೆಯುವರು. ಅಲ್ಲಿ ನಾನು ಮಾತನಾಡಿಸುವುದನ್ನಾದರೂ ಯಾರನ್ನು? ಹೀಗೆ ಆಲೋಚಿಸಿ ಮದುವೆಗೆ ಹೋಗುವುದಿಲ್ಲವೆಂದು ನಿಶ್ಚಯಿಸಿಕೊಂಡೆ.

ಊಟ ಬೇಡವೆನ್ನಿಸಿತು. ಮಾರನೆಯ ದಿವಸವೂ ಊಟ ಬೇಡವಾಯಿತು, ಎದ್ದರೆ ಕೂತರೆ ನನ್ನೆದುರಿಗೆ ಶಶಿಯ ಮೂರ್ತಿ. ನನ್ನನ್ನೇ ನೋಡುತ್ತಿದ್ದಾಳೆಯೇ? "ಏನೋ ನೀವೇ............" ಎಂದು ಏನನ್ನೋ ಹೇಳಬೇಕೆಂದಿದ್ದಾಳೆಯೋ? ಹೇಳು ಶಶಿ ಹೇಳು ಅದೇನು ಹೇಳು.

ನೀವು ಇದನ್ನು ಓದಿ ನಗುವಿರಾ? ನನ್ನನ್ನು ಹುಚ್ಚನೆನ್ನುವಿರಾ? ಜೋಕೆ! ನಗಬೇಡಿ. ನನ್ನ ಸ್ಥಿತಿಯಲ್ಲಿ ನೀವಿದ್ದಿದ್ದರೆ ನೀವೂ ನನ್ನ ಹಾಗೆಯೇ ಹುಚ್ಚರಾಗುತ್ತಿದ್ದಿರಿ ಗೊತ್ತು.

ಇಂದು ಎದುರುಗೊಳ್ಳುವ ದಿವಸ. ಇನ್ನು ನನಗೆ ಶಶಿಯ ಯೋಚನೆ ಏಕೆ? ಬರಿಯ ಶಶಿಯ ವಿಚಾರವೇನು ಮದುವೆಯ ವಿಚಾರವೆ ಬೇಡ ನನ್ನ ಬಳಿಯ ಒಂದು ಕಪ್ಪು ಅವಳಿಗೆ ಬೇಕೆಂದಿದ್ದಳು. ಅವಳು ಹಸೆಯ

ಮೇಲೆ ಕುಳಿತಾಗ ಒಂದಲ್ಲದ ಹಾಗೆ ನಾಲ್ಕನ್ನು ಕೊಟ್ಟು ಬಂದುಬಿಡಬೇಕು. ಅದೇ ಅವಳನ್ನು ಕೊನೆಯಸಲ ಜ್ಞಾಪಿಸಿಕೊಳ್ಳುವುದು. ಆಮೇಲೆ ಅವಳನ್ನು ಮರೆತುಬಿಡಬೇಕೆಂದು ದೃಢಸಂಕಲ್ಪ ಮಾಡಿಕೊಂಡೆ. ನನ್ನ ಕಪ್ಪುಗಳನ್ನೆಲ್ಲಾ ಹೊರಗೆ ತೆಗೆದು ಇದ್ದುದರಲ್ಲಿ ಸೊಗಸಾದ ನಾಲ್ಕನ್ನು ಆರಿಸಿದೆ. ಅದರಮೇಲೆ ಅವಳ ಹೆಸರು ಕೆತ್ತಿಸೋಣವೆಂದುಕೊಂಡೆ. ಆದರೆ ಮೈಯಲ್ಲಿ ಏನೋ ಒಂದು ತರಹೆಯ ಆಲಸ್ಯ. ಹಾಗೆಯೇ ಹಾಸಿಗೆಯಮೇಲೆ ಮಲಗಿದೆ. ರೂಂ ಎಲ್ಲಾ ರಂಪೋ ರಂಪು. ಒಂದು ಕಡೆ ಪುಸ್ತಕಗಳ ರಾಶಿ, ಮತ್ತೊಂದು ಕಡೆ ಬಟ್ಟೆ ಬರೆಗಳ ರಾಶಿ. ನನ್ನನ್ನು ಯಾರಾದರೂ ಆ ರೂಪಿನಲ್ಲಿ ನೋಡಿದ್ದರೆ ಹೆದರುತ್ತಿದ್ದರೋ ಏನೋ!

ಸಾಯಂಕಾಲ ಆರು ಘಂಟೆಯಾಯಿತು; ಏಳಾಯಿತು. ವಾದ್ಯಗಳು ಭೋರ್ಗರೆಯುತ್ತಿವೆ, ನಿಮಿಷನಿಮಿಷಕ್ಕೂ ಕಾರುಗಳೂ, ಗಾಡಿಗಳೂ ಜನಗಳನ್ನು ತಂದು ಬಿಟ್ಟು ಹೋಗುತ್ತಿವೆ. ಶಶೀ, ಇನ್ನು ನೀನು ನನ್ನವಳಲ್ಲ. ಅಷ್ಟು ಉಪಚರಿಸುತ್ತಿದ್ದ, ನಿನ್ನದೇ ಎಲ್ಲಾ ಮೇಲ್ವಿಚಾರಣೆಯೆಂದು ಹೇಳಿದ ಕಮಲಮ್ಮನವರಿಗೆ ಈಗ ನನ್ನ ಜ್ಞಾಪಕ ಬರಬಹುದೇ?

'ಏಳಿ, ಏಳಿ, ಎಂಟೂವರೆ. ನಾವಿನ್ನು ಹೊರಡೋಣ ಹೊತ್ತಾಯಿತು' ಎಂದು ಕೂಗಿದ ಧ್ವನಿ ಕೇಳಿಸುತ್ತಿದೆ. ಅಯ್ಯೋ! ಹದ್ದಿನಕೈಗೆ ಅರಗಿಣಿ ಕೊಟ್ಟಹಾಗೆ-ಆ ಪೋಲಿಗೆ-ಆ ಮುಠ್ಠಾಳನಿಗೆ-ಆ ಲಚ್ಚೇಗೆ-ಈ ಮುದ್ದುಶಶೀನೆ? ದೇವರೆ, ನ್ಯಾಯಮೂರ್ತಿಯೆಂದೂ, ಸರ್ವಜ್ಞನೆಂದೂ ಹೆಸರು ಪಡೆದ ನಿನ್ನೆದುರಿಗೂ ಇಂಥಾ ಅನ್ಯಾಯವೇ?

ಹೆಣ್ಣಿನ ಮನೆಯವರೆಲ್ಲಾ ಹೊರಟರು. ಕಮಲಮ್ಮನವರ ಧ್ವನಿ ಕೇಳಿಸುತ್ತಾ ಇದೆ.

ನನಗೆ ಸ್ವಲ್ಪ ಜೊಂಪು ಹತ್ತಿರಬೇಕು. ಎಲೆಕ್ಟ್ರಿಕ್ ದೀಪ ಹಾಗೆಯೇ ಉರಿಯುತ್ತಿದೆ. ಗಡಿಯಾರದ ಕಡೆಗೆ ನೋಡಿದೆ-೧೦ ಘಂಟೆ. ದೀಪ ಆರಿಸಿ ಮಲಗಬೇಕೆಂದುಕೊಂಡೆ ಅಷ್ಟೆ. ಶಶಿಯ ಯೋಚನೆಬಿಟ್ಟು ಊಟಮಾಡೋಣವೆಂದರೆ ಊಟ ಸೇರದು. ಹಾಗೆಯೇ ಯೋಚನೆ ಮಾಡುತ್ತಾ ಮಲಗಿದೆ. ೧೨॥ ಯಾಯಿತು. ಯಾರೋ ಬಾಗಿಲನ್ನು ತಟ್ಟಿದ ಹಾಗಾಯಿತು.

" ಯಾರದು ? " ಎಂದೆ. ಉತ್ತರವಿಲ್ಲ. ಆದರೆ ಬಾಗಿಲು ತಟ್ಟುತ್ತಿದ್ದಾರೆ " ಯಾರದು ? " ಎಂದು ಕೇಳುತ್ತಾ ಬಾಗಿಲು ತೆಗೆದೆ.

ಯಾರದು ? ಕಮಲಮ್ಮನವರೇ ಅಳುತ್ತಾ ಒಳಗೆ ಬಂದರು ! ಏನಿದು ಅರ್ಥವಾಗಲಿಲ್ಲ ! ನಿಜ ! ಕಮಲಮ್ಮನವರೇ ! ಎದುರುಗೊಳ್ಳುವುದಕ್ಕೆಂದು ಹೊರಡಲು ಸಿದ್ಧವಾದವರು ಹಾಗೆಯೇ ಇದ್ದಾರೆ !!–ಆದರೆ ಇದೇನು ಅಳು ?

" ಏನಮ್ಮ ಇದು ? ಯಾಕೆ ಅಳುತ್ತಾ ಇದ್ದೀರಿ ? " ಎಂದೆ.

ಬಕ್ಕಿ ಬಿಕ್ಕಿ ಅಳುತ್ತಿದ್ದಾರೆ.

" ರ............ಘು............"

" ಏನಮ್ಮ ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ನೀವು ಹಿರಿಯರೇ ಹೀಗೆ ಅತ್ತರೆ ನನ್ನ ಕೈಲೇನಾದೀತು ? ಏನು ಸಮಾಚಾರ ? ಎಂದು ಕೇಳಿದೆ.

" ರಘು, ನೀನೇ ಗತಿಯಪ್ಪ ನೀನು ಸಹಾಯ ಮಾಡ್ತೀನೆ ಎಂದು ಹೇಳಿದರೆ ಹೇಳ್ತೀನೆ. "

" ನನ್ನ ಕೈಲಾದ ಸಹಾಯಾನೆಲ್ಲಾ ಮಾಡ್ತೀನೆ, ಹೇಳಿ. "

" ನಿಜವಾಗಲೂ ಸಹಾಯ ಮಾಡ್ತೀಯಪ್ಪ. ನೀನೇ ಬಂದು ಈಗ ನಮ್ಮ ಮಾನ ಮರ್ಯಾದೆ-ಶಶಿ ಮರ್ಯಾದೆ ಎಲ್ಲಾ ಉಳಿಸಬೇಕು, ಉಳುಸ್ತಿಯಾಪ್ಪ. "

ಅದೇನು ಹೇಳಿ. ಇಂದಿನಿಂದ ನನ್ನ ಜನ್ಮಾನ್ನೇ ಸೇವಾಕಾರ್ಯದಲ್ಲಿ ಮೀಸಲಾಗಿಟ್ಟಿದ್ದೇನೆ. ನಿಮಗೋಸ್ಕರ, ಶಶಿಗೋಸ್ಕರ ನನ್ನ ಕೈಲಾದ್ದೆಲ್ಲಾ ಮಾಡ್ತೀನೆ' ಹೇಳಿ. "

" ನೀನೇ ನಮ್ಮ ದೇವರು, ರಘು. ಈಗ, ಈ ಎದುರುಗೊಳ್ಳೋ ಹೊತ್ತಿನಲ್ಲಿ ಲಚ್ಚಿ ಎಲ್ಲೋ ಓಡಿಹೋಗಿ ಬಿಟ್ಟಿದಾನಪ್ಪ, ಲಗ್ನಪತ್ರಿಕೆ ಎಲ್ಲಾ ಕಳಿಸಿ ಆಗಿ ಹೋಯಿತು. ಇಷ್ಟೊಂದು ಜನ ಬಂದಿದಾರೆ, ಶಶೀ ಮದುವೆ ಹೀಗೆ ನಿಂತುಹೋದರೆ ನಾನು ಇರೋದಕ್ಕಿಂತ ಸಾಯೋದೇ ಲೇಸು. ಲಗ್ನ ಪತ್ರಿಕೇನೂ ಕೊಟ್ಟು ಕಳಿಸಿ ಲಗ್ನ ಆಗಲಿಲ್ಲ ಎಂದ್ರೆ ಏನಪ್ಪ ಮಾನ. ರಘು ನೀನೆ ಈಗ ಬಂದು ನಮ್ಮ ಮಾನ ಕಾಯಬೇಕಪ್ಪ. ನೀನೇ ಬಂದು ಶಶೀನ ಮದುವೆಯಾಗಬೇಕು ! " ಎಂದರು.

ಏನಿದು ? ಕನಸೋ ನಿಶ್ಚಯವೂ ಏನು ? ನಾನು-ಶಶೀನ ಮದುವೆ ಯಾಗಬೇಕೆ ! ಅವರಲ್ಲೂ ಈರೀತಿ ಕಮಲಮ್ಮನವರು ಹೇಳೋದೆ !

ಆದರೆ ಅಪ್ಪನ್ನ ಅಮ್ಮನ್ನ ಕೇಳದೆ, ಮದುವೆಯ ಸಮಾಚಾರವೇ ಇಲ್ಲದ ನಾನು ಮದುವೆಗೆ ಹೊರಡೋದೆ ? ಇದೇ ವಿಚಾರಾನೇ ಅವರಿಗೂ ಹೇಳಿದೆ.

" ನೀನು ಹೇಳೋದು ನಿಜ, ರಘು. ಆದರೆ ನಮ್ಮ ಮಾನ ಮರ್ಯಾದೆ ಎಲ್ಲಾ ನಿನ್ನ ಕೈಲಿದೆ ನೋಡು. ನೀನು ' ಹೂ ' ಎನ್ನು, ಎದುರುಗೊಳ್ಳೋ ದಕ್ಕೆ ಏಳು. ನಾನು ಈ ಕ್ಷಣವೇ ಮೋಟಾರುಕೊಟ್ಟು ಕಳಿಸಿ ಬೆಳಗಾಗುವ ವೇಳೆಗೆ ನಿಮ್ಮ ತಂದೆತಾಯಿಗಳನ ಕರಿಸ್ತೇನೆ ಅಷ್ಟು............

" ಅದು ಸರಿಯಮ್ಮ ಆದರೆ ಹಾಲು ಸಕ್ಕರೆಯಲ್ಲಿ ಬೆಳೆದ ಶಶಿ ನಮ್ಮಂಥ ಬಡವರ ಮನೇಲಿ ಏನೂ ಅಂತಾ ಸುಖ ಪಟ್ಟಾಳು ? ಎನ್ನೋದೊಂದೇ ಯೋಚನೆ " ಎಂದೆ.

" ರಘು, ಹಾಲೂ ಬೇಡ, ಸಕ್ಕರೇನೂ ಬೇಡ, ದೇವರು ಕೊಟ್ಟ ಸ್ವಲ್ಪದರಲ್ಲೇ ಸರಿಮಾಡಿಕೊಂಡಿರೋದೇ ಸುಖ. ಶಶೀನೂ ನಿನ್ನೇ ಮದುವೆ ಯಾಗೋದು ಎಂದು ಹೇಳಿದಳು. ಅತ್ತಳು. ಆದರೆ ನಾನೇನೋ ಮೊಂಡ ಹಠ ಮಾಡಿಕೊಂಡು, ದೊಡ್ಡವರ ಮನೆ, ಒಬ್ಬನೇ ಹುಡುಗ ಎಂದು ಆಲೋಚಿಸಿದೆ. ಏನಾದ್ರೂ ಆಗಲಿ, ಈಗ ನೀನೇನು ಹೇಳ್ತೀಯಪ್ಪ ? " ಎಂದರು. ಈಗ ನನಗೆ ಬಾಯಲ್ಲಿ ಬಿಸಿ ತುಪ್ಪ ಹಾಕಿಕೊಂಡ ಹಾಗಾಯಿತು. ಉಗಳಲೂಲಾರೆ ನುಂಗಲೂಲಾರೆ ಅಪ್ಪ ಅಮ್ಮನ್ನ ಕೇಳದೆ ಮದುವೆ ಮಾಡಿ ಕೊಳ್ಳಲೇ ? ಅಥವಾ ನಾನೇ ಮದುವೆಯಾಗಬೇಕೆಂದಪೇಕ್ಷೆಪಟ್ಟ ಹುಡುಗಿ ಯನ್ನು ನಿರಾಕರಿಸಲೆ ?

" ' ಹು ' ಅನ್ನು ರಘು, ಏಳು. ಈ ಹೊತ್ತಿನಲ್ಲಿ ನನಗೆ ದಿಕ್ಕೇ ತೋಚದಪ್ಪ. ನೀನು ' ಇಲ್ಲ ' ಅನ್ನು ಹೆಣ್ಣು ಹೆಂಗಸಿನ ಕೈಲಿ ಏನಾಗುತ್ತೊ ಅದು ಮಾಡ್ತೇನೆ " ಎಂದು ಬೇರೆ ಹೆದರಿಸಿದರು.

ಅವರ ದುಃಖವನ್ನು ತಡೆಯಲಾರದಾದೆ.

" ನೀವು ಅಳೋದು ನಿಲ್ಲಿಸಿಯಮ್ಮ. ನಾನು ಮೊದಲೇ ಹೇಳಲಿಲ್ಲವೆ- ನಿಮಗಾಗಿ, ಶಶಿಗಾಗಿ ನನ್ನ ಪ್ರಾಣವನ್ನಾದರೂ ಕೊಡ್ತೇನೆ ಎಂದು, ಹಾಗೆಂದ

ಮೇಲೆ ನೀವು ನಮಗಿಂತ ಎಷ್ಟೇ ಐಶ್ವರ್ಯವಂತರಾಗಿದ್ದರೂ ಚಿಂತೆಯಿಲ್ಲ, ಇಗೋ ಏಳಿ, ಹೊರಟೆ" ಎಂದೆ.

"ರಘು !– ರಘು !– ಏನು ರತ್ನದಂಥಾ ಹುಡುಗನಪ್ಪಾ ನೀನು. ನನ್ನ ಪಾಲಿನ ದೇವರು, ನಿಮ್ಮೂರಿನಲ್ಲಿದ್ದಾಗ ನಿಮ್ಮನ್ನ ಎಷ್ಟು ಅನಾದರಿಸಿದೆನೋ ಅದನ್ನೆಲ್ಲಾ ಮರೆತು ಈಗ ಒಪ್ಪಿಕೊಂಡೆಯ! ಬಾ ರಘು, ಬಾಪ್ಪ" ಎಂದರು.

"ತಾವು ಅದನ್ನೆಲ್ಲಾ ಹೇಳಬೇಡಿ. ಹಿಂದಿನದೆಲ್ಲಾ ಮರೆತುಬಿಡಿ. ನಾನು ನಿಮ್ಮ ಮಗ. ನನಗೂ ಇಷ್ಟು ಉಪಚಾರವೇ ?" ಎಂದೆ.

"ನಡೀಯಪ್ಪ, ಬೂಟಾಟಿಕೆ ಡಬ್ಬಿಗಿಂತ ಬಡತನವೇ ಸುಖ. ಅಂಥಾ ದೊಡ್ಡಮನುಷ್ಯರ ಮನೆಯವರು ಇಂಥಾ ಸಮಯದಲ್ಲಿ ಹೀಗೆ ಮಾಡೋದೆ. ಮನೆಯಲ್ಲಿನ ೨೦೦೦ರೂಪಾಯಿ ಕದ್ದುಕೊಂಡು ಹುಡುಗ ಓಡಿಹೋದರೆ ಪಾಪ ಅವರದೇನು ತಪ್ಪು. ಹಾಗೆ ಹೋದರೆ ನಮಗೆ ಎಷ್ಟು ಅವಮಾನವಾಗುತ್ತೆ ಎನ್ನುವುದೂ ಬೇಡವೇ ?– ಏಳಪ್ಪಾ, ಬಾ ಏಳು, ಬಟ್ಟೆ ಇಲ್ಲ ಎಂದು ಸಂಕೋಚ ಬೇಡ. ಬಟ್ಟೆಬರಿನಲ್ಲೇನಿದೆ. ಮನಸ್ಸೊಂದು ಚೆನ್ನಾಗಿರಬೇಕು ನೋಡು" ಎಂದರು.

ಅಂತೂ ಹೊರಟೆ. ಕನಸು ಮನಸಿನಲ್ಲಿಯೂ ಊಹಿಸದ ಸಂಗತಿ ಜರುಗಿದ ಹಾಗಾಯಿತು. ನಾನೇ ವರನಾದೆ! ತಂದೆ ತಾಯಿಗಳಪ್ಪಣೆಯಿಲ್ಲದೆ, ಬಂಧುಬಳಗದವರಾರೂ ಇಲ್ಲದೆ–ಅಂತೂ ಮದುವೆಗೆ ಸಿದ್ಧನಾದೆ! ನನ್ನಮೊರೆ ದೇವರಿಗೆ ಕೇಳಿಸಿರಲೇಬೇಕು. ಎದಿರುಗೊಂಡುದು ಸಾಂಗವಾಗಿ ನಡೆಯಿತು. ತತ್‌ಕ್ಷಣವೇ ಮೋಟಾರು ಹೊರಟಿತು. ಹೊರಟವರು ನಾನು, ಕಮಲಮ್ಮ. ಅವರ ಪತಿ. ನನ್ನ ತಾಯಿತಂದೆಗಳಿಗೂ ತುಂಬಾ ಆಶ್ಚರ್ಯ. ನಮ್ಮ ತಾಯಿಗೆ ಸಂತೋಷವಾದರೂ ಏನೂ ಮಾಡಿಕೊಳ್ಳದೆ ಬರಿಗೈಲಿ ಬೀಗರಾಗಿ ಹೋಗಬೇಕೆಲ್ಲಾ ಎಂದು ದುಃಖ ಆದರೆ ಕಮಲಮ್ಮನವರು ಈಗ ಸುಮ್ಮ ನಿರುವರೆ ?

"ಅದೆಲ್ಲಾ ಇರಲಿ, ಸೀತಮ್ಮ ಏಳಿ ಹೋಗೋಣ. ನಿಮ್ಮ ಹುಡುಗ ಇವತ್ತು ಅಲ್ಲಿ ಇಲ್ಲದಿದ್ರೆ ನಮ್ಮ ಮಾನವೇ ಹೋಗ್ತಿತ್ತು. ನನ್ನ ಪಾಲಿನ ದೇವರಮ್ಮ" ಎಂದು ಹಾಗೂ ಹೀಗೂ ಸಮಾಧಾನ ಪಡಿಸಿ ಹೊರಡಿಸಿದರು.

ನಮ್ಮ ತಂದೆಗೋ ದೊಡ್ಡವರ ಮನೆ ಹೆಣ್ಣು ತರಲು ಮನಸ್ಸಿರಲಿಲ್ಲ. 'ಬಡವರ ಹೆಣ್ಣು ತರಬೇಕು. ಭಾಗ್ಯವಂತರ ಮನೆಗೆ ಹೆಣ್ಣು ಕೊಡಬೇಕು' ಎಂಬುದು ಅವರ ನಿಯಮ. ಆದರೆ ಈ ಬುದ್ಧಿ ಕಲಿತಹಾಗಾಯಿತು ಭಾಗ್ಯವಂತರಾದ ಕಮಲಮ್ಮನವರೂ ಬಡವರಾಗಬಯಸಿದರು. ಅಂದಿನಿಂದಲೂ ಅವರಿಗೆ ಭಾಗ್ಯವಂತರೆಂದರೆ ವೈರಿ!

ಮದುವೆಯೂ ವಿಜೃಂಭಣೆಯಿಂದಲೇ ಆಯಿತು. ಮೊದಲೇ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದ ನಮಗೆ ಮದುವೆ ಇನ್ನೂ ಹೆಚ್ಚು ವಿಜೃಂಭಣೆಯಿಂದ ಆದಹಾಗೆ ತೋರಿತು. ನಾಲ್ಕು ಕಪ್ಪಿನ ಬದಲು ಎಲ್ಲವೂ ಶಶಿಗೇ ಆಯಿತು. ಇಂದಿನಿಂದ ಅವಳು ಶಶಿಯಲ್ಲ–ಶಾರದ.

ಕಮಲಮ್ಮನವರೀಗ ಬಡವರಂತೆ ಭಾಗ್ಯವಂತರೆಂಬ ತಾರತಮ್ಯವನ್ನು ಮರೆತರು ಆ ಡಾಂಭಿಕ ವರ್ತನವೂ ಮಾಯವಾಯಿತು. ನನ್ನ ಶಾರದಾನ ಪ್ರಾರ್ಥನೆ ದೇವರಿಗೆ ಕೇಳಿಸಿತು.

ದೇವರಿದ್ದಾನೆ ಎನ್ನಿಸಿತು.

# ಮೋಡಿ

ಊರಿಗೆಊರೇ ತೋಪಿನ ಬಳಿ ನುಗ್ಗುತ್ತಿತ್ತು. ಇಂದು ಅಲ್ಲಿ ಮೋಡಿ ಆಟ. ಮಲಯಾಳ ಸೀಮೆಯ ಪ್ರಸಿದ್ಧ ಮಾಂತ್ರಿಕನೊಬ್ಬನು ಬಂದು ಮೋಡೀ ಆಟದಲ್ಲಿ ತನ್ನನ್ನು ಯಾರು ಬೇಕಾದರೂ ಎದುರಿಸಬಹುದೆಂದು ಘೋಷಿಸಿದನು. ನಮ್ಮಲ್ಲಿನ ಜನರು ಮೊದಲು ಹಿಂಜರಿದರೂ ಕೊನೆಗೆ ಎಲ್ಲಿಂದಲೋ ಯಾರನ್ನೋ ಕರೆಯಿಸಿ ಅವನಿಗೆ ಪ್ರತಿಸ್ಪರ್ಧಿಗಳಾಗಿ ನಿಂತರು.

ತೋಪಿನ ಮಧ್ಯದಲ್ಲೊಂದು ಕೊಳ. ಅದಕ್ಕೆ ಹೊಂದಿದಂತೆಯೇ ವಿಸ್ತಾರವಾದ ಬಯಲು. ಅಲ್ಲಿಯೇ ಆಟ ನಡೆವುದು. ದೊಡ್ಡವರು, ಚಿಕ್ಕವರು—ಹೆಂಗಸರು ಮಕ್ಕಳೆನ್ನದೆ ಅನೇಕರು ನೆರೆದಿದ್ದರು. ಇದಕ್ಕಾಗಿ ನಮ್ಮೂರಿನ ಶಾಲೆಗಳಿಗೂ, ಕಚೇರಿಗಳಿಗೂ ಅಂದು ರಜ.

ಆ ಬೈಲಿನ ಮಧ್ಯದಲ್ಲಿ ಬಾಳೆಯ ಕಂಬಗಳಿಂದ ಅಲಂಕೃತವಾದ ಆ ಮಾಂತ್ರಿಕನ ಮಂಟಪ. ಮಂಟಪದಲ್ಲಿ ಕುಂಕುಮಗಳ ರಾಶಿ. ಅವುಗಳ ಮಧ್ಯದಲ್ಲಿ ಯಾವುದೊಂದೋ ತಲೆಬುರುಡೆ! ಈ ಭೀಕರತೆಯನ್ನು ಇನ್ನೂ ಹೆಚ್ಚುಮಾಡಲು ರಕ್ತ ಸಿಂಪಡಿಸಿದ ಅನ್ನಗಳ ರಾಶಿರಾಶಿ ನಾಲ್ಕೂ ಮೂಲೆಯಲ್ಲಿ! ಬಳಿಯಲ್ಲಿಯೇ ಹಣೆಯ ತುಂಬಾ ಕುಂಕುಮವಿಟ್ಟು, ಕೆದರಿದ ಕೂದಲಿನಿಂದ, ಕೈಲೊಂದು ಮೂಳೆಯ ತುಂಡನ್ನು ಹಿಡಿದು ಕುಳಿತಿರುವ ಮಾಂತ್ರಿಕನ ರುದ್ರರೂಪ! ಅವನ ಮುಂದೆ ಪಟ್ಟೆಪಟ್ಟೆಗಳನ್ನು ಹಾಕಿದ ಮನೆಗಳು. ಒಂದರಲ್ಲಿ ಬೇವಿನ ಗಿಡದ ಟೊಂಗೆಯೊಂದು; ಮತ್ತೊಂದರಲ್ಲಿ ಕೋಳಿಯ ಮರಿ, ಇತ್ಯಾದಿ. ಆ ಮಾಂತ್ರಿಕನ ಸಹಾಯಕ್ಕೆ ಹೆಂಗಸೊಬ್ಬಳು.

ಅವನಿಗೆ ಪ್ರತಿ ಸ್ಪರ್ಧಿಗಳೆಂದರೆ ನಾಲ್ಕೈದು ಜನ ತರುಣರ ಗುಂಪೊಂದು. ಕಾಲಿಗೆ ಗೆಜ್ಜೆಕಟ್ಟಿ, ಕೈಲಿ ತರಹೆ ತರಹೆ ಆಯುಧಗಳನ್ನು ಹಿಡಿದು ನಿಂತಿದ್ದಾರೆ.

ಊರಿನ ಮುಖ್ಯಾಧಿಕಾರಿಗಳೂ ಬಂದು ಕುಳಿತಮೇಲೆ, ಅವರ ಅಪ್ಪಣೆಯ ಮೇರೆಗೆ 'ಢಂ' ಎಂಬ ಬಂದೂಕಿನ ಶಬ್ದವಾಯಿತು. ಸುತ್ತಲೂ ನೆರದಿದ್ದವರೆಲ್ಲರೂ ತೆಪ್ಪಗಾದರು. ಉತ್ಸುಕತೆಯಿಂದ ಆ ಮೋಡಿಯ ಮನೆಯನ್ನೇ ನೋಡುತ್ತಿದ್ದಾರೆ.

ಆಟ ಷುರುವಾಯಿತು. ನಮ್ಮಲ್ಲಿನ ಮೋಡಿಕಾರರು ಕಠೋರವಾಗಿ ರಬ್ಬಮಾಡುತ್ತಾ. ಆಯುಧಗಳನ್ನು ಝುಳಪಿಸುತ್ತಾ-ನುಗ್ಗಿದರು. ಆ ಮನೆಗೆ ಬರುವವರೆಗೂ ರಭಸಡಿಂದ ನುಗ್ಗಿದರು. ಆಗ ಮಲೆಯಾಳದವನು ಮೆಲ್ಲನೆದ್ದು, ಅವರಿಗೆ ತನ್ನ ಕೈಯಲ್ಲಿನ ಮೂಳೆಯನ್ನು ತೋರಿಸಿ, ಅವರ ಮೇಲೆ ಕುಂಕುಮ ಎರಚಿದನು. ಎದುರಾಳಿಗಳಲ್ಲಿ ಪ್ರತಿಯೊಬ್ಬರೂ ವ್ಯಥೆ ಪಡಲಾರಂಭಿಸಿದರು. ಒಬ್ಬನು ರಕ್ತಕಾರುತ್ತಾ ಅಲ್ಲಿಯೇ ನೆಲಕಚ್ಚಿದನು. ಮತ್ತೊಬ್ಬನನ್ನು ದುಂಬಿಗಳು ಮುತ್ತಿ ಕಡಿಯಲಾರಂಭಿಸಿದುವು. ಇನ್ನೊಬ್ಬನು ನೆಲಕ್ಕೂ ಆಕಾಶಕ್ಕೂ ಮಧ್ಯೆ ಬೆಪ್ಪನಂತೆ ನಿಂತನು. ಉಳಿದವರಿಬ್ಬರು ಹಿಂದೆ ಓಡಿಹೋದರು. ಸೇರಿದ್ದ ಜನಗಳು ದಿಗ್ಭ್ರಮೆಯಿಂದ ಮೂಕರಾದರು. ಹಿಂದೆ ಓಡಿದವರಲ್ಲೊಬ್ಬನು ಅಲ್ಲಿ ಮರಳುಗುಪ್ಪೆಮಾಡಿ. ಏನನ್ನೋ ಬರೆದು, ನಿಂಬೆಯ ಹಣ್ಣೊಂದನ್ನು ಅವರ ಮೇಲಿಟ್ಟನು. ಆಶ್ಚರ್ಯ, ಆಶ್ಚರ್ಯ—ಮಲಯಾಳಿಯವನ ಕಡೆ ಹೆಂಗಸು ತಟ್ಟನೆ ಬಿದ್ದಳು. ನಮ್ಮವರ ಕಡೆಯವರು ನೆಗೆದೆದ್ದು ಮುಂದೆ ನುಗ್ಗಿದರು.

ಆದರೇನು, ಮಲಯಾಳಿ ಬಲು ಘಟ್ಟಿಗದಾಳು. ಏನನ್ನೋ ಒಟಿ ಗುಟ್ಟುತ್ತಾ, ತನ್ನವಳ ಮೇಲೆ ಕುಂಕುಮವೆರಚಲು ಅವಳೆದ್ದು ಕುಳಿತಳು. ನಂತರ ತನ್ನಲ್ಲಿದ್ದ ನಿಂಬೆಯ ಹಣ್ಣನ್ನು ಎಲ್ಲಿಯೋ ಎಸೆದು ಅದನ್ನು ತರಲು ಹೇಳಿದನು. ಎದುರಾಳುಗಳು ಹಾಡುತ್ತಾ, ಕುಣಿಯುತ್ತಾ ಮುಂದೆ ನುಗ್ಗಿದರು. ಅರೆ! ಅಲ್ಲೇನಾಯಿತೋ! ಎಲ್ಲರೂ ದೊಪ್ಪನೆ ಕೊಳದಲ್ಲಿ ಬಿದ್ದು ಒದ್ದಾಡತೊಡಗಿದರು. ಈ ಮಧ್ಯೆ ಎದುರಾಳಿನವನೊಬ್ಬ 'ಇಗೋ ನಿನ್ನ ನಿಂಬೆಯ ಹಣ್ಣಿಂ' ದು ಮಲೆಯಾಳಿಯ ಕೈಯಲ್ಲಿ ಹಣ್ಣೊಂದನ್ನು ಕೊಟ್ಟು ಬೊಬ್ಬೆಯಿಟ್ಟನು. ಅದು ತನ್ನದಲ್ಲವೆಂದು ಮಲಯಾಳಿಯೂ, 'ನಿನ್ನದೇ' ಎಂದು ಎದುರಾಳೂ ಜಗಳವಾಡಿ—ಜಗಳದಲ್ಲಿಯೇ ಮೋಡಿ ನಿಂತು ಜನಗಳು

ಹೊರಡತೊಡಗಿದರು. ಅನೇಕರಿಗೆ ' ಸಧ್ಯ ಇದು ನಿಂತರೆ ಸಾಕಪ್ಪಾ ಎಂದೂ ಅನ್ನಿಸಿತ್ತು.

ಈ ಮಧ್ಯೆ ಗುಂಪಿನಲ್ಲಿದ್ದ ಹುಡುಗನೊಬ್ಬನು ಆ ರಕ್ತಪಾತವನ್ನೂ ಜನಗಳ ಸಂಕಟವನ್ನೂ ನೋಡಲಾರದೆ ಮೂರ್ಛೆಬಿದ್ದನು. ಎಲ್ಲೆಲ್ಲಿಯೂ ಗುಲ್ಲೆದ್ದಿತು. ಮಾಂತ್ರಿಕನೂ ಆ ಕಡೆ ತಿರುಗಿ ನೋಡಿದನು. ಬಳಿಯೇ ಇದ್ದ ಡಾಕ್ಟರೂ ಬಂದರು. ಸಧ್ಯಕ್ಕೆ ಮೋಡಿ ನಿಂತಿತು. ಡಾಕ್ಟರು ಆ ಹುಡುಗನು ಸತ್ತಿರುವನೆಂದರು. ಎಲ್ಲೆಲ್ಲಿಯೂ ಗೋಳಿಗೆ ಆರಂಭವಾಗಿ ಎಲ್ಲರೂ ಮಾಂತ್ರಿಕನನ್ನು ಶಪಿಸತೊಡಗಿದರು. ಮಾಂತ್ರಿಕನ ಕಿವಿಗೂ ಮುಟ್ಟಿತು. ಅವನೂ ತಟಕ್ಕನೆ ಎದ್ದುಬಂದು ಪರೀಕ್ಷಿಸತೊಡಗಿದನು. ಶ್ವಾಸೋಛ್ವಾಸಗಳು ಸಂಪೂರ್ಣವಾಗಿ ನಿಂತುಹೋಗಿದ್ದುವು. ರಕ್ತಪರಿಚಲನೆಯೂ ನಿಂತೇ ಹೋಗಿದ್ದಿತು. ಮಾಂತ್ರಿಕನು ನಿರಾಶನಾಗಲಿಲ್ಲ. " ಹುಡುಗನು ಸತ್ತಿಲ್ಲ ; — ಸಾವೆಬುಂದೇ ಇಲ್ಲ. ಇವನ ಆತ್ಮವು ಮಾತ್ರ ಬೇರೊಂದು ಪ್ರಪಂಚಕ್ಕೆ ಹೋಗಿದೆಯಷ್ಟೆ " ಎಂದನು.

ಆ ಸಮಯದಲ್ಲಾರಿಗೂ ಅವನ ತತ್ವೋಪದೇಶ ಬೇಕಾಗಿರಲಿಲ್ಲ. ಯಾರ ಮನಸ್ಸೂ ಸರಿಯಿರಲಿಲ್ಲ. ಎಲ್ಲರೂ ಅವನನ್ನು ಶಪಿಸತೊಡಗಿದರು. ಇಷ್ಟುಹೊತ್ತಿಗೆ ಈ ಸಮಾಚಾರವು ಆ ಹುಡುಗನ ತಾಯಿ ತಂದೆಗಳಿಗೂ ತಿಳಿದು, ಅವರೂ ' ಗೋಳೋ ' ಎಂದು ರೋದಿಸುತ್ತಾ ಬಂದರು. ಈ ಮನ ಕರಗುವ ಸನ್ನಿವೇಶವು ಜನಗಳ ಮನಸ್ಸನ್ನೆಲ್ಲಾ ಕಲುಕಿತು. 'ಮೋಡಿ' ಯ ಮೇಲೂ, ಆ ಮಲಯಾಳಿಯ ಮೇಲೂ ಎಲ್ಲರಿಗೂ ಕೋಪಬಂತು. ಈ ಮೋಡಿಯಾಟಕ್ಕೆ ಅಪ್ಪಣೆಯಿತ್ತ ಆ ಮೇಲಧಿಕಾರಿಗಳೂ ಕೂಡ ರೋಸಿದರು. ಆದರೆ ಮಾಡಲೇನು ?

ಶವಸಂಸ್ಕಾರವಾಗಬೇಕು. ಪುನಃ ಮಲಯಾಳಿಯು " ಸ್ವಾಮಿ, ಮಗು ಸತ್ತಿಲ್ಲ. ಆತ್ಮ ಬೇರೊಂದೆಡೆಗೆ ಹೋಗಿದೆ. ನನ್ನ ಶಕ್ತಿಯಿಂದ ಪುನಃ ಅವನು ಮಾತನಾಡುವಂತೆ ಮಾಡುತ್ತೇನೆ " ಎಂದ. ಚದರುತ್ತಿದ್ದ ಜನರು ಈ ದೃಶ್ಯವನ್ನು ನೋಡಲು ಕುತೂಹಲರಾದರು. ಯಾರೂ ಏನೂ ಹೇಳದೆ ಬೆಪ್ಪಾಗಿ ಕುಳಿತಿದ್ದರು.

ಮಾಂತ್ರಿಕನು, ಆ ಹುಡುಗನ ದೇಹವನ್ನು ಪೂರ್ವಕ್ಕೆ ತಿರುಗಿಸಿ, ಮೂರುಸಲ, ಏನೋ ಮಂತ್ರವನ್ನು ಹೇಳುತ್ತಾ, ಪ್ರದಕ್ಷಿಣೆ ಹಾಕಿದ. ಕಿವಿಯಲ್ಲೂದಿದ. ನೆತ್ತಿಗೆ ನಿಂಬೆಹಣ್ಣಿನ ರಸವನ್ನು ಹಚ್ಚಿದ. ಮೂಗಿಗೆ ಬೇವಿನ ಸೊಪ್ಪಿನ ರಸವನ್ನು ಹಿಂಡಿದ. ಬಿಳುಪೇರಿದ ಆ ಹುಡುಗನ ಮುಖದಲ್ಲಿ ಕೆಂಪು ರಂಗು ಕಂಡುಬಂದಿತು. ಕ್ರಮಶಃ ಉಸಿರಾಡುವುದೂ ತೋರಿಬಂತು. ಜನಗಳು ಅವಾಕ್ಕಾಗಿ ನಿಂತರು. ಮಾಂತ್ರಿಕನು 'ಗಾಳಿ ಗಾಳಿ' ಎಂದು ಮೆಲ್ಲನುಸುರಿದನು. ಎಲ್ಲರೂ ದೂರ ಚದುರಿದರು. ಆ ಹುಡುಗನ ಕೈಗಳೆರಡನ್ನೂ ತನ್ನ ಕೈಯಲ್ಲಿ ಹಿಡಿದುಕೊಂಡು, ಮತ್ತೊಂದನ್ನು ಅವನ ತಲೆಯಮೇಲಿಟ್ಟು, ಮೆಲ್ಲನೆ ಮೃದುವಾಗಿ 'ಮಗೂ' ಎಂದನು. ಉತ್ತರವಿಲ್ಲ. ಪುನಃ 'ಮಗೂ' ಎಂದನು.

ಹುಡುಗನ ತುಟಿಗಳದುರಿದವು. ಮೆಲ್ಲನೆ ಕ್ಷೀಣಸ್ವರದಿಂದ 'ಏನು ?' ಎಂದು ಕೇಳಬಂತು. ಎಲ್ಲರೂ ಬೆಚ್ಚಿದರು. ಎಳ್ಳು ಸಿಡಿದರೂ ಕೇಳುವಂತಹ ಗಭೀರ ಶಾಂತತೆ.

"ಈಗ ಎಲ್ಲೀದ್ದೀಯಾ ?"

"ಇಲ್ಲೇ.... ನಿನ್ನ ಬಳಿಯಲ್ಲೇ.... ಪುನಃ ಬಂದೆ."

"ಪುನಃ ಬಂದೆಯಾ ! ಹಾಗಾದರೆ ಎಲ್ಲಿಂದ ಬಂದೆ !"

"ಎಲ್ಲಿ ಎಲ್ಲವೂ ಸುಖವಾಗಿದೆಯೋ ಅಲ್ಲಿಂದ ; ಪುನಃ ಜನನ ಮರಣ, ಸುಖದುಃಖಗಳೆಲ್ಲಿಲ್ಲವೋ ಅಲ್ಲಿಂದ ; ಎಲ್ಲಿ ಜೀವನವು ಶಾಶ್ವತವೋ ಅಲ್ಲಿಂದ !"

"ಅಂದರೆ ಅಲ್ಲಿ ಮರಣವಿಲ್ಲವೆ ? ಮುಪ್ಪಿಲ್ಲವೆ ? ಸಾವಿಲ್ಲವೆ ?"

"ಸಾವು ! ಸಾವೇ ? ಅಂತಹುದು ಇಲ್ಲವೇ ಇಲ್ಲ. ದೇಹದಿಂದ ಆತ್ಮ ಬಿಡುಗಡೆಯಾಗಿ ಹೊರಡುವುದಷ್ಟೆ. ಸದಾ ಕಷ್ಟಗಳಲ್ಲಿ ಮುಳುಗಿದ ಜಡ ದೇಹವನ್ನು ಬಿಟ್ಟು ಯಾವುದು ನಿಜವೋ, ಯಾವುದು ಸತ್ಯವೋ, ಯಾವುದು ಸುಂದರವೋ, ಯಾವುದು ಶಾಶ್ವತವೋ ಅಲ್ಲಿ ಆತ್ಮರಮಿಸುವುದು. ಹೀಗಿರುವಲ್ಲಿ ಸಾವೆಂದರೇನು ?"

ಈ ಚಿಕ್ಕಬಾಲಕನ ಬಾಯಿಂದ ಇದೆಲ್ಲವನ್ನೂ ಕೇಳಿ ನೆರೆದಿದ್ದವರೆಲ್ಲರೂ ಬೆಚ್ಚಿದರು. ಪುನಃ ಮಾಂತ್ರಿಕನು ಕೇಳತೊಡಗಿದನು.

" ನಿನ್ನ ಸ್ಥಳ ಹೇಗಿದೆ? ಇದರಂತೆ ಅದೂ ಭೂಮಿಯೇ ?"

" ಅಲ್ಲ ಅದೊಂದು ರಮಣೀಯವಾದ, ನಿಮ್ಮ ಭೂಮಿಯಂತಿರುವ, ನಕ್ಷತ್ರ. ಅಲ್ಲಿನ ಬೆಳಕು ಕಾಮನ ಬಿಲ್ಲಿನ ಬೆಳಕು; ಅಲ್ಲಿನ ಗಾನವೇದ ಗಾನ, ಅಲ್ಲೆಲ್ಲರೂ ದೇವರ ಆಶೀರ್ವಾದದಿಂದ ಸುಖಿಗಳು."

ಮಾಂತ್ರಿಕನ ಹುಬ್ಬು ಗಂಟಿಕ್ಕಿತು. ಕರ್ಕಶ ಸ್ವರದಿಂದ " ಆ ಏನಂದೆ? ದೇವರೆ! ಅದೆಂತಶಕ್ತಿ? ಎಲ್ಲಿಯೋ ಹೊರಟುಹೋಗಿದ್ದ ನಿನ್ನ ಆತ್ಮವನ್ನೇ ಹಿಂದಿರುಗಿಸಿದ ನನ್ನ ಶಕ್ತಿಯು ಮುಂದೆ ಆ ಶಕ್ತಿಯೇ? ನಾನಿರುವಾಗ ಇನ್ನಾವ ದೇವರು?" ಇದನ್ನು ಹೇಳು ಹೇಳುತ್ತಾ ಮಾಂತ್ರಿಕನ ಕಣ್ಣುಗಳು ಕ್ರೋಧದಿಂದ ಅಸೂಯೆಯಿಂದ ಜ್ವಲಿಸಲಾರಂಭಿಸಿತು.

" ದೇವರು? ದೇವರು ಅದಾರದು? ನನ್ನ ಆಜ್ಞೆಗೆ ಆತ್ಮವೇ ಅಧೀನ. ತಿರುಗುವ ಭೂಮಿಯನ್ನು ಹಾಗೆಯೇ ನಿಲ್ಲಿಸಬಲ್ಲೆ. ಕ್ಷುಬ್ಧವಾದ ಸಾಗರವು ನನ್ನಿಂಗಿತದಿಂದ ಶಾಂತವಾಗತೊಡಗುವುದು? ಜನಗಳೇ, ನನ್ನ ಶಕ್ತಿಯನ್ನಾದರೂ ನೋಡಿ" ಎಂದು ಸಿಳ್ಳನ್ನು ಹೊಡೆದು ಆಕಾಶದ ಕಡೆ ನೋಡುತ್ತಲೇ ಬೆಂಕಿಯ ಮಳೆ ಸುತ್ತಲೂ ಯಾರಿಗೂ ತೊಂದರೆಯಾಗದಂತೆ ಬೀಳಲಾರಂಭಿಸಿತು. ಹಠಾತ್ತಾಗಿ ಕಾರ್ಮೋಡಬಂದು ಪಸರಿಸಿ ಸೂರ್ಯನು ಕಾಣದೆಯೇ ಕತ್ತಲಾಯಿತು. ಭಯಂಕರ ಗುಡುಗಿನ ಶಬ್ದವಾಯಿತು. ಜನಗಳು ಚೀರಿದರು. ಬೆದರಿದರು. ಬೆದರದಿರಿ ಎಂದು ಎಲ್ಲರಿಗೂ ಆಶ್ವಾಸನವಿತ್ತು ಮಾಂತ್ರಿಕನು ಪುನಃ ಸಿಳ್ಳುಹೊಡೆಯಲು ಎಲ್ಲವೂ ಮೊದಲಿದ್ದಂತಾಯಿತು.

" ಹೇಳಿ, ಯಾರು ದೇವರು?–ದೇವರು ಯಾರು. ನಿಮ್ಮ ವಿಗ್ರಹಗಳು ದೇವರಲ್ಲ. ಇಗೋ ನಿಮ್ಮ ದೇವರ ವಿಗ್ರಹಗಳನ್ನೆಲ್ಲಾ ತೆಗೆದುಕೊಳ್ಳಿ" ಎಂದು ಗಾಳಿಯಲ್ಲಿ ಏನನ್ನೋ ಹಿಡಿದುಹಿಡಿದು ಎಲ್ಲಾ ದೇವತೆಗಳ ವಿಗ್ರಹಗಳನ್ನೂ ತೆಗೆದಿಡಲಾರಂಭಿಸಿದನು. ಎಲ್ಲರೂ ಅವನನ್ನೇ ಬೆಪ್ಪರಂತೆ ನೋಡುತ್ತಾ ನಿಂತಿದ್ದರು. ಮಾಂತ್ರಿಕನು ಪುನಃ ಸ್ಥಿರಭಾವದಿಂದ, ಬಿದ್ದಿದ್ದ ಆ ಮಗುವಿನ ದೇಹದ ಕಡೆಗೆ ತಿರುಗಿ, " ಮಗೂ ಈಗ ಹೇಳು ನನ್ನ ಶಕ್ತಿಯನ್ನೂ ನೋಡಿದೆಯಷ್ಟೆ ನಿನ್ನಾ ದೇವರಾರು? ನಿನ್ನ ಆತ್ಮವನ್ನೇ ಹಿಂದೆ

ಕಳುಹಿಸಿದ ನಾನಾರು? ನೋಡು, ದೃಷ್ಟಿಸಿ ಹೇಳು, ದೇವರಾರು?" ಎಂದನು.

ಮಗುವಿನ ದೇಹ ಸ್ವಲ್ಪ ಚಲಿಸಿತು. ತುಟಿಗಳದುರಿದವು "ಅಯ್ಯೋ ಹುಚ್ಚ! ಬುದ್ಧಿಕೆಡಬೇಡ. ನೀನೆಂದರೇನು? ಆ ಪ್ರೇಮಮೂರ್ತಿಯಾದ ದೇವರೆಂದರೇನು? ನಿನ್ನ ಅಲ್ಪತ್ವವನ್ನು ತಿಳಿದು ಆ ದಯಾಮಯನಲ್ಲಿ ದೈನ್ಯದಿಂದ ಪ್ರಾರ್ಥಿಸಿಕೋ? ನಿನಗಿಂತಲೂ ಚಿಕ್ಕಮಗು ಲೇಸು! ಅದು ದೇವತಾ ಸ್ವರೂಪ ತಿಳಿ, ತಿಳಿ **ಎಲ್ಲಿ ಪ್ರೇಮವೋ ಅಲ್ಲಿ ದೇವರು.** ನಡೆ, ದೇವರನ್ನರಸು. ಹೋಗು."

ಮಾಂತ್ರಿಕನಿಗೆ ಕೋಪ ತಡೆಯದಾಯಿತು.

"ಮಗೂ, ಎಲ್ಲಿಗೋ ಹೋಗಿದ್ದ ನಿನ್ನ ಆತ್ಮವನ್ನು ಹಿಂದಕ್ಕೆ ಬರಮಾಡಿದ ನಾನು ದೇವರು; ನಿನ್ನಾ ದೇವರಿಗೆ ನನ್ನಲ್ಲಿರುವಷ್ಟು ಶಕ್ತಿಯಿದ್ದರೆ ನಾನು ಮಾಡಿದುದಕ್ಕಿಂತಲೂ ಹೆಚ್ಚಿನ ಕಾರ್ಯವನ್ನು ಮಾಡತೋರಿಸ ಹೇಳು. ನಿನ್ನನ್ನು ಮೊದಲಿಲಿಂತೆಯೆ ಸಜೀವಿಯನ್ನಾಗಿ ಮಾಡಹೇಳು ಬೇಗ! ಜಾಗ್ರತೆ!"

ಎಲ್ಲರೂ ಮುಂದೇನಾಗುವುದೆಂಬುದನ್ನೇ ಕಾತುರರಾಗಿ ನೋಡುತ್ತಿದ್ದಾರೆ. ಈ ಮಲಯಾಳಿಯನ್ನು ಕಂಡರೆ ಜನರಿಗೆ ಗೌರವಕ್ಕಿಂತಲೂ ಹೆಚ್ಚಾಗಿ ಭಯ ಉತ್ಪನ್ನವಾಗಿದೆ. ದೇವರಿಲ್ಲ. ಆ ಮಗುವಿನ ಶವದಿಂದಲೂ ಏನೊಂದೂ ಉತ್ತರ ಬರಲಿಲ್ಲ.

ನಿಮಿಷಗಳು ಐದಾದವು, ಹತ್ತಾದವು, ಕ್ರೂರದೃಷ್ಟಿಯಿಂದ ಆ ಮಗುವನ್ನೇ ನೋಡುತ್ತಿದ್ದ ಮಾಂತ್ರಿಕನು ಹಟಾತ್ತಾಗಿ ಗಹಗಹಿಸಿ ನಕ್ಕು, ಕಠೋರ ಶಬ್ದದಿಂದ, "ಹೇಡಿ, ಹೇಡಿ, ಆ ನಿನ್ನ ದೇವರೆಲ್ಲಿ? ಎಲ್ಲಿ?" ಎಂದರಚಿ ಮಗುವನ್ನೊದೆದನು.

ಹಟಾತ್ತಾಗಿ 'ಫಟ ಫಟ' ಎಂದು ಸಿಡಿಲು ಹೊಡೆಯಿತು. ಎಲ್ಲರೂ ಬೆದರಿ ಬೆಪ್ಪಾದರು. ಆ ಮಗುವಿನ ದೇಹದ ಸುತ್ತಲೂ ಏನೋ ಒಂದು ಕಾಂತಿಬಂದು ಮಗು ಎದ್ದು ಕುಳಿತು ಕಣ್ಣುಬಿಟ್ಟು, ದುರದುರನೆ ನೋಡತೊಡಗಿತು. ಆ ದೃಷ್ಟಿಯ ಮುಂದೆ ಮಾಂತ್ರಿಕನು ನಡುಗತೊಡಗಿದನು.

ಅವನಲ್ಲಿನ ಆ ಶಕ್ತಿ ಎಲ್ಲಿಯೋ ಹುದುಗಿದ್ದಂತೆ ತೋರಿತು. ಆ ಬಾಲಕ ನೆದುರಿಗೆ ಮೊಣಕಾಲೂರಿ ಕೈಮುಗಿದು, 'ದೇವ, ರಕ್ಷಿಸು ರಕ್ಷಿಸು. ದಯಾ ಮಯಾ, ಪಾಪಿಯನುದ್ಧಾರದಾಡು' ಎಂದು ಗೋಳಿಡಲಾರಂಭಿಸಿದನು.

ಬಾಲಕನು ಕೋಪದಿಂದ ಕೆಂಡಕಾರುತ್ತಾ,

"ಹುಚ್ಚಾ ನಿನ್ನ ಮಾಂತ್ರಿಕತನದಿಂದ ಇಷ್ಟು ತಲೆ ತಿರುಗಿತೇ? ದೇವರಿಲ್ಲ ಎನ್ನುವಂತಾದೆಯಾ? ದೇವರನ್ನು—ಆ ಸರ್ವಶಕ್ತನನ್ನು—ಹೇಡಿ ಎನ್ನುವಂತಾದೆಯಾ? ನೀನೂ ಒಬ್ಬ ಸೃಷ್ಟಿಣಾಕರ್ತನೆಂದೆಣಿಸಿದಿಯಾ? ನೀನು ಪಾಪಿ, ತೊಲಗು" ಎಂದು ಗರ್ಜಿಸಲು ಮಾಂತ್ರಿಕನು ದೊಪ್ಪನೆ ಬಿದ್ದನು.

ಬಾಲಕನೆದ್ದು ಕುಳಿತನು. ತಂಗಾಳಿ ಸುಯ್ಯನೆ ಬೀಸಿತು. ಅದ ರೊಂದಿಗೆ ಎಲ್ಲಿಂದಲೋ ಮೃದು ಮಧುರಸ್ವರ ಒಂದು ತೇಲಿಬಂತು. ಬಾಲ ಕನೇ ಹಾಡುತ್ತಿದ್ದನು.

ವನಸುಮದೊಲೆನ್ನ ಜೀ
ವನವು ವಿಕಸಿಸುವಂತೆ ।
ಮನವ ನನುಗೊಳಿಸು ಗುರುವೇ—ಹೇ ದೇವ ॥
ಉಪಕಾರಿ ನಾನು ಎ
ನ್ನುಪಕೃತಿಯು ಜಗಕೆಂಬ ।
ವಿಪರೀತ ಮತಿಯ ನುಳಿದು ॥
ವಿವುಲಾಶ್ರಯವನೀವ
ಸುಫಲಸುಮಭರಿತ ಪಾ ।
ದಪದಂತೆ ನೈಜಮಾದೊಳ್ಪಿನಿಂ ಬಾಳ್ವವೊಲು ॥

ಹಾಡು ಮೆಲ್ಲನೆ ಅಡಗಿ ಪುನಃ ಆ ಶಾಂತತೆ ಬಂದಿತು. ಬೆಚ್ಚಿದ ಜನರು ಇವೆಲ್ಲವನ್ನೂ ನೋಡಿ ತಮ್ಮನ್ನು ತಾವೇ ನಂಬದಾದರು. ತನ್ನ ಮಗು ಬದುಕಿ ಬಂದದ್ದನ್ನು ಕಂಡು ನಲಿದ ತಾಯಕರಳು.

"ಮಗು, ನನ್ನ ಕಂದಾ" ಎಂದು ಕನವರಿಸಿತು. ಪುನಃ ಬಾಲಕನು ಕಣ್ಣುಬಿಟ್ಟು ಸುತ್ತಲೂ ನೋಡಿದನು. ಅವನಿಗೇ ದಿಗ್ಭ್ರಮೆಯಾಗಿರಬೇಕು, ಪುನಃ ಬೆಚ್ಚಿನೋಡಿ.

"ಅಮ್ಮಾ, ನೀನೇಕಮ್ಮ ಇಲ್ಲಿ ಬಂದೆ ?" ಎಂದನು.

ತಾಯಿ ಬಿಗಿದಪ್ಪಿ ಮುದ್ದಿಕ್ಕಿದಳು. ಅವಳ ಕಣ್ಣೀರು ಕೋಡಿ ಹರಿಯಿತು.

ಈ ಗಲಭೆಯಲ್ಲಿ ಮಾಂತ್ರಿಕನೆಲ್ಲೋ ಮಾಯವಾಗಿದ್ದನು. ಮಗು ಬದುಕಿದ ಸಂತೋಷದಿಂದ ತಾಯಿಯೂ, ಕೊನೆಗೆಲ್ಲವೂ ಸುಖದಲ್ಲಿ ಕೊನೆಗೊಂಡುದುದಕ್ಕಾಗಿ ಮಿಕ್ಕೆಲ್ಲರೂ ಸಂತೋಷಗೊಂಡು ಚದರಿದರು.

ಕಾಲ ಕಳೆದಂತೆ ನಾವೆಲ್ಲರೂ ಆ ಮಾಂತ್ರಿಕನನ್ನು ಮರೆಯಲಾರಂಭಿಸಿದೆವು. ಆದರೂ ಆ ಸಾವಿನಿಂದೆದ್ದು ಬಂದು, ನಮಗೆಲ್ಲಾ ಪಾಠಕಲಿಸಿದ ಆ ಬಾಲಕನನ್ನು ನೋಡಿದಾಗೆಲ್ಲಾ ಆ ಪ್ರಸಂಗ ಜ್ಞಾಪಕ ಬರುವುದು. ಅಕಸ್ಮಾತ್ ಈ ವಿಚಾರದಲ್ಲಿ ಏನನ್ನಾದರೂ ಪ್ರಶ್ನಿಸಿದರೆ ಅವನಿಗೆ ಒಂದೂ ತಿಳಿಯದು. ಮೊದಲಿನಂತೆಯೇ ಅವನಿದ್ದನು.

⁂ ⁂ ⁂

ನನ್ನ ಸ್ನೇಹಿತನ ಬಲವಂತಕ್ಕಾಗಿ ಅವನಿದ್ದ ಊರಿಗೆ ಹೋದೆ. ಬೆಟ್ಟ ಗುಡ್ಡಗಳಿಂದ ರಮ್ಯವಾದ ಸ್ಥಳ. ಆ ಗುಡ್ಡಗಳ ಮೇಲಿನ ಕೋಟೆಕೊತ್ತಲಗಳೋ ಎಲ್ಲರನ್ನೂ ಬೆರಗುಗೊಳಿಸುವಂಥವು.

ನಾನೂ, ನನ್ನ ಸ್ನೇಹಿತನೂ ಅವನ ಚಿಕ್ಕಮಗುವೂ ಸಂಜೆ ಬೆಟ್ಟಕ್ಕೆ ಹೋದೆವು—ಅಲ್ಲಿನ ಯತಿಗಳನ್ನು ನೋಡಲೋಸುಗ. ಇದು ಅವನ ನಿತ್ಯ ನಿಯಮವಂತೆ; ಅವನಿಗಾ ಯತಿಗಳಲ್ಲಿ ಅಷ್ಟು ಭಕ್ತಿ.

ಬೆಟ್ಟದ ಮೇಲೊಂದು ಪುಷ್ಕರಣಿ ಬಳಿ ಕೃಷ್ಣದೇವರ ದೇವಸ್ಥಾನ. ಕೌಪೀನ ಒಂದು ಹೊರತಾಗಿ ಏನೊಂದೂ ಇಲ್ಲದೆ ದೇವಸ್ಥಾನದಲ್ಲಿ, ತಪಸ್ಸಿನಲ್ಲಿ ತಮ್ಮ ದೇಹವನ್ನೇ ಕೃಶಮಾಡಿದ ಯತಿಗಳು ಧ್ಯಾನಮಗ್ನರಾಗಿದ್ದರು. ಮುಖದ ಮೇಲೊಂದು ಅಪೂರ್ವಕಾಂತಿ— ಶೋಭೆ. ಜನಗಳನೇಕರು ದರ್ಶನೋತ್ಸುಕರಾಗಿ ಬಂದಿದ್ದರು.

ಅವರನ್ನು ನೋಡಿದೊಡನೆಯೇ ನನಗಾ ಮಲಯಾಳಿ ಮಾಂತ್ರಿಕನ ಗುರ್ತು ಸಿಕ್ಕಿತು. ವಿಚಾರಿಸಿ ಲೆಕ್ಕಹಾಕಿ ನೋಡಿದುದರಲ್ಲಿ ಅವನೇ ಇವ

ನೆಂದು ತಿಳಿಯಿತು. ಏನಾಶ್ಚರ್ಯ! ಆ ಡಾಂಭಿಕತನ, ಅಹಂಕಾರಗಳೆಲ್ಲಿ. ಈ ಸಾತ್ವಿಕ ಮೂರ್ತಿ ಎಲ್ಲಿ! ದೇವ, ನಿನ್ನ ಲೀಲೆ ಅಗಾಧವಾದುದು.

ಯೋಗಿಗಳು ಕಣ್ತೆರೆದು ನನ್ನ ಸ್ನೇಹಿತನ ಮಗುವನ್ನು ನೋಡಿ "ಬಾ ನನ್ನ ದೇವತೆ, ನನ್ನ ಮೇಲೆ ದಯೆಯಿಡು, ಕೃಪೆಮಾಡು" ಎಂದು ಬೇಡಿಕೊಂಡರು. ಅವನನ್ನು ಬಿಗಿದಪ್ಪಿ ನಲಿದಾಡಿದರು. ಆ ಚಿಕ್ಕ ಮಗುವು ಅವನ ಆಟಕ್ಕೆ ಬೆದರದೆ ಕಿಲಿಕಿಲನೆ ನಗತೊಡಗಿತು.

ನವದಂಪತಿಗಳು ನಮಸ್ಕರಿಸಿದರು—ಆಶೀರ್ವಾದ ಬೇಡಿದರು. ಯತಿಗಳು ಖಿನ್ನರಾಗಿ ನಕ್ಕು "ನಾನೊಬ್ಬ ಪಾಮರನು. ನನ್ನ ಆಶೀರ್ವಾದದಿಂದೇನು? ಇಗೋ ಈ ದೇವತೆಯನ್ನು ಬೇಡಿ, ನನ್ನನ್ನೂ, ನಿಮ್ಮನ್ನು ಕಾಪಾಡುವ ಈ ವೇದಮೂರ್ತಿಯನ್ನು ಕೇಳಿ. ಎಲ್ಲಿ ಪ್ರೇಮವೋ ಅಲ್ಲಿ ದೇವರೆಂಬುದನ್ನು ಮರೆಯಬೇಡಿ. ದೇವ, ಅನಾಥರಕ್ಷಕಾ, ದಯಮಾಡಿ ಎಲ್ಲರನ್ನೂ ಕಾಪಾಡು" ಎಂದು ಆಶೀರ್ವದಿಸಿ, ಆ ಮಗುವಿನೊಡನಾಡಲು ತೊಡಗಿದರು. ಅದರೊಂದಿಗೆ ಆಟವಾಡುವಾಗ ಅವರು ಈ ಬಾಹ್ಯ ಪ್ರಪಂಚವನ್ನೇ ಮರೆತಂತೆ ತೋರುತ್ತಿತ್ತು.

ಅವರ ಹುಚ್ಚನ್ನು ನೋಡಿ ನನಗೆ ಮೊದಲು ಅಯ್ಯೋ ಎನಿಸಿದರೂ ತಪ್ಪಿಗೆ ತಕ್ಕ ಪ್ರಾಯಶ್ಚಿತ್ತಹೊಂದಿ, ಪರಿಶುದ್ಧರಾದ ಮೂರ್ತಿಗೆ ನಾನೂ ನಮಿಸಿದೆ.

ಮನೆಗೆಬಂದು ಅವರ ಕತೆಯನ್ನೆಲ್ಲಾ ನನ್ನ ಸ್ನೇಹಿತನಿಗೂ ಹೇಳಿದ ಮೇಲೆ ಅವನೂ ಬೆಚ್ಚಿಬಿದ್ದು ಮರುಗಿದ.

ಮಾನವ ಪ್ರಯತ್ನಗಳಿಗೆ ಸಿಲುಕದ ದೈವಶಕ್ತಿಯೊಂದಿಲ್ಲವೆನ್ನುವವರಾರು? ಅಂದೆಲ್ಲಾ ನಮ್ಮ ಕಿವಿಯಲ್ಲಿ "**ಎಲ್ಲಿ ಪ್ರೇಮವೋ ಅಲ್ಲಿ ದೇವರು**" ಎಂದು ಕೇಳಿಸುತ್ತಿತ್ತು.

ಓಂ ಶಾಂತಿಃ ಶಾಂತಿಃ ಶಾಂತಿಃ

ಗಮನಿಸಿರಿ !    ಮರೆತೀರಿ !!

ನೀವು ನಿಮ್ಮ ಆಶ್ರಿತರ ರಕ್ಷಣೆಗಾಗಿಯೂ, ವೃದ್ಧಾಪ್ಯದಲ್ಲಿ ಸುಖಪಡುವುದಕ್ಕೂ ಆಪದ್ಧನವನ್ನು ಕೂಡಿಡಬೇಕಲ್ಲವೆ ?

●

ಹಾಗಾದರೆ ಇಂದೇ :

## ಮೈಸೂರು ಸರಕಾರದ ಇನ್ಷೂರೆನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿಯೇ ವಿಮೆ ಮಾಡಿರಿ.

●

ಏಕೆಂದರೆ ?

ಈ ವಿಮಾ ಹಣಕ್ಕೆ ಮೈಸೂರು ಸರ್ಕಾರದ ರೆವೆನ್ಯೂ ಹುಟ್ಟುವಳಿಯೇ ಆಧಾರ.

●

ಕೆ. ಎನ್. ನರಸಿಂಹಮೂರ್ತಿ,
ಹೆಲ್ಪರ್,
ಮೈಸೂರು ಸರ್ಕಾರದ ಇನ್ಷೂರೆನ್ಸ್ ಡಿಪಾರ್ಟ್‌ಮೆಂಟ್,
ಶೇಷಾಲಯ, ಬಡಾವಣೆ, ಮಂಡ್ಯ.

# ಬಾಲಪ್ರಪಂಚ

ಸುಪ್ರಸಿದ್ಧ ಸಾಹಿತಿಗಳಾದ

ಶ್ರೀ|| ಶಿವರಾಮಕಾರಂತರಿಂದ ಬರೆಯಲ್ಪಟ್ಟು ಸತ್ಯಶೋಧನ ಪುಸ್ತಕ ಭಂಡಾರದವರು ಸಾವಿರಾರು ಚಿತ್ರಗಳಿಂದೊಡಗೂಡಿ ೧೮೦೦ ಪುಟಗಳಲ್ಲಿ ಸುಂದರವಾಗಿ ಪ್ರಕಟಿಸಿರುವ ಪುಸ್ತಕ. ಇದು ಮನೆಯಲ್ಲಿದ್ದರೆ, ವಿಶ್ವದ ಜ್ಞಾನಭಂಡಾರವು ಮನೆಯಲ್ಲಿದ್ದಂತೆ.

ಮೂರು ಸಂಪುಟಗಳ ಬೆಲೆ : ೩೬ ರೂಪಾಯಿಗಳು. (ಅಂಚೆವೆಚ್ಚ ಪ್ರತ್ಯೇಕ.)

ಇಂದೇ ನಿಮ್ಮ ಪ್ರತಿಗಳಿಗೆ ಆರ್ಡರ್ ಮಾಡಿರಿ.

ನಮ್ಮಲ್ಲಿ ಎಲ್ಲಾ ತರದ ಕನ್ನಡ ಪುಸ್ತಕಗಳೂ ದೊರೆಯುತ್ತವೆ.

**ಸರಸ್ವತಿ ಪುಸ್ತಕ ಭಂಡಾರ,**
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು,
ಮಂಡ್ಯ. (ಮೈಸೂರು ಸಂಸ್ಥಾನ)

---

ಸ್ವದೇಶೀ ಕೈಗಾರಿಕೆಯನ್ನೇ ಪ್ರೋತ್ಸಾಹಿಸಿರಿ.

ಬೆಲೆ ಸುಲಭ! ಶುದ್ಧ ಸ್ವದೇಶಿ !!

ಮೈಸೂರು, ಮದರಾಸು ಮುಂತಾದ ಅನೇಕ ವಸ್ತುಪ್ರದರ್ಶನಗಳಲ್ಲಿ ಚಿನ್ನದ ಮತ್ತು ಬೆಳ್ಳಿಯ ಪದಕಗಳನ್ನೂ ಮತ್ತು ಅನೇಕ ಪ್ರಶಸ್ತಿಪತ್ರಗಳನ್ನೂ ಪಡೆದಿರುವ,

**M. Ramasanjeeva Setty Sons & Co.,**
Toys Manufacturers & General Merchants,
CHANNAPATNA. (Mysore State)

ರವರಲ್ಲಿ ಸುಲಭವಾದ ಬೆಲೆಗೆ ಅತ್ಯುತ್ತಮವಾದ ಎಲ್ಲಾ ವಿಧವಾದ ಬಣ್ಣದ ಸಾಮಾನುಗಳೂ, (ರೂಲರ್ಸ್, ಪೆನ್ ಹೋಲ್ಡರ್ಸ್ ಮತ್ತು ರಬ್ಬರ್‌ಸ್ಟಾಂಪ್ ಪಿಡಿಗಳೂ) ಪಂತದ ಸಾಮಾನುಗಳೂ, ಅತ್ಯುತ್ತಮವಾದ ಊದುಬತ್ತಿಗಳೂ, ಹಸನಾದ ಗುಲಾಬಿ ಹೂವಿನ ಗುಲ್ಕರ್ ಮತ್ತು "ಸುಪ್ರಭಾ ಅಡಿಕೆ ಪುಡಿ" ಸಹ ದೊರೆಯುತ್ತವೆ.

ಒಂದು ಸಲ ಪರೀಕ್ಷಿಸಿ ನೋಡಿ.